ಶ್ರೀ ಕೆ. ಕೆಂಚಪ್ಪ.—ಬರೀ ಜವಾನರುಗಳಿಗೇ ಮಾಡಿಸಿದ್ದೀರೋ? ಕೈಯಿಂದ ತಯಾರಿಸಿದ ಪೇಪರ್‌ಗೆ ಉತ್ತೇಜನ ಕೊಟ್ಟಿದ್ದೀರೋ? ಅದನ್ನು ಕೆಲವು ಗ್ರಾಮೋದ್ಯೋಗಗಳಲ್ಲಿ ಮಾಡುತ್ತಿದ್ದಾರೆ. ನಿಜವಾಗಿ ಗಾಂಧಿಜಿಯವರು ಹಾಕಿಕೊಟ್ಟ ತತ್ವವನ್ನು ಬದಲಾವಣೆ ಮಾಡುತ್ತಿದ್ದೀರಿ. ಇಂತಹ ನಟನೆ ಏರಿ ಹೋಗುವುದಿಲ್ಲ. ನಾವು ಪ್ರಾಮಾಣಿಕರಾಗಿರಬೇಕಾಗಿ ಬರುತ್ತದೆ. ಕೈಯಿಂದ ಮಾಡಿದ ಖಾದೀ ಬಟ್ಟೆಗಳನ್ನು ಉಪಯೋಗಿಸುವುದನ್ನು ಮೊದಲು ಕಲಿತುಕೊಳ್ಳಬೇಕು ನಾನು ಹೆಚ್ಚಿಗೆ ಹೇಳುವುದಕ್ಕೆ ತಯಾರಾಗಿಲ್ಲ. ನಾವು ಮೊದಲು ಪ್ರಾಮಾಣಿಕರಾಗಿರಬೇಕು. ಮುಖ್ಯವಾಗಿ Training and Educational Centres in regard to Khadi ಮತ್ತು Manufacturing of utilitarian glass wares, development of pottery ಇವಕ್ಕೆ ಮೊದಲು ಗಮನ ಕೊಡಬೇಕು. ಇವೆಲ್ಲವನ್ನೂ ಜನಸಾಮಾನ್ಯರು ಉಪಯೋಗಿಸುತ್ತಾರೆ. ಕಾಂಪಿಟಿಷನ್ ಮೂಲಕ ಎಷ್ಟೋ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬಹುದು. ಖಾದಿಯ ಜೊತೆಗೆ ಮ್ಯಾಟ್ ವೀವಿಂಗ್ ಇಂಡಸ್ಟ್ರೀಸಿಗೆ ಉತ್ತೇಜನ ಕೊಡಿ. ಮ್ಯಾಟ್ ವೀವಿಂಗ್, ಊದುಬತ್ತಿ ಇವೆಲ್ಲವೂ ಕೈಯಿಂದ ಆಗುವ ಕೈಗಾರಿಕೆಗಳು. ಇವೆಲ್ಲವೂ ಉತ್ಪಾದನಾ ದೃಷ್ಟಿಯಿಂದ ಜನಗಳಿಂದ ನಡೆಯತಕ್ಕವು. ಸಮಾಜದಲ್ಲಿ ಕೈಗಾರಿಕೆಗಳು ಈ ರೀತಿಯಲ್ಲೂ ಅಭಿವೃದ್ಧಿಯಾಗಬೇಕು. ಚಿತ್ರದುರ್ಗದಲ್ಲಿ ಮ್ಯಾಟ್‌ವೀವಿಂಗ್ ಇಂಡಸ್ಟ್ರೀಸ್ ಚೆನ್ನಾಗಿ ನಡೆಯುತ್ತಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಇದನ್ನು ಮ್ಯಾನೇಜ್ ಮಾಡುವಾಗ ಬಹಳ ಜನರು ಈ ಕೈಗಾರಿಕೆಯಿಂದಲೇ ಜೀವಿಸುತ್ತಿದ್ದರು. ಈಗ ಈ ಕೈಗಾರಿಕೆಯನ್ನು ಮಾಡುವವರು ಅಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಸರ್ಕಾರದವರು ಅಂಕಿ ಅಂಶಗಳನ್ನು ತೆಗೆದುಕೊಂಡು ಈ ಕೈಗಾರಿಕೆಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕು. Mat weaving is one of the essential industries which has no competition from factory-made goods. ಈ ಕೈಗಾರಿಕೆ ಮುಖ್ಯವಾಗಿ ಡೆವಲಪ್ ಆಗಬೇಕಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಇದೂ ಒಂದು ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿದೆ. ಖಾದಿ ಕೈಗಾರಿಕೆ ಸ್ವಾವಲಂಬನ ಪದ್ಧತಿಯ ಮೇಲೆ ನಡೆಯಬೇಕೆಂದು ಗಾಂಧೀಜಿ ಹೇಳಿದ್ದರೂ ಸರ್ಕಾರ ಈ ಸಂಬಂಧದಲ್ಲಿ ಏನೂ ಮಾಡಲಿಲ್ಲ. ಯಾವ ಗೃಹಕೈಗಾರಿಕೆಗಳಿಗೆ ಯಂತ್ರಗಳಿಂದ ಸ್ಪರ್ಧೆ ಇದೆಯೋ ಅವಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಆಗ ಆ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತವೆ. ತಮಗೆ ಖಂಡಿತವಾಗಿ ಖಾದಿಯ ಅಭಿವೃದ್ಧಿ ವಿಚಾರದಲ್ಲಿ ನಂಬಿಕೆ ಇಲ್ಲ. 1948ನೆಯ ಇಸವಿಯಲ್ಲಿ ಖಾದೀ ಉದ್ಯಮ ಪ್ರಚಾರಕ್ಕಾಗಿ ಕಾಂಗ್ರೆಸಿನವರು ಒಂದು ಎಕ್ಸ್ಕ್ವೈರಿ ಕಮಿಟಿಯನ್ನು ಮಾಡಿದರು. ಆದರೂ ನಮ್ಮ ದೇಶದಲ್ಲಿ ಖಾದಿ ಅಭಿವೃದ್ಧಿಯಾಗುವ ವಿಚಾರದಲ್ಲಿ ನಮಗೆ ನಂಬಿಕೆಯಿಲ್ಲ. ಸರ್ಕಾರಕ್ಕೆ ಖಾದಿಯಲ್ಲಿ ನಿಜವಾಗಿಯೂ ನಂಬಿಕೆ ಇದ್ದರೆ ಅದರ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಒದಗಿಸಲಿ ಇಲ್ಲದಿದ್ದರೆ ಆ ಉದ್ಯಮವನ್ನು ವಜಾ ಮಾಡಲಿ, ಎಂದು ಹೇಳುತ್ತೇನೆ.

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಏನಾದರೂ ಖಾದಿ ಅಭಿವೃದ್ಧಿ ಮಾಡಬಾರದು ಎಂದು ಹೇಳಿದ್ದರೆ ಹೇಳಿ. ಖಾದಿ ಕಮಿಟಿಯಿಂದ ಎಷ್ಟೋ ಜನಕ್ಕೆ ಉಪಯೋಗವಾಗುತ್ತದೆ ಎಂದು ಹೇಳಿದರು. ಏತಕ್ಕೆ ಈ ಬೂಟಾಟಿಕೆ ಸ್ವಾಮಿ. ಖಂಡಿತಾ ಹೇಳುತ್ತೇನೆ, ನಂಬಿಕೆ ಇದ್ದರೆ ಮಾಡಿ, ಇಲ್ಲದಿದ್ದರೆ ಬಿಡಿ. ಆದರೆ ಹೇಳುವುದುದೊಂದು ಮಾಡುವುದೊಂದು ಇರಬಾರದು. ಖಾದಿ ಉದ್ಯಮಕ್ಕೆ ಕೊಟ್ಟಿರತಕ್ಕ ದುಡ್ಡು ಬಹಳ ಕಡಮೆಇದೆ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಇದನ್ನು ಖಂಡಿತವಾಗಿಯೂ ಕಳಕಳಿಯಿಂದ ಹೇಳುತ್ತಿದೇನೆ. ಇದನ್ನು ಖಂಡಿತವಾಗಿಯೂ ಮಾನವೀಯತೆಯಿಂದ ಯೋಚನೆ ಮಾಡಬೇಕಾಗಿ ಬರುತ್ತದೆ. ನಾವು ಸ್ವಾವಲಂಬನ ದೃಷ್ಟಿಯಿಂದ ದುಡ್ಡು ಖರ್ಚು ಮಾಡಬೇಕು. ಯಾರು ಪ್ರತಿಯೊಬ್ಬರೂ ನೂಲುತ್ತಾರೋ, ನೇಯುತ್ತಾರೋ, ಅವರಲ್ಲಿ ಪ್ರಚಾರ ಕಾರ್ಯಮಾಡಿ ಎಷ್ಟುಮಟ್ಟಿಗೆ ಉಪಯೋಗವಾಗಿದೆ ಎಂದು ಅಂಕಿ ಅಂಶಗಳನ್ನು ಕೊಡಿ

ಸುಮ್ಮನೆ ಕಮಿಟಿ ಮಾಡಿರುವುದರಿಂದ ಏನು ಪ್ರಯೋಜನ ಸ್ವಾಮಿ ? These are times of plans by scheming people.

*Sri V. P. DEENADAYALU NAIDU (Cubbonpet).—I just want to pass on one information to him. This is what is stated in the Report on Industry in Mysore :

> "The development of rural and cottage industries has thus been a special feature of the policy of Government in recent years. The Mysore Government is unique in regarding the development of the Khadi industry as falling within the sphere of the State's activities and in giving it a place among the key industries."

ಶ್ರೀ ಕೆ. ಕೆಂಚಪ್ಪ.—ಇನ್ನು ಹೆಚ್ಚಿಗೆ ಹೇಳುವುದಿಲ್ಲ. These are days of preparing plans by scheming people. We have got to be careful...

ಇನ್ನು ಕೈಗಾರಿಕೆಗಳ ವಿಚಾರ ನೋಡಿದರೆ ಒಂದು ವಿಷಯ ಮನಸ್ಸಿಗೆ ಬರುತ್ತದೆ. ಅದನ್ನು ಕೊನೆಯಲ್ಲಿ ಹೇಳಿ ಮುಗಿಸುತ್ತೇನೆ. ಅದು ಬರೀ ನೀರಿನ ನಲ್ಲಿ ಸ್ವಾಮಿ.

[Sri L. B. Birje spoke in Marathi. His speech appears in the Appendix number to this volume].

1-30 P.M.

ಶ್ರೀ ಎ. ಆರ್. ಬದರಿನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಸಭಾಪತಿಗಳೆ, ಈ ದಿವಸ ನಮ್ಮ ಮುಂದೆ 22 ಬೇಡಿಕೆಗಳಿವೆ. ಈ 22 ಬೇಡಿಕೆಗಳನ್ನು ಕೂಡ ಅನುಮೋದಿಸುತ್ತಾ ನಾನು ಮೂರು ವಿಚಾರಗಳಲ್ಲಿ ಮಾತ್ರ ಮಾತನಾಡುತ್ತೇನೆ. ಮೊದಲನೆಯದಾಗಿ ಕೈಗಾರಿಕೆಗಳು, ಎರಡನೆಯದಾಗಿ ಅರಣ್ಯಖಾತೆ ಮತ್ತು ಮೂರನೆಯದಾಗಿ ವಿದ್ಯುಚ್ಛಕ್ತಿ ಯೋಜನೆ. ಕೈಗಾರಿಕೆಗಳ ವಿಚಾರದಲ್ಲಿ ನಾನು ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಹೆಚ್ಚಿನ ಭಾಗದ ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ ; ಸುಮಾರು ಶೇಕಡ 70 ಭಾಗ ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಈ ವ್ಯವಸಾಯದಲ್ಲಿ ನಿರತರಾಗಿರತಕ್ಕಂಥವರಿಗೆ ವರ್ಷಕ್ಕೆ ಆರು ತಿಂಗಳ ಕಾಲ ಜೀವನಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ ವರಮಾನವಿಲ್ಲ ಎನ್ನುವುದನ್ನು ನಾವೆಲ್ಲರೂ ಕೂಡ ಅರಿತಿದ್ದೇವೆ. ಆದ್ದರಿಂದ ವ್ಯವಸಾಯದಲ್ಲಿ ನಿರತರಾಗಿರತಕ್ಕವರಿಗೆ ಅವರ ವರಮಾನವನ್ನು ಹೆಚ್ಚಿಸುವ ಬಗ್ಗೆ ಮತ್ತು ಅವರ ಜೀವನದ ವ ಟ್ಟವನ್ನು ಹೆಚ್ಚಿಸುವುದಕ್ಕೆ ತಕ್ಕಂಥ ಕೈಗಾರಿಕೆಗಳು ಎಷ್ಟು ಅವಶ್ಯವೆಂಬುದನ್ನು ನಾನು ಹೇಳಬೇಕಾಗಿಲ್ಲ. ಮಲೆನಾಡಿನ ವಿಚಾರದಲ್ಲಿ ಹೇಳಬೇಕಾದರೆ ಮಲೆನಾಡಿನಲ್ಲಿ ಸಾಕಾದಷ್ಟು ಗೃಹ ಕೈಗಾರಿಕೆಗಳಿಗೆ ಅನುಕೂಲವಿದೆ ಮತ್ತು ಅವಕಾಶವಿದೆ. ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಮಲೆನಾಡಿನಲ್ಲಿ ಬೇಕಾದಷ್ಟು ಬೊಂಬು ಸಮೃದ್ಧಿಯಿಂದ ಇದೆಯೆನ್ನುವುದನ್ನು ನಾನು ಹೇಳಬೇಕಾಗಿಲ್ಲ. ಅಲ್ಲದೆ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಬೇಕಾದಂಥ ಸಾಮಾಗ್ರಿಗಳು, ಕಚ್ಚಾ ಸಾಮಾಗ್ರಿಗಳು ಕೂಡ ಹೇರಳವಾಗಿ ಮಲೆನಾಡಿನಲ್ಲಿ ಸಿಕ್ಕುತ್ತವೆ. ಪಾಟರೀಸ್‌ಗೆ ಬೇಕಾದಂಥ ಮಣ್ಣುಗಳು, ಸೋಪ್ ಸ್ಟೋನ್ ಎಂಬುದು ಅಂದರೆ ವಿಗ್ರಹಗಳು ಮತ್ತು ಸಂಸಾರಕ್ಕೆ ಬೇಕಾದಂಥ ಸಾಮಾಗ್ರಿಗಳನ್ನು ಮಾಡಲು ಉಪಯೋಗಿಸುವ ವಸ್ತು ಕೂಡ ಹೇರಳವಾಗಿ ಮಲೆನಾಡಿನಲ್ಲಿ ಸಿಕ್ಕುತ್ತದೆ. ಅಲ್ಲದೆ ಇನ್ನೂ ಅನುಕೂಲಕ್ಕೆ ಬೇಕಾದಂಥ ರಾ ಮೆಟೀರಿಯಲ್ಸ್ ಸಿಕ್ಕುತ್ತವೆ; ಮರಮುಟ್ಟುಗಳು ಬೇಕಾದಷ್ಟು ಕಾಡಿನಲ್ಲಿ ಸಿಕ್ಕುತ್ತವೆ. ಪಿಂಗಾಣಿ ಸಾಮಾನು ಮಾಡಿದರೆ ಅದರಿಂದಲೂ ಕೂಡ ಬಹಳ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಜಪಾನಿನಲ್ಲಿರುವ ಹಾಗೆ ಹಳ್ಳಿ ಹಳ್ಳಿಗಳಲ್ಲೂ ಕೂಡ ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುವ ಕಚ್ಚಾ ಸಾಮಾನುಗಳನ್ನು ಉಪಯೋಗಿಸಿ ವ್ಯವಸಾಯದಲ್ಲಿ ನಿರತರಾಗಿರುವವರಿಗೆ ಇನ್ನೂ ಹೆಚ್ಚು ವರಮಾನ ಬರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ.

ಗುಡಿಗಾರರ ವಿಚಾರ ಹೇಳುವುದಾದರೆ—ಗುಡಿಗಾರರು ಎಂದರೆ ಶಿಲ್ಪಿಗಳಾಗಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ಕಲಾ ಕೌಶಲ್ಯವನ್ನು ತೋರಿಸಿರುವರು —ವಿಧಾನ ಸೌಧ ಮುಂತಾದ ಕಟ್ಟಡಗಳಲ್ಲಿ ಕಲಾ ಕೌಶಲವನ್ನು ಬೇಕಾದಷ್ಟು ತೋರಿಸಿ ಹೆಸರುವಾಸಿಯಾಗಿ ಸಾಗರ, ಸೊರಬ, ಸಿದ್ದಾಪುರ ಮತ್ತು ಕುಮಟ ಪ್ರದೇಶಗಳಲ್ಲಿರುವ ಗುಡಿಗಾರರು ನಶಿಸಿ ಹೋಗುತ್ತಿದ್ದಾರೆ. ಈಗ ಅವರು ಮೈಸೂರು ದೇಶದಲ್ಲಿ ಬಹಳ ಮಟ್ಟಿಗೆ ಕಡಮೆಯಾಗಿದ್ದಾರೆ. ನನಗೆ ಗೊತ್ತಿರುವ ಹಾಗೆ ಸುಮಾರು ಮುನ್ನೂರು ಗುಡಿಗಾರರ ಮನೆಗಳಿದ್ದುವು, ಕ್ರಮೇಣ ಈ ಜನರ ಸಂಖ್ಯೆ ಕಡಮೆಯಾಗುತ್ತಿದೆ; ಅವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿಲ್ಲ. ಈಗ ಅವರ ಕೆಲಸ ಕೆಳಗಿನ ಮಟ್ಟಕ್ಕೆ ಬಂದಿದೆ. ಅವರು ಮಾಡಿದ ಪದಾರ್ಥಗಳು ಮಾರಾಟವಾಗದೆ ಅವರ ಕಸಬನ್ನು ಮುಂದುವರಿಸಲು ಆರ್ಥಿಕವಾಗಿ ತೊಂದರೆಯಾಗಿದೆ. ಅವರು ಒಳ್ಳೊಳ್ಳೆಯ ಡಿಸೈನ್ ತಯಾರಿಸಿ ವಿಧಾನಸೌಧ ಮುಂತಾದ ಕಡೆ ತಮ್ಮ ಕಲಾ ನೈಪುಣ್ಯವನ್ನು ತೋರಿಸಿದ್ದಾರೆ. ಅವರಿಗೆ ತಕ್ಕ ಪ್ರೋತ್ಸಾಹ, ತರಪೇತು ಕೊಟ್ಟು ಗುಡಿಗಾರರ ಕಲೆಯನ್ನು, ಗಂಧದ ಮರದಲ್ಲಿ ಮಾಡುವ ಕೆತ್ತನೆ ಕೆಲಸ ಮುಂತಾದ್ದನ್ನು ಮುಂದುವರಿಸಬೇಕು. ಅವರು ಬೇಕಾದ ಸಾಮಾನುಗಳನ್ನು ತಯಾರುಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕು, ಅವರು ತಯಾರುಮಾಡಿದ ಪದಾರ್ಥಗಳನ್ನು ಸರ್ಕಾರದವರು ಕೊಂಡು ಅವರಿಗೆ ಸಕಾಲದಲ್ಲಿ ಹಣ ಒದಗಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಅಲ್ಲದೆ, ಮಲೆನಾಡಿನಲ್ಲಿ ಜೋಗಿನ ಹತ್ತಿರ ಹಿಂದೆ ರೇಯಾನ್ ಇಂಡಸ್ಟ್ರಿ ಮಾಡಬೇಕೆಂಬ ಯೋಜನೆಯಿತ್ತು, ಅದೇಕೆ ನಿಂತು ಹೋಯಿತೋ ಗೊತ್ತಿಲ್ಲ, ಬಹುಶಃ ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಂಡು ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬುತ್ತೇನೆ.

ಕಾಗದದ ಕಾರ್ಖಾನೆ ಭದ್ರಾವತಿಯಲ್ಲಿ ಒಂದು ಮಾತ್ರ ಇದೆ. ಕಾರವಾರ ಮತ್ತು ಮಂಗಳೂರು ನಮ್ಮ ದೇಶಕ್ಕೆ ಸೇರಿದ ಮೇಲೆ ಅಲ್ಲಿ ಹೆಚ್ಚಿನ ಅಭಿವೃದ್ಧಿ

(ಶ್ರೀ ಎ. ಆರ್. ಬಧರೀನಾರಾಯಣ್)

ಕಾರ್ಯ ಮಾಡುವುದಕ್ಕೆ ಅವಕಾಶವಿದೆ, ಕಾಗದದ ಕಾರ್ಖಾನೆ ಅಲ್ಲಿ ತೆರೆಯಲು ಸಾಧ್ಯವಿದೆ, ಅದನ್ನು ಸ್ಥಾಪನೆ ಮಾಡುವುದಕ್ಕೆ ಜನರು ಮುಂದೆ ಬರುತ್ತಿದ್ದಾರೆ ಎಂದು ತಿಳಿಸಿದೆ. ಅದಕ್ಕೆ ಸಾಕಷ್ಟು ಪ್ರೋತ್ಸಾಹ, ಸರಕಾರದಿಂದ ರಕ್ಷಣೆ ಕೊಟ್ಟರೆ ಹೆಚ್ಚಿನ ಜನರು ಮುಂದೆ ಬಂದು ಕಾಗದದ ಕಾರ್ಖಾನೆ ಸ್ಥಾಪನೆಮಾಡುವುದಕ್ಕೆ ಸಿದ್ಧರಾಗಿದ್ದಾರೆಂದು ತಿಳಿದುಬಂದಿದೆ.

ಅಲ್ಲದೆ ಶಿವಮೊಗ್ಗಾದಲ್ಲಿ ಅಲ್ಯೂಮಿನಿಯಂ ಇಂಡಸ್ಟ್ರಿ ಷುರು ಮಾಡಬೇಕೆಂದು ಹಿಂದೆ ಸಂಶೋಧನೆ ನಡೆದಿತ್ತು. ಅದನ್ನೇಕೆ ಕೈಬಿಟ್ಟಿದ್ದಾರೋ ತಿಳಿಯದು. ಈಗಲಾದರೂ ಸರ್ಕಾರದವರು ಅದಕ್ಕೆ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅಲ್ಲದೆ ನಮ್ಮ ಮಲೆನಾಡು ಭಾಗದಲ್ಲಿ ಒಂದು ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದೆ. ಈ ಸಕ್ಕರೆ ಕಾರ್ಖಾನೆಗೆ ಪೂರ್ವ ಆಫ್ರಿಕದಿಂದ ಒಬ್ಬ ದೊಡ್ಡ ಕೈಗಾರಿಕೋದ್ಯಮಿಗಳು, ನಮ್ಮ ದೇಶಕ್ಕೆ ಆಗಮಿಸಿ ಇಲ್ಲಿ ಒಂದು ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ, ಕೇವಲ ಒಂದೆರಡು ವರ್ಷಗಳಲ್ಲಿ ಅವರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಇವೊತ್ತಿನ ದಿವಸ ಅವರ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆಯನ್ನು ತಯಾರಿಸುವ ಬಗ್ಗೆ ಇತರ ಕಡೆಗಳಲ್ಲಿ ಕೊಟ್ಟಿರುವ ಸೌಕರ್ಯಗಳನ್ನು ಕೊಟ್ಟಿಲ್ಲ. ಅವರಿಗೆ ಸುಮಾರು 700 ಎಕರೆಗಳಷ್ಟು ಜಮೀನು ಮಾತ್ರ ಕಬ್ಬಿನ ಸಾಗುವಳಿಗೆ ಮುಂದಿನ ವರ್ಷ ಸಿಕ್ಕುವುದಾಗಿ ಕೇಳಿದೆ. ಇದರ ಲೆಕ್ಕದಿಂದ ಅವರಿಗೆ ದಿನಕ್ಕೆ 50 ಎಕರೆಗಳಷ್ಟು ಕಬ್ಬು ಬೇಕಾಗುತ್ತದೆ; ಮತ್ತು ಸುಮಾರು ದಿನಕ್ಕೆ 1,500 ಟನ್ನುಗಳಷ್ಟು ಸಕ್ಕರೆಯನ್ನು ತಯಾರುಮಾಡುವಶಕ್ತಿ ಅವರಿಗಿದೆ. ಇನ್ನು ಐದು ಹತ್ತು ವರ್ಷಗಳಾದರೂ ಅವರಿಗೆ ಸಾಕಾದಷ್ಟು ಪ್ರಮಾಣದಲ್ಲಿ ಕಬ್ಬು ದೊರಕಲು ಸಹಾಯ ಮಾಡಬೇಕಾಗಿದೆ. ಅವರೂ ಕೂಡ ಸರಕಾರದಿಂದ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ತೆಗೆದುಕೊಂಡು ಅದನ್ನು ಫಲವತ್ತಾದ ಜಮೀನುಗಳನ್ನಾಗಿಮಾಡಲು ಮತ್ತು ಅವರಿಗೆ ಬೇಕಾದ ಕಬ್ಬು ಬೆಳೆಯಲು, ಅವರೇ ಬುಲ್‌ಡೋಜರ್ ಗಳನ್ನು ತಂದು ಒಂದು ಹದಕ್ಕೆ ತಂದಿದ್ದಾರೆ; ಮತ್ತು ಬಹಳವಾಗಿ ಕೆಲಸ ಮಾಡಿ ಕಬ್ಬನ್ನು ಬೆಳೆಯಲು ಪ್ರಯತ್ನ ಮಾಡಿದ್ದಾರೆ. ಈ ಕಡೆಗೆ ಸರಕಾರದವರು ಆದಷ್ಟು ಗಮನ ಕೊಡಬೇಕು. ಏಕೆಂದರೆ ನಮ್ಮಲ್ಲಿ ಬೇಕಾದಷ್ಟು ಅರಣ್ಯ ಜಮೀನುಗಳಿವೆ. ಇಂತಹ ಜಮೀನುಗಳಲ್ಲಿ ಮರ, ಗಿಡಗಳು, ಬಂಡೆಗಳು ಹೆಚ್ಚಾಗಿರುವುದರಿಂದ ಇದನ್ನು ಸರಿಪಡಿಸಲು ಬುಲ್‌ಡೋಜರುಗಳ ಮತ್ತು ಟ್ರಾಕ್ಟರುಗಳ ಅಗತ್ಯವಿರುತ್ತದೆ. ಹೀಗೆ ಉಳುಮೆಮಾಡಲು ಎಕರೆ ಒಂದಕ್ಕೆ ಒಂದು ಸಾವಿರ ರೂಪಾಯಿಗಳ ಮೇಲೆ ಖರ್ಚುಬೀಳುತ್ತದೆ. ಹೀಗೆ ಹೊರಗಡೆಯಿಂದ ಇಲ್ಲಿಗೆ ಬಂದು ನಮ್ಮಲ್ಲಿ ಖಾಸಗಿಯಾಗಿ ಇಷ್ಟು ಹಣವನ್ನು ಖರ್ಚುಮಾಡಿ ಸಾಗುವಳಿ ಮಾಡುವುದಕ್ಕೆ ಅವರಿಗೆ ಶಕ್ತಿಯಿದೆ. ನಮ್ಮಲ್ಲಿ ಹಾಗೆ ಕೆಲಸ ಮಾಡುವವರು ಸಿಕ್ಕುವುದಿಲ್ಲ ಎಂಬುದನ್ನು ನಾವು ಯೋಚನೆಮಾಡಬೇಕು. ಹೀಗಿರುವುದರಿಂದ ಹೇರಳವಾಗಿ ಸಿಕ್ಕುಬಹುದಾದ ಈಗುಡ್ಡ ಬೆಟ್ಟಗಳ ಜಮೀನುಗಳನ್ನು ಸಾಗುವಳಿಗೆ ಯೋಗ್ಯವಾಗಿ ಮಾಡುವುದರಿಂದ ಅವರ ಒಂದು ಇಂಡಸ್ಟ್ರಿಯು ಮುಂದುವರಿಯುವುದಕ್ಕೆ ಮತ್ತು ದೇಶದ ಸಂಪತ್ತು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಿ. ವೆಂಕಟಪ್ಪ (ವಿದ್ಯಾಶಾಖೆಯ ಮಂತ್ರಿಗಳು).—ಅವರಿಗೇ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ.

ಶ್ರೀ ಎ. ಆರ್. ಬದರೀನಾರಾಯಣ್.—ಆದರೆ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು. ನಮಗೆ ಈಗ ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯ ಶಕ್ತಿ ಎಷ್ಟಿದೆ ಎನ್ನುವುದು ಗೊತ್ತಿದೆ. ಅಲ್ಲದೆ ಈ ಕಾರ್ಖಾನೆಯವರೇ ಸ್ವಂತವಾಗಿ ಕಬ್ಬನ್ನು ಬೆಳೆಯುವುದಕ್ಕೆ ಅವಕಾಶಮಾಡಿವೆ. ಹಾಗೆಯೇ ಇವರಿಗೂ ಕೂಡಬೇಕು ಎಂದು ಹೇಳಿದೆ. ಹೀಗೆ ಬೇಕಾದಷ್ಟು ಅರಣ್ಯ ಪ್ರದೇಶಗಳನ್ನು ಫಲವತ್ತಾಗಿಮಾಡಿ ಕಬ್ಬಿನ ಬೆಳೆಯನ್ನು ಬೆಳೆಯಲು ಯಾರೂ ಇಲ್ಲಿಯವರೆಗೆ ಬರಲಿಲ್ಲ. ಯಾರಿಗೆ enterprise ಇದೆಯೋ ಯಾರಿಗೆ ಹಣವನ್ನು ಖರ್ಚುಮಾಡಿ ಸಾಗುವಳಿ ಮಾಡುವುದಕ್ಕೆ ಶಕ್ತಿ ಇದೆಯೋ ಅಂತಹವರಿಗೆ ಸಹಾಯಮಾಡಿದರೆ ನಮ್ಮ ದೇಶದ ಐಶ್ವರ್ಯ ಹೆಚ್ಚುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ.

Sri H. M. CHANNABASAPPA (Krishnarajanagar).—Is he prepared to take Government as share-holders?

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ ವಿಚಾರದಲ್ಲಿ ಹೇಳಬೇಕಾದರೆ, ಆ ವಿಚಾರವನ್ನೂ ಕೂಡ ಅವರ ಪರಿಶೀಲನೆ ಮಾಡುತ್ತಿದ್ದಾರೆ; ಮತ್ತು ಮುಖ್ಯವಾಗಿ ಅವರೇ ಬಂಡವಾಳವನ್ನು ತಂದು ಹಾಕಿದ್ದಾರೆ. ಇನ್ನೂ ನಮ್ಮ ದೇಶಕ್ಕೆ ಬಂಡವಾಳವನ್ನು ತರುವವರಾಗಿದ್ದಾರೆ. ಹೀಗೆ ಇದೆ ಅವರ ಸ್ಥಿತಿಗತಿಗಳು. ಈಗಾಗಲೇ ಎರಡು ಕಡೆ ಅವರೇ ಫ್ಯಾಕ್ಟರಿಗಳನ್ನು ತೆಗೆದಿದ್ದಾರೆ. ಉತ್ತರ ದೇಶದಲ್ಲಿ ಒಂದುಕಡೆ ಸಿಮೆಂಟು ಫ್ಯಾಕ್ಟರಿಯನ್ನು ಕೂಡ ತೆರೆದಿದ್ದಾರೆ.

ಶ್ರೀ ಹೆಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಉತ್ತರದೇಶದಲ್ಲಿ ಎಲ್ಲಿ ತೆರೆದಿದ್ದಾರೆ?

ಶ್ರೀ ಎ. ಆರ್. ಬದರೀನಾರಾಯಣ್.—ಭೂಪಾಲ್‌ನಲ್ಲಿ ಇವರೇ ತೆರೆದಿದ್ದಾರೆ. ಅವರಿಗೆ ಸಾಕಾದಷ್ಟು ಪ್ರೋತ್ಸಾಹದೊರೆತರೆ ಅವರು ಬೇರೆಕಡೆಗಳಲ್ಲಿಯೂ ಕೂಡ ಕಾರ್ಖಾನೆಗಳನ್ನು ತೆರೆಯುವುದಕ್ಕೆ ತಕ್ಕಷ್ಟು ಶಕ್ತಿಯಿದೆ ಎಂದು ಕೇಳಿದ್ದೇನೆ. ನನಗೆ ತಿಳಿದಹಾಗೆ ಸುಮಾರು 70 ರಿಂದ 75 ಕೋಟಿ ರೂಪಾಯಿಗಳಷ್ಟು ಬಂಡವಾಳಗಾರರಾಗಿದ್ದಾರೆ; ಮತ್ತು ಹೊರಗಿನಿಂದ ಇನ್ನೂ ತಂದು ಹಾಕುವುದಕ್ಕೂ ಸಿದ್ಧರಾಗಿದ್ದಾರೆ. ಅಂತಹ ಹಣವನ್ನು ನಮ್ಮ ಸರಕಾರದವರು ತರಿಸಿಕೊಳ್ಳಲು ಅವರಿಗೆ ಸಾಕಷ್ಟು ಅವಕಾಶಗಳನ್ನು ಕೊಡಬೇಕಾದುದು ಅಗತ್ಯ. ಇಂತಹವರಿಗೆ ಪ್ರೋತ್ಸಾಹ ಕೊಟ್ಟರೆ ನಮ್ಮ ಮಲೆನಾಡಿನ ಅಭಿವೃದ್ಧಿ ಮತ್ತು ನಮ್ಮ ದೇಶದ ಅಭಿವೃದ್ಧಿ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದುದರಿಂದ ನಾವು ಪರದೇಶದಿಂದ ದುಡ್ಡಿನ ಸಹಾಯ ಒದಗುವಂತೆ ಮಾಡಲು ಸಾಕಾದಷ್ಟು ಪ್ರೋತ್ಸಾಹ ಕೊಡಬೇಕು. ಆದರೆ ದೊಡ್ಡ ಬಂಡವಾಳಗಾರರು ಎನ್ನುವ ಪ್ರಶ್ನೆ ಇದೆ. ನಮ್ಮ ಕೈಯಲ್ಲಿ ಸರಿಯಾದ ಹತೋಟಿ ಇರುವುದರಿಂದ ಅವರು ಏನೂ ಮಾಡಲಾಗುವುದಿಲ್ಲ. ನಮ್ಮಲ್ಲಿರುವ ಲೇಬರ್ ಲಾಸ್‌ಗಳು ಮತ್ತು ಇತರ ರೂಲ್ಸ್‌ಗಳನ್ನು ಅವರು ಅನುಸರಿಸುವಂತೆ ಮಾಡಬೇಕು. ಅವರ ಹಣ ನಮ್ಮಲ್ಲಿರುವುದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಹೀಗೆ ಮಾಡಿಕೊಂಡು ಅವರಿಗೆ ತಕ್ಕಷ್ಟು ಪ್ರೋತ್ಸಾಹ ಕೊಡಬೇಕಾಗಿದೆ.

ಇನ್ನೊಂದು ಮುಖ್ಯವಾದ ಸಮಸ್ಯೆ ಎಂದರೆ ಭದ್ರಾವತಿ ಕೂಲಿಕಾರರ ಸಮಸ್ಯೆ. ಇವರ ವಿಷಯವಾಗಿ ಮಾನ್ಯ ಕೈಗಾರಿಕಾ ಮಂತ್ರಿಗಳಿಗೂ ತಿಳಿಸಬೇಕಾಗಿದೆ. ಈ ಕೂಲಿಗಾರರ ಸಮಸ್ಯೆಯನ್ನು ಸರಿಯಾಗಿ ಪರಿಶೀಲಿಸಬೇಕೆಂದು ನಾನು ಒತ್ತಾಯ ಮಾಡಬೇಕಾಗಿದೆ. ಈಗ ಸರಕಾರದವರು ಬೆಂಗಳೂರು ಮತ್ತು ಇತರ ನಗರಗಳಲ್ಲಿರುವ ಕಾರ್ಖಾನೆಯ ನೌಕರರಿಗೆ ತುಟ್ಟಿಭತ್ಯವನ್ನು ಹೆಚ್ಚುಮಾಡಿ ಸಹಾಯಮಾಡಿದ್ದಾರೆ. ಅದೇರೀತಿಯಾಗಿ ಇಲ್ಲಿಯ ಕೂಲಿಗಾರರಿಗೂ ಸಹಾಯವನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ಸ್ ಎನ್ನುವುದನ್ನು ಸರಕಾರದವರು ಮಾಡಿದ್ದಾರೆ. ಇದು ಬಹಳ ಪ್ರಶಂಸನೀಯವಾದುದು. ಆದರೆ ಇದರಲ್ಲಿ ಪಾಸು ಮಾಡಿದಂಥ ವಿದ್ಯಾರ್ಥಿಗಳು ಸರಕಾರಿ ನೌಕರಿಗಾಗಿ ಓಡಾಡುತ್ತಿರುತ್ತಾರೆ. ಅದರ ಬದಲಾಗಿ ಇವರು ಹಳ್ಳಿಗಳಲ್ಲಿ ಹೋಗಿ ಅವರೇ ಬಂಡವಾಳವನ್ನು ಹಾಕಿ ಅಲ್ಲಿಯೇ ಒಂದು ಸಣ್ಣ ಸಣ್ಣ ಕೈಗಾರಿಕೆಗಳನ್ನೋ ಇಲ್ಲವೇ ಬಂಜರು ಜಮೀನುಗಳನ್ನೋ ಅಭಿವೃದ್ಧಿ ಮಾಡುವುದೋ ಮಾಡಿದರೆ ಅವರು ಮುಂದಕ್ಕೆ ಬರಲನುಕೂಲವಾಗುತ್ತದೆ. ಅವರಿಗೆ ತಕ್ಕ ಬಂಡವಾಳವನ್ನು ಕೊಡಬೇಕು, ವಿದ್ಯುಚ್ಛಕ್ತಿ ಕೊಡಬೇಕು. ಆ ಮೂಲಕ ಸಣ್ಣ ಸಣ್ಣ ಸಾಮಾನುಗಳನ್ನು ತಯಾರು ಮಾಡಲು ಅವರಿಗೆ ಪ್ರೋತ್ಸಾಹವನ್ನು ಕೊಡಬೇಕು. ಹೀಗೆ ಪ್ರೋತ್ಸಾಹ ಕೊಟ್ಟು ಸಹಾಯಮಾಡಿದರೆ ಅವರು ಸರಕಾರಿ ನೌಕರಿಗೆ ಬರಲು ಅವಕಾಶವಿರುವುದಿಲ್ಲ.

ಅರಣ್ಯದ ವಿಚಾರದಲ್ಲಿ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಎಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಈಗ ಇಪ್ಪತ್ತು ವರ್ಷಗಳಲ್ಲಿ ಯಾವರೀತಿಯಾದ ಕಾಡುಗಳಿದ್ದವೋ ಅದೇ ತರಹದಲ್ಲಿ ಈಗಲೂ ಇವೆ. ಅಲ್ಲದೆ ಈಗ ನಮ್ಮ ಮೈಸೂರಿಗೆ ಕಾರವಾರವೂ ಸೇರಿರುವುದರಿಂದ ನಮ್ಮ ಕಾಡುಗಳು ಇನ್ನೂ ವಿಸ್ತಾರವಾಗಿವೆ; ಮತ್ತು ಈ ಕಾಡುಗಳು ಯಾವರೀತಿಯಲ್ಲಿವೆ ಎಂಬುದು ಗೊತ್ತಿದೆ. ಈ ಕಾಡಿನಿಂದ ಉತ್ಕೃಷ್ಟವಾದ ಮರಮುಟ್ಟುಗಳು ಸಿಕ್ಕುತ್ತವೆ. ಈ ಕಾಡಿನಿಂದ ಸೌದೆಗಾಗಿ ಮರಗಳು ಬೈಲುಸೀಮೆಗೆ ಸರಬರಾಜು ಆಗುತ್ತಿವೆ. ಇದಕ್ಕೆ ತಕ್ಕಷ್ಟು ಹಣವನ್ನು ಒದಗಿಸಿ ಅಭಿವೃದ್ಧಿ ಪಡಿಸಿದರೆ ದೇಶದ ಸಂಪತ್ತು ಬೆಳೆಯುತ್ತದೆ. ಆದ್ದರಿಂದ ಸಾಕಷ್ಟು ಹಣವನ್ನು ಒದಗಿಸಬೇಕಾದುದು ಅಗತ್ಯ. ಕೊನೆಯದಾಗಿ ಈ ಶರಾವತಿ ಪ್ರಾಜೆಕ್ಟಿನ ಕೆಳಗಡೆ ಮುಳುಗಡೆಯಾದ ಜಮೀನುಗಳಲ್ಲಿದ್ದ ರೈತರಿಗೆ ಸರಿಯಾದ ಪರಿಹಾರವನ್ನು ಇನ್ನೂ ಒದಗಿಸಿಲ್ಲ. ಮನೆ ಮಠಗಳನ್ನು ಸಾವಿರಾರು ವರ್ಷಗಳಿಂದಲೂ ಮಾಡಿಕೊಂಡು ಜೀವಿಸುತ್ತಿದ್ದ ಸುಮಾರು ಮೂರುಸಾವಿರ ಬಡಜನರು ಈಗ ಮನೆಗಳಿಲ್ಲದೆ ಬಹಳವಾದ ಸಂಕಟಗಳಿಗೆ ಈಡಾಗಿದ್ದಾರೆ. ಈ ವಿಚಾರವನ್ನು ಸ್ವಲ್ಪ ಮಾನವೀಯತೆಯ ದೃಷ್ಟಿಯಿಂದ ತಾವು ಪರಿಶೀಲನೆಮಾಡಿ ಹೊರಗಿನಿಂದ ಬಂದಿರತಕ್ಕ ಈ ಜನಗಳಿಗೆ ತಕ್ಕ ಪರಿಹಾರವನ್ನು ಕೊಡದೆ ಇರುವುದು ನ್ಯಾಯವಾದುದಲ್ಲ. ಅದಕ್ಕಾಗಿ ಸರಕಾರವನ್ನು ನಾನು ಈ ಸಂದರ್ಭದಲ್ಲಿ ಈ ವಿಷಯಗಳನ್ನು ಸರಿಯಾಗಿ ಪರಿಶೀಲನೆಮಾಡಿ ತಕ್ಕ ಪರಿಹಾರಗಳನ್ನು ಒದಗಿಸಬೇಕೆಂದು ಕೇಳುತ್ತೇನೆ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ(ಗುಬ್ಬಿ).—ಮಾನ್ಯ ಸಭಾಪತಿಗಳೇ, ಇವೊತ್ತು ಸೋಮವಾರ. ಮೈಸೂರು ಸಂಸ್ಥಾನಕ್ಕೆ ಈ ಸೋಮವಾರ ದುರ್ದಿನವಾಗಿದೆ. ಇಂಥ ಸೋಮವಾರದ ದಿನದಲ್ಲಿ ಅರ್ಥಕ್ಕೂ ಹೆಚ್ಚಿನ ಹಣದ ಬೇಡಿಕೆಗಳ ಮೇಲೆ, ಒಂದು ಶಕ್ತಿಯುತ ಕಾನೂನಿನ ಹಿಡಿತಕ್ಕೆ ಸಿಕ್ಕಿ ಇವೊತ್ತು ನನ್ನ ಸ್ನೇಹಿತರು ಏನೇನು ಹೇಳಬೇಕೆಂದಿದ್ದಾರೆಯೋ ಅದನ್ನು ಹೇಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುವುದಕ್ಕೆ ನನಗೆ ಬಹಳ ನೋವಾಗಿದೆ. ಇವತ್ತಿನ ದಿವಸ ಬಹಳ ದೊಡ್ಡ ದೊಡ್ಡ ಬೇಡಿಕೆಗಳು, ಈ ದೇಶದ ಆರ್ಥಿಕಮಟ್ಟ ಮತ್ತು ಅದರ ಸರ್ವತೋಮುಖವಾದ ಅಭಿವೃದ್ಧಿ—ಇವುಗಳನ್ನು ಮಾಡತಕ್ಕಂತಹ ಬೇಡಿಕೆಗಳು, ನಮ್ಮ ಮುಂದೆ ಇವೆ. ಆದರೆ ಯಾವ ಬೇಡಿಕೆಯಮೇಲೆ ಮಾತನಾಡಬೇಕು ಯಾವ ಬೇಡಿಕೆಯ ಮೇಲೆ ಮಾತನಾಡಕೂಡದು ಎನ್ನುವ ಒಂದು ಸಂದೇಹ ಒದಗಿಬಿಟ್ಟಿದೆ.

ಸ್ವಾಮೀ, ಕಬ್ಬಿಣದ ಕಾರ್ಖಾನೆಯ ಮೇಲೆ ಎರಡು ವಿಚಾರಗಳನ್ನು ಹೇಳುತ್ತೇನೆ. ಕಬ್ಬಿಣದ ಕಾರ್ಖಾನೆ, ಚಿನ್ನದಗಣಿ ಬಿಟ್ಟರೆ ಎರಡನೆಯದಾಗಿದೆ ಎಂದು ನನಗನಿಸುತ್ತದೆ. ಈ ಕಬ್ಬಿಣದ ಕಾರ್ಖಾನೆಯಲ್ಲಿ ಏನಾಗುತ್ತಿದೆ ಎನ್ನತಕ್ಕದ್ದನ್ನು ಜನ, ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಎಲ್ಲರೂ ಸ್ವಲ್ಪ ವಿಚಾರಮಾಡಿ ನೋಡಬೇಕು.

ಶ್ರೀ ಹೆಚ್. ಎಸ್. ರುದ್ರಪ್ಪ.—ಕಾರ್ಖಾನೆಯಲ್ಲಿ ಕಬ್ಬಿಣ ತಯಾರಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ಭೂಮಿಯನ್ನು ಉಳಲು ಬೇಕಾಗುವ ಗುಳಮಾಡತಕ್ಕ ಕಾರ್ಖಾನೆಯಾಗಿದೆ. ಮಾನ್ಯ ಶ್ರೀ ರುದ್ರಪ್ಪನವರು ಸ್ವಲ್ಪ ಸಮಾಧಾನವಾಗಿರಬೇಕು. ಸ್ವಾಮೀ, ಈ ಮಂತ್ರಿಗಳು ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಮೊನ್ನೆ ಮಾತನಾಡುತ್ತ, ಬಹಳ ಲಾಭ ಬರುತ್ತದೆ ಎಂದು ಹೇಳಿದರು. ಏಕೆಂದರೆ ಇವೊತ್ತು ಸ್ಟೀಲನ್ನು ಕಂಟ್ರೋಲ್ ಮಾಡಿದ್ದಾರೆ. ಸ್ಟೀಲ್ ಕಂಟ್ರೋಲ್ ಮಾಡಿ ಜಾಸ್ತಿ ರೇಟ್ ಕೊಡುವುದರಿಂದ ಇವರಿಗೆ ಲಾಭ ಬರುತ್ತಿದೆ.

ಸ್ವಾಮಿ, ಈಗೇನೋ ಭದ್ರಾವತಿಯ ಕಾರ್ಖಾನೆಯಿಂದ ಬರುವ ಉಕ್ಕಿನಿಂದ ಲಾಭ ಬರುತ್ತದೆಂದು ಹೇಳಿದರೂ ಭಿಲಾಯ್ ಕಾರ್ಖಾನೆಯಿಂದ ತಯಾರಾದ ಉಕ್ಕು ಮಾರ್ಕೆಟ್ಟಿಗೆ ಬಂದರೆ, ಈ ಕಾರ್ಖಾನೆಯ ಸ್ಥಿತಿ ಅಸ್ತವ್ಯಸ್ತವಾಗುತ್ತದೆ. ಇದನ್ನು ರಕ್ಷಣೆ ಮಾಡುವ ದಾರಿಯಲ್ಲಿ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ, ಎಷ್ಟು ಮುಂದೆ ಹೋಗಿದ್ದಾರೆಂದು ನಾನು ಕೇಳುತ್ತೇನೆ. ಇಂಥ ದೊಡ್ಡ ಕಾರ್ಖಾನೆಯಲ್ಲಿ ಕೆಲಸಮಾಡಲು ಟೆಕ್ನಿಕಲ್ ಜನರಿರಬೇಕೆಂದು ಶ್ರೀ ನರಸಿಂಹನ್ ಅವರು ಹೇಳಿದರು. ಇಂಜಿನಿಯರಿಂಗ್ ಇಲಾಖೆಯ ವಿಷಯ ಹೇಳುತ್ತಾ ಶ್ರೀ ವೀರಣ್ಣಗೌಡರು, ಅಲ್ಲಿ ಟೆಕ್ನಿಕಲ್ ಜನರಿದ್ದಾರೆ. ಎಲ್ಲ ಸರಿಯಾಗಿ ನಡೆಯುತ್ತದೆಂದು ಹೇಳಿದರು. ಈ ಭದ್ರಾವತಿ ಕಾರ್ಖಾನೆಯಲ್ಲಿ ಒಬ್ಬರು ಐ.ಎ.ಎಸ್. ಅಧಿಕಾರಿಗಳನ್ನು ಡೈರೆಕ್ಟರಾಗಿಯೂ, ಛೇರ್ಮನ್ ಆಗಿಯೂ ಇಟ್ಟಿದ್ದಾರೆ. ಕೈಗಾರಿಕೆ ಇಲಾಖೆಯ ಡೈರೆಕ್ಟರಾಗಿ ಒಬ್ಬರು ಐ.ಎ.ಎಸ್. ಅಧಿಕಾರಿಯನ್ನು ನೇಮಿಸಿದ್ದಾರೆ. ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾಗಿ ಒಬ್ಬರು ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸಿದ್ದಾರೆ. ಇದು ಹೇಗಿದೆಯೆಂದರೆ, ಚೇಳಿನಮಂತ್ರ ಬರುವವನನ್ನು ಹಾವು ಕಡಿದವನಿಗೆ ಮಂತ್ರಹಾಕುವುದಕ್ಕೆ ಕರೆದುಕೊಂಡು ಹೋದಹಾಗಿದೆ. ಭದ್ರಾವತಿ ಕಾರ್ಖಾನೆಗೆ 38,55,000 ರೂಪಾಯಿನ ಸ್ಕ್ರ್ಯಾಪ್ ಕೊಂಡುಕೊಳ್ಳುತ್ತಾರೆ. ಇದು ಕಾರ್ಖಾನೆಗೆ ಸರಿಯಾಗಿ ಬರಬಾರದೆ ! ಗೋಧಿ, ಅಕ್ಕಿ, ತುಪ್ಪ ಇಂಥ ಪದಾರ್ಥಗಳಾದರೆ ಒಂದುವೇಳೆ ಅಲ್ಲಿಗೆ ಬರುವ ಹೊತ್ತಿಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸೋರಿಹೋಗಬಹುದೋ ಏನೋ, ಈ ಸ್ಕ್ರ್ಯಾಪ್ ಅಲ್ಲಿಗೆ ಬರುವ ಹೊತ್ತಿಗೆ ಶೇಕಡ ಎಂಟರಷ್ಟು ಏಕೆ ವಜಾ ಮಾಡುವುದು ? ತುಪ್ಪದ ಹಾಗೆ, ಎಣ್ಣೆಯ ಹಾಗೆ ಸೋರುತ್ತದೆಯೆ ಎಂಬುದನ್ನು ಯೋಚನೆ ಮಾಡಬೇಕು. ಸುಮಾರು 40 ಲಕ್ಷ ರೂಪಾಯಿನ ಸಾಮಾನು ಕೊಂಡು ಕೊಳ್ಳುವಾಗ ಇದರಲ್ಲಿ ಶೇಕಡ ಎಂಟು-ಹತ್ತರಷ್ಟು ಕಡಮೆ ಬಂದರೆ ಹೇಗೆ? ಬಿಳಿ ಆನೆ ಎಂದು ಹೇಳಿದರೆ ಪೋಲೀಸ್ ಮಂತ್ರಿಗಳು ಕೋಪ ಮಾಡಿಕೊಂಡರು. ಈ ಕಾರ್ಖಾನೆಯಲ್ಲಿ ಕೆಲವು ಹೆಗ್ಗಣಗಳಿವೆ, ಇವನ್ನು ತಹಬಂದಿಗೆ ತರಬೇಕು. ಹದಿನೈದು-ಇಪ್ಪತ್ತು ಲಕ್ಷ ರೂಪಾಯಿಗಳ ಕಟ್ಟಡವನ್ನು ಕಟ್ಟುತ್ತಿದ್ದಾರೆ; ಒಬ್ಬರು ಅಸಿಸ್ಟೆಂಟ್ ಕಮೀಷನರು ಕುಳಿತುಕೊಂಡು ಬಿಲ್‌ಗಳನ್ನು ಪಾಸ್ ಮಾಡುವುದು ಎಂದರೆ, ನನಗೆ ಅರ್ಥವಾಗುವುದಿಲ್ಲ. ಗ್ರಾಮಪಂಚಾಯಿತಿ ಸಬ್ ಓವರ್‌ಸಿಯರು, ಬಾವಿ ತೆಗೆಯುವುದಕ್ಕೆ ಸಂಬಂಧಪಟ್ಟ ಬಿಲ್ ತಯಾರಿಸಿ ತೆಗೆದುಕೊಂಡು ಬಂದರೆ ಎಲ್ಲಾ ಸರಿಯಾಗಿದೆಯೆಂದು ಹೇಳಿ ಅಮಲ್ದಾರರು ರುಜು ಹಾಕುತ್ತಾರೆ, ಇದೂ ಹಾಗಿದೆ. ಎಚ್ಚರಿಕೆಯಿಂದ ನೋಡಬೇಕು, ಇಲ್ಲದಿದ್ದರೆ ದೇಶದ ಹಣ ಅನ್ಯಾಯವಾಗುತ್ತದೆ. ನಿಜವಾಗಿ ದೇಶಪ್ರೇಮವಿದ್ದರೆ, ದೇಶವನ್ನು ಮುಂದೆ ತರಬೇಕೆಂಬ ಇಚ್ಛೆಯಿದ್ದರೆ, ಈ ತೂತುಗಳನ್ನು ನೋಡಬೇಕು; ರೈಲ್ವೆ ವ್ಯಾಗನ್‌ಗಳಲ್ಲಿ ತೂತಿದೆಯೆ, ಮನುಷ್ಯನ ಕೈಯಲ್ಲಿ ತೂತಿದೆಯೆ ಎಂಬುದನ್ನು ಕಂಡು ಹಿಡಿದು ಸರಿಮಾಡಬೇಕು. ಈ ಕೆಲಸವನ್ನು ಸರಿಯಾಗಿ ನಡೆಸಲು ಸಾಧ್ಯವಾಗದೇ ಹೋದರೆ ಖಾಸಗಿ ಕಂಪೆನಿಗೆ ಕೊಡಲಿ, ಆಗ ಎಲ್ಲ ಸರಿಹೋಗುತ್ತದೆ.

ಇನ್ನೊಂದು ವಿಷಯ ಹೇಳುತ್ತೇನೆ. Crude Methenal ಒಂದು ಗ್ಯಾಲನ್‌ಗೆ ಎಂಟು ರೂಪಾಯಿ, B. P. Methenal ಒಂದು ಗ್ಯಾಲನ್ನಿಗೆ 12 ರೂಪಾಯಿ. Crude Methenal ಕಳುಹಿಸಿ, B.P. Methenal ಕಳುಹಿಸಿದ್ದೇನೆಂದು ಹೇಳಿದರೆ, ಒಂದೊಂದು ಗ್ಯಾಲನ್‌ಗೆ ನಾಲ್ಕು ರೂಪಾಯಿ ವ್ಯತ್ಯಾಸವಿರುತ್ತದೆ. ನಾವು ಕೇಳಿದರೆ, ಲೆಕ್ಕವೆಲ್ಲ ಸರಿಯಾಗಿದೆ, ಉತ್ಪ್ರೇಕ್ಷೆಮಾಡಿ ಮಾತನಾಡುತ್ತಾರೆಂದು ಹೇಳುತ್ತಾರೆ. ಹೀಗೆ ಸರ್ಕಾರಕ್ಕೆ ಬರುವ ಹಣ ತೂತುಗಳಲ್ಲಿ ಸೋರಿಹೋದರೆ ಏನು ಗತಿ ? ದೇಶ ಹೇಗೆ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಕೈಗಾರಿಕೆ ಮಂತ್ರಿಗಳು ಯೋಚಿಸಬೇಕು.

ಇನ್ನೊಂದು ವಿಷಯ. ಅಧಿಕಾರಿಗಳನ್ನು ಬದಲಾಯಿಸುತ್ತಾರೆ, ಮಂತ್ರಿಗಳು, ಸೆಕ್ರೆಟರಿಗಳು, ಸದಸ್ಯರು ಎಲ್ಲರೂ ಬದಲಾವಣೆಯಾಗುತ್ತಾರೆ. ಆದರೆ ಅಲ್ಲಿ ಇಬ್ಬರು ಅಧಿಕಾರಿಗಳಿದ್ದಾರೆ, ಅವರನ್ನು ಯಾರೂ ಬದಲಾಯಿಸುವುದಿಲ್ಲ. ಒಬ್ಬರು Purchase Manager, ಇನ್ನೊಬ್ಬರು Sales Manager. ಅವರಿಬ್ಬರಿಗಿರುವ ಆಸ್ತಿಪಾಸ್ತಿ ಎಷ್ಟಿದೆ ಎಂದು ನೋಡಿ ಲೆಕ್ಕ ಹಾಕಿಸಲಿ. ಅರವತ್ತು ಕೋಟಿ ರೂಪಾಯಿ ಬಡ್ಜೆಟ್ಟನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ. ಶ್ರೀ ಮರಿಯಪ್ಪನವರು ಇನ್ನು ಐದು ವರ್ಷವಾದ ಮೇಲೆ ಪಾರ್ಲಿಮೆಂಟಿಗೂ ಹೋಗುತ್ತಾರೋ ಏನೋ, ಗೊತ್ತಿಲ್ಲ. ಅವರಾದರೂ ಈಕಡೆ ಗಮನ ಕೊಡಲಿ, ಈ ಇಬ್ಬರು ಅಧಿಕಾರಿಗಳು ಕಾರ್ಖಾನೆ ಪ್ರಾರಂಭವಾದಾಗಿನಿಂದಲೂ ಅಲ್ಲೇ ಇದ್ದಾರೆ. ಅವರನ್ನು ಬದಲಾಯಿಸದಿದ್ದರೆ ತೊಂದರೆಯಾಗುತ್ತದೆ, ಆದಕಾರಣ ಅವರನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ನನ್ನ ವಿಷಯ ಮಾತನಾಡಿ, ಜೈಲಿನಲ್ಲಿದ್ದಾಗ ಹೊರಗೆ ಬರಲು ರಾಜೀನಾಮೆ ಬರೆದುಕೊಟ್ಟು ಬಂದೆನೆಂದು ಹೇಳಿದರು, ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ. ಇಂಡಿಯಾ ಸರ್ಕಾರದವರು heavy electricals ಪ್ರಾರಂಭ ಮಾಡಬೇಕೆಂದು 250 ಎಕರೆ ಜಮೀನನ್ನು ಕೇಳಿದಾಗ ನಮ್ಮ ಸರ್ಕಾರಕ್ಕೆ ಅದನ್ನು ಕೊಡುವುದಕ್ಕೆ ಯೋಗ್ಯತೆಯಿಲ್ಲದೆ ಆ ಕಾರ್ಖಾನೆಯನ್ನು ಅವರು ರಾಜಾಸ್ಥಾನಕ್ಕೆ ತೆಗೆದುಕೊಂಡು ಹೋಗಿ ಹಾಕಿದರು. ಅದು ಇಲ್ಲೇ ಆಗಿದ್ದಿದ್ದರೆ ಹತ್ತು ಸಾವಿರ ಜನರಿಗೆ ಕೆಲಸ ಕೊಡಬಹುದಾಗಿತ್ತು.

ಶ್ರೀ ಟಿ. ಮರಿಯಪ್ಪ.—ರಾಜಾಸ್ಥಾನದಲ್ಲಿ ಯಾವ ಜಾಗ ?

Sri H. M. CHANNABASAPPA.—It is an incorrect statement of fact. I am sure the Hon'ble Minister will correctly reply.

Mr. SPEAKER.—The Minister will reply. Let the speaker not be interrupted.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಮೇಲೆ ಹೇಳುತ್ತೇನೆ, ಈಗ ಕಾಲವಿಲ್ಲ. ನಾನು ಹೇಳುವುದು, ನಿನ್ನೆ ತಾನೇ ನಮ್ಮ ರಾಜ್ಯದಲ್ಲಿ 15ಲಕ್ಷ ಎಕರೆ ವ್ಯವಸಾಯಕ್ಕೆ ಯೋಗ್ಯವಾದ ಜಮೀನಿದೆಯೆಂದು ಹೇಳಿದರು, ಇದರಲ್ಲಿ 250 ಎಕರೆಯಷ್ಟು ಕೊಡುವುದಕ್ಕೆ ಸಾಧ್ಯವಾಗಲಿಲ್ಲವೆ ಎಂದು. ಅಲ್ಲದೆ, ಕೈಗಾರಿಕಾ ಸಂಶೋಧನೆಗೆ ಬಡ್ಜೆಟ್ಟಿನಲ್ಲಿ ಎಲ್ಲಾದರೂ ಹಣ ಒದಗಿಸಿದ್ದಾರೆಯೆ ಎಂದು ನೋಡಿದರೆ, ಎಲ್ಲಿಯೂ ಇಲ್ಲ.

ಪೋರ್ಸ್‌ಲೈನ್ ಕಾರ್ಖಾನೆಗೆ ಹಿಂದೂಸ್ಥಾನದಲ್ಲಿರುವ ಜೇಡಿ ಮಣ್ಣನ್ನು ಪಯೋಗಿಸಿಕೊಳ್ಳಬೇಕೆಂದು ಮೊದಲು ಯೋಚನೆ ಮಾಡಿದ್ದರು. ಈಗ ಶೇಕಡ 30ರಷ್ಟು ಜಪಾನಿನಿಂದ ತರಿಸುತ್ತಿದ್ದಾರೆ. ಹೀಗಿರುವಾಗ ಹೇಗೆ ನಷ್ಟವನ್ನು ಸರಿದೂಗಿಸುತ್ತಾರೋ ನನಗೆ ಅರ್ಥವಾಗುವುದಿಲ್ಲ.

ಇನ್ನೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪ್ರಚಾರ ಶಾಖೆಗೆ 85,000 ರೂಪಾಯಿ ಗ್ರಾಂಟು ಕೊಟ್ಟು ಮೈಸೂರು ಸಾಬೂನಿನ ಕಾರ್ಖಾನೆಯ ವಿಷಯವನ್ನು ಪ್ರಚಾರ ಮಾಡಬೇಕೆಂದು ಏರ್ಪಾಡು ಮಾಡಿದ್ದಾರೆ. ಹೋದ ಸಾರಿ 45,000 ರೂಪಾಯಿ ಖರ್ಚು ಮಾಡಿದ್ದಾರೆ. ಈ ಪ್ರಚಾರದ ಕೆಲಸವನ್ನು ಆಯಾ ಕಾರ್ಖಾನೆಯವರೇ ಮಾಡಿಕೊಳ್ಳಬೇಕು. 85 ಸಾವಿರ ಕೊಟ್ಟರೂ, ಅದರಲ್ಲಿ 45ಸಾವಿರ ಖರ್ಚು ಮಾಡಿದರೆ, ಹೇಗೆ ಅಲ್ಲಿ ತಯಾರಾದ ಪದಾರ್ಥಗಳಿಗೆ ಮಾರುಕಟ್ಟೆ ಸಿಕ್ಕುತ್ತದೆ ?

ಶ್ರೀ ಟಿ. ಮರಿಯಪ್ಪ.—ಬೇಕಾದಷ್ಟು ಸಿಕ್ಕುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಿದ್ದರೆ ಈ 85 ಸಾವಿರ ರೂಪಾಯಿ ತಾನೆ ಏಕೆ ಒದಗಿಸಿದರು ?

ಸೋಪ್ ಕಾರ್ಖಾನೆಯ ಕಟ್ಟಡವನ್ನು ಕಟ್ಟಿಸಿದರು. ಅಲ್ಲಿನ ಕೆಮಿಸ್ಟನ್ನು ಕೇಳಿ, ಆವಶ್ಯಕತೆಗಳನ್ನರಿತು ಕಟ್ಟಬೇಕಾಗಿತ್ತು. ಹಾಗೆ ಮಾಡಲಿಲ್ಲ, ಇಲ್ಲಿಂದ ಅಲ್ಲಿಗೆ ಬದಲಾವಣೆ ಮಾಡಿದರು. ಅಲ್ಲಿ ಕಾರ್ಖಾನೆಯಲ್ಲಿರುವ ಸಾಮಾನುಗಳನ್ನು ಹಾಕುವುದಕ್ಕೂ ಸ್ಥಳವಿಲ್ಲ. ಮೊದಲೇ ಆ ಇಲಾಖೆಯ ಅಧಿಕಾರಿಗಳ ಅಭಿಪ್ರಾಯವನ್ನು ಪಡೆದು ಕಟ್ಟಬೇಕಾಗಿತ್ತು. ಹಾಗಿಲ್ಲದೆ ಇವರಿಗೆ ಮನಸ್ಸು ಬಂದ ಹಾಗೆ ಅಂದಾಜು ಮಾಡಿ ಕಟ್ಟಿಸಿದರೆ ಸೌಕರ್ಯವಾಗುತ್ತದೆಯೆ ? ಮತ್ತೆ ಈಗ ಯೋಚನೆ ಮಾಡುತ್ತಿದ್ದಾರೆ. ಇಲ್ಲೇ ಕಟ್ಟಬೇಕೆ ಅಥವಾ ಅಲ್ಲೇ ಕಟ್ಟಬೇಕೆ ಎಂದು ಯೋಚನೆ ಮಾಡುತ್ತಿದ್ದಾರೆ. ಒಂದು ಸರಿಯಾದ ಅಂದಾಜನ್ನೂ

ಪ್ಲಾನನ್ನೂ ಇಟ್ಟುಕೊಂಡು ಕೆಲಸಮಾಡುವುದಿಲ್ಲವೆಂಬುದನ್ನು ಇದು ತೋರಿಸುತ್ತದೆ.

ಒಂದು ವಿಷಯ—ಇದು ಸರಿಯೋ ತಪ್ಪೋ ಗೊತ್ತಿಲ್ಲ—ಮೈಸೂರು ಸಕ್ಕರೆ ಕಂಪೆನಿಯಲ್ಲಿ ಸರ್ಕಾರದವರು ಒಬ್ಬ ಅಧಿಕಾರಿಯನ್ನಿಟ್ಟಿದ್ದರು. ಅಲ್ಲಿ ಏನೋ ಇಲಿ ಸತ್ತ ವಾಸನೆ ಬರುತ್ತಿದೆ. ಈ ಅನುಮಾನವನ್ನು ಪರಿಹಾರ ಮಾಡಬೇಕು. ಖಾಸಗಿ ಚೇರ್ಮನ್ ಇದ್ದಾಗ ಅಲ್ಲಿ ಏನೇನೋ ನಡೆದಿದೆ ಎಂದು ದೇಶದಲ್ಲಿ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇಂಥಾದ್ದೇನಾದರೂ ಇದ್ದರೆ, ದೇಶದ ಹಿತದೃಷ್ಟಿಯಿಂದ ಕೈಗಾರಿಕೆ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳುತ್ತಾರೆಂದು ನಂಬಿದ್ದೇನೆ.

ಇನ್ನು ಅರಣ್ಯ ಶಾಖೆಯ ವಿಷಯ. ಶ್ರೀ ರುದ್ರಪ್ಪನವರಿಗೆ ನಾನು ಮಾತನಾಡುವುದು ಅರಣ್ಯರೋದನವಾಗಬಾರದೆಂದು ಹೇಳಬೇಕಾಗಿದೆ. ಅರಣ್ಯ ಇಲಾಖೆಯಲ್ಲಿ ತಂಗಡಿ ಮತ್ತು ತೂಪರೆಲೆಗೆ ಅಲ್ಲಿಯೂ ಸುಂಕ ಇಲ್ಲಿಯೂ ಸುಂಕ ಹಾಕಿದ್ದಾರೆ. ತಲೆಗಂದಾಯ ಹಾಕುವುದೊಂದನ್ನು ಬಿಟ್ಟಿದ್ದಾರೆ. ಅರಣ್ಯ ಸಂಪತ್ತನ್ನು ರಕ್ಷಣೆಮಾಡಿ ಅಭಿವೃದ್ಧಿ ಮಾಡಲೆಂದು ಹೇಳುತ್ತೇನೆ. ಇವರಲ್ಲಿ ಕಾರ್ಯದಕ್ಷತೆ ಬಂದಿಲ್ಲ. ಇವರು ಆದರ್ಶವಾಗಿ ಮಾಡಿ ಜನರಿಗೆ ತೋರಿಸಬೇಕು.

ಇನ್ನೊಂದು ವಿಷಯ. ಶ್ರೀ ಮರಿಯಪ್ಪನವರು ದೊಡ್ಡ ಬಡ್ಜೆಟ್ ತಯಾರುಮಾಡಿದ್ದಾರೆ. ಇಂಡಿಯಾ ಸರ್ಕಾರವನ್ನು ಕೇಳಿ ಅವರ ಸಹಾಯವನ್ನು ಎಷ್ಟು ಪಡೆಯಬಹುದೋ ಅಷ್ಟು ಪಡೆದಿಲ್ಲ. ಬಡ್ಜೆಟ್ಟಿನಲ್ಲಿ ಎಲ್ಲವನ್ನೂ Current year's revenueನಲ್ಲಿ ತೋರಿಸಿ 80ಲಕ್ಷ ರೂಪಾಯಿಗಳನ್ನು ಕಳೆದುಬಿಟ್ಟಿದ್ದಾರೆ. ಇದುಸರಿಯೆ ? ಅವರಿಗೆ ದೇಶಾಭಿಮಾನವಿಲ್ಲವೆಂದು ನಾನು ಹೇಳುವುದಿಲ್ಲ. ಇಂಡಿಯಾ ಸರ್ಕಾರದಿಂದ ಹಣ ಸಹಾಯವನ್ನು ಪಡೆಯಲು ಪ್ರಯತ್ನ ಮಾಡಲಿಲ್ಲವೇಕೆ ಎಂದು ಕೇಳುತ್ತೇನೆ ?

ಅಧ್ಯಕ್ಷರು.—ಇನ್ನು ಹೆಚ್ಚು ಅವಕಾಶ ಕೊಡಲು ಸಾಧ್ಯವಿಲ್ಲ, ಮಾನ್ಯ ಸದಸ್ಯರು ಇಲ್ಲಿಗೇ ನಿಲ್ಲಿಸಬೇಕು.

2 P. M.

Sri A. R. PANCHAGAVI (Gokak II).—Sir, on a point of order. The member used the words "ಅಸೆಂಬ್ಲಿ ರೋದನ". Is it parliamentary ?

ಅಧ್ಯಕ್ಷರು.—ಮಾನ್ಯ ಸದಸ್ಯರು 'ಅಸೆಂಬ್ಲಿ ರೋದನ' ಎಂದು ಹೇಳಲಿಲ್ಲ. ಅವರು 'ಅರಣ್ಯ ರೋದನ' ಎಂದು ಹೇಳಿದರು.

Sri C. K. RAJAIAH SETTY (Chickanaikanahalli).—Mr. Speaker, I rise to oppose the Demands that have been placed before us. It is not for one reason but for many reasons. Today is a most important day because the Demand is for Rs. 16 crores and odd, provided for under the head 'Industries'. The main reason for opposing the Demand is this. A big plan has been sponsored by the Government of India called the Second Five-Year Plan and Mysore State being a part of India, the Plan applies to this State also. While preparing the Plan there were probably no technicians in this Government because only a portion of the important schemes has been allotted to this State. If we look into the programmes that the Government have placed before us, we do not see any proposal for starting major industries. They have proposed only some industries which are already in existence. Taking into account the immense natural wealth, the reeds of Mysore, etc., I think the whole Plan ought to have been changed. The second reason why I am much discouraged is this. After all, when industries are started, in the early stages, there will be obstacles. But in days to come there should be a revolutionary change in industries. The three principles which should govern an industry are, more production, less cost, and better quality. If we look to our industries with this background, none of our them has progressed. If we take the case of Bhadravati Iron and Steel Works, we would like to know to what extent the cost of production has been reduced, to what extent production has increased and to what extent the quality improved. I think if any foreigner comes and verifies he will find that there has been no effort in the matter of reduction of cost of production, probably fifty per cent improvement in the quality and fifty per cent increase in the production. So much so, this industry is in the same position as it was My friend Sri M. Rajasekharamurthy placed before the House a list of profits made by several industries. I must say that it is only the war that has brought luck to these industries. In the absence of war all our industries would have gone to dogs.

Sri M. RAJASEKHARA MURTHY (T.-Narasipur).—Post-war period, not the war period.

Sri C. K. RAJAIAH SETTY.—All right, even then what were the rates before ? A bag of cement was sold at Rs. 4-2-0 and it is now Rs. 8-4-0. A ton of iron was sold at Rs. 120 and now it is Rs. 700 to 800. The Government came to the rescue and increased the rates and it is not to the credit of any industry to simply enhance the

(SRI C. K. RAJAIAH SETTY)

rate and make the people to bear the burden.

Let us now take the question of the tremendous leakage, wastage and shortage that are going on in so many industries. You take the Government Electric Factory. May I know whether any weighbridge is there to weigh the coal brought to this industry? Thousands of tons of coal are coming to the factory but there is no weighbridge to determine how much coal is being transported. The contract for bringing coal to the factory is given to a party and that contractor is continuing for the last 12 years. Government ought to have called for quotations and if they had done it fresh contractors would have been able to offer their quotations. There is one Dodge Van in the factory. In all the indents received we can see they mainly relate to supply of petrol, while actually no purchase is made. If you look into the details of these indents you will find that there is no purchase for many days. Yet an expenditure of nearly Rs. 10,000 is incurred for the sake of the Van. Since three years I am seeing in the S.P.C. advertisements that the delivery of goods at the factory is the responsibility of the party who supplies. When that is the case, I do not know why an expenditure of Rs. 10,000 is incurred for the purchase of petrol. May I know how much dues have to be recovered under this head? I am sure it would be nearly Rs. 20 lakhs and odd. There was a suggestion by the Auditors that there was a bad debt of Rs. 22,000. When we are having debts like this, how can we say there is a profit. Actually speaking, there is a lot of leakage. The other day I brought to the notice of the Minister for Industries the question of sale of soap manufactured the Government Soap Factory. We are aware that the Lever Brothers pay two per cent commission and one per cent bonus. TOMCO pays two per cent commission and one per cent bonus whereas we are paying five per cent commission. I think there is a great demand for the Mysore soap and Mysore toilet soaps. Payment of high commission to Agents is not necessary as the Mysore Soap has made its name. When there are persons to undertake the work of Agency and accept less than five per cent commission, I do not know why the Government is not at all anxious about it. If we are satisfied with the very little income we are deriving at present, I am sure the industry will not progress and Government will lose all the benefits and profits that they are at present getting.

Now, if you look at Germany, you will find how it has progressed. People were almost half fed and half naked and it was the only country which was hit hard by the war. But now they have made tremendous progress with the technical knowledge they have. They have advanced to such a stage that they can help us to a great extent. In the other industries because of the delay caused by Government officials in disposing of tenders, there has been a loss to the extent of nearly three lakhs.

I said something about the Iron Works. Let us consider whether it has progressed. Iron ore is used 40 to 50 per cent. What is the amount of flux material used and what is the output by using 40 to 50 per cent of iron ore? What is the amount of coal used to melt one ton of iron ore? What is the labour cost and machinery depreciation? By spending the same amount and by using 67 to 70 per cent Iron ore which is available in plenty in Mysore State the output can be increased by 25 per cent. Likewise in most of the industries there is a lot of leakage and wastage. I think the Government should look into this matter.

Regarding the new industries that we can start, I want to bring to the notice of the Government that we have natural wealth and it has to be fully exploited. For instance, Mysore is importing 1,500 tons of dehydrated lime from other parts. It is used for Paper Mills and Sugar Refineries. We will be having more Sugar Factories in days to come. We will be having some Paper Mills where there is need for this dehydrated lime. Mysore is very rich in this lime and we have got all facilities

and it is necessary that we should look into them.

The number of Sugar Factories and Paper Mills that are coming up require a quantity of 5,000 tons of lime per month. Hence Government can think of having a factory either in the public sector or private sector as it is an industry which pays good returns.

At present, India is purchasing a huge quantity of refractory bricks from foreign countries for which we are spending a lot of our dollar exchange. The need for this important product is increasing as Steel Factories and other heavy machinery plants are coming up not only in Mysore but in other parts of India. The estimated cost of these refractory brickswhich at present India is in need of is Rs. 3 crores to Rs. 4 crores. It may be noted that all the materials required, such as, Dolomite, Steotite, Magnesite, Chromite and Kyanite are available in Mysore and with less capital we can have an industry of that sort. Instead of spending Rs. 50 lakhs or Rs. 60 lakhs on the Soap Factory, this new industry can be started either by Government or by the private sector. Why are we not particular about that? This is a highly paying industry. When there are so many factories started in the private sector, Government should help if private sector comes forward to start this industry. Huge deposits of Titanium Oxide are available near about Kumta having a percentage of 40-45. Titanium is the only raw material that can replace aluminium. As the country is short of aluminium, Government could make a lot of money by taking up an enterprise to separate titanium sands by electro-magnetic process. India is exporting a lot of raw materials but we are not making use of them fully. For instance manganese is sold to Japan at 200 C.I.F. After electroly-tic process this is sold at Rs. 1,000 Our country is very rich in electricity and we can have a factory of manganese which pays Government better. Likewise we have got so many industries in our country. It is necessary that we should look to the details regarding resource possibilities and we can have so many new factories whereby we can make the Budget a tax-free Budget. Mysore has got monopoly of so many factories and why should the Government tax the people ? They should make use of the resources.

Regarding cottage industries, no doubt Government is having so many schemes. How many schemes are successful ? There is the question of allotment of funds. Funds are being distributed through different societies to the people. In all these cottage industries, I am sure 75 per cent of the amount is not being utilised for the purpose it is meant. What is the use of allotting lakhs of rupees if the amount is not properly used? In my own taluk, people have drawn money in the society to the extent of one lakh of rupees and I am sure that not even 50 per cent has been utilised for the purpose. If schemes are taken up should not the Government see that they are properly executed ? I wish Government will take note of these things for the betterment of our country in the years to come.

*Sri J. H. SHAMSUDDIN (Honavar).—Sir, I rise to support all these Demands. But I shall confine myself to Demand No. 18 "30. Ports and pilotage". This is a new subject or a new department so far as Mysore State is concerned. I have already said that Mysore State has acquired 200 miles of coastline. There are several ports. These ports can be divided into three categories : major, minor and sub-ports. So far as major ports are concerned, it is the concern of the Government of India. Mysore Government should strive its best to convince the Government of India to undertake one of the ports on these 200 miles of coastline to develop it into a major port. There are a number of reports on this subject. In 1943 the Government of India appointed a technial committee of which Mr. Armstrong Godfree was the Chairman. That committee has made certain recommendations. One of the important recommendations of that committee is that Bhatkal, to which I belong, offers as a big port. Subsequently, *i.e.* in 1947 the Government of India

(SRI J. H. SHAMSUDDIN)

appointed another committee which is called West Coast Major Ports Development Committee under the Chairmanship of Sri Kasturbhai Lalbhai. That committee went into the question and reported that Malpe, another port in South Kanara, can be developed into a major port. The question now before us is how far we would succeed in convincing the Government of India to develop Malpe or Mangalore or Bhatkal or Karwar, which are the more important ports into major ports, in the immediate future within the Second Five-Year Plan. I urge upon the Government to take all possible care and caution in convincing the Government of India to develop any of these ports into major ports because Mysore State, as is known, is in the hinterland and requires an outlet for its products—exports and imports. We know that ports are the easier means of communication than railways. When we develop ports, naturally transport will be easier and cheaper and we will thereby be helping the railways in removing congestion and bottlenecks of transport that are now responsible for the delay in transport. Therefore I am not dealing with the question of major ports now because, as I said, this subject is the concern of the Government of India. I am only referring to minor ports and sub-ports.

Taking for granted that one of the ports will be developed as a major port, the question remains as to how we should improve minor ports and create facilities for transport, etc. All these ports have been neglected in the past. For that the Bombay Government and the Madras Government were responsible. Mysore Government cannot be blamed for that. What I request the Government of Mysore now is that they should not fall into the same traditional line of neglect so far as ports are concerned. Therefore these ports should be developed in order to meet the necessities of the people. How can we develop these ports? What are the difficulties of the hinterland or the obstruction for traffic in these ports? They are of a several nature. But the main of them is that there is siltage. That means sand parts have been created on account of the natural sand deposit. Easy outlet for country crafts and for steam ships or for steam launches has been blocked. Therefore siltage should be removed. The Government of Mysore should give constant attention to this so that the silt deposits during rainfall and tidal waves are washed away and the country crafts, steam ships and steam launches can come in to bring cargo and take back cargo from the hinterland. This is one thing. The other thing is that there are certain rocks on the shore that obstruct easy passage of these boats. They are surface rocks. They have been examined and a survey has been conducted by the Government of India. It is found that these can be easily blown off. This is the second thing. The third is that berthing facilities should be provided for. We know there is coastal traffic. Some steamships anchor at midsea and the passengers have to be brought on to the shore. Facilities will have to be provided during night-time or during inclement weather when the passengers are exposed to risk. Therefore launches should be provided for at least bringing passengers from the steamships on to the shore. That is a necessary facility, otherwise sometimes there is danger to human life. Such a facility should be provided in these four ports. Then, sometimes the steamers do not arrive or arrive late at night with the result that people cannot go to the interior. Therefore, waiting sheds should be provided at these ports. Sometimes during the fair weather we get rains with the result that country craft loaded with cargoes which come at the wharf for being unloaded are exposed to the rains, causing loss and damage to the people concerned. Therefore, godowns should be provided at these ports. These are the requirements of the ports. The Government of Mysore which is new to this problem should provide all these facilities in the ports. I know that recently the Government of Mysore has created what is called a Ports Department and appointed a State Port Officer who has just taken charge. I quite understand that we cannot expect

him to function quite efficiently in the immediate future, but what I am driving at is that Government should pay sufficient attention to this problem.

I looked at the budget from these points of view and I would not have taken part in this discussion when there is such a race for time and urge for speaking had it not been for the fact that no details had been given. The budget has been prepared artistically and art lies in concealing art. At page 75 of the Budget Estimates a provision of Rs. 2,03,000 has been made. The details are: charges for survey of steam vessel—Rs. 3,000, development of ports—Rs. 1,50,000 and so on. I tried to go through the programmes for 1957-58 under the Second Five-Year Plan. I went through it from page to page but I could not find any details therein. No indication has been given except that Rs. 1,50,000 have been provided for 'Development of Ports'. That is the reason why I was prompted to speak and as I remarked earlier, this budget is an artistic budget and art lies in concealing art.

Sri T. MARIAPPA.—May I intervene Sir, and tell my friend that there is no concealment at all? The schemes have not been prepared properly. I have made a lumpsum provision of Rs. 1,000 so that at least there will be some provision for the Hon'ble Member from the west coast to see.

Sri J. H. SHAMSUDDIN.—Thank you. I concede that it is a new Department and that the Government is not in a position to give full details, but there are several illustrations of a similar kind. For instance, there is a provision for the development of harbours in respect of which also no details have been given. On page 218 there is a provision for Rs. 3,01,000 for 'Development of Fisheries', but no details have been given in that behalf. One funny detail is that they have provided Rs. 2,32,500 for 'Contingencies'. A substantial portion of the demand has been provided for 'Contingencies'. Unless it is indicated what the nature of contingencies, is it is difficult to understand why such a huge amount has been set apart for that purpose. Ordinarily, the term 'Contingency' means paper weight, ink bottles and so on. If several schemes are intended to be carried out with this huge amount provided for contingencies, the Government could have come out with an explanation that contingency does not mean what is understood in popular parlance. If one looks at this huge amount provided for contingencies, one will be wonder-struck. Out of Rs. 3,01,000, a substantial portion, namely, Rs. 2,32,500 have been provided for contingencies. That is the artful way in which the budget has been prepared.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರುವ ಈ ಡಿಮ್ಯಾಂಡ್ ಮನವಿಗಳ ಮೇಲೆ ನನ್ನ ಕೆಲವು ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಈ ನನ್ನ ಸಲಹೆಯನ್ನು ಸರ್ಕಾರದ ಮುಂದೆ ಇಡುವಾಗ ಕೈಗಾರಿಕೆಯ ಶಾಖೆಯ ಮಾನ್ಯ ಸಚಿವರು ಸಭೆಯ ಮುಂದೆ ಹಿಂದೆ ಒಂದು ಸಾರಿ ಏನು ಅಪ್ಪಣೆ ಕೊಡಿಸಿದರು ಅದನ್ನೂ ಕೂಡ ಈ ಸಂದರ್ಭದಲ್ಲಿ ಅವರ ಜ್ಞಾಪಕಕ್ಕೆ ತರಬಯಸುತ್ತೇನೆ. ಕೈಗಾರಿಕೆಯ ಶಾಖೆಯ ಮಾನ್ಯ ಸಚಿವರು ನಮ್ಮ ಎದುರು ಪಕ್ಷದಲ್ಲಿರತಕ್ಕ ಕೆಲವು ಸ್ನೇಹಿತರು ಮಾತನಾಡುವುದನ್ನು ಕೇಳಿ ಸಂತೋಷವಾಯಿತು, ಕಾಂಗ್ರೆಸ್‌ನ ಸಿಂಧು ಬಿಂದುವಾಗಿ ಎದುರು ಕುಳಿತು ಮಾತನಾಡುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು ಎಂದು ಹೇಳಿದರು. ಅವರಿಗೆ ನಾನು ಕೊಡತಕ್ಕ ಸಲಹೆಯನ್ನು ಸ್ವೀಕರಿಸಬೇಕು. ಅವರು ನಮ್ಮ ಎದುರು ಕುಳಿತು ಹಿರಣ್ಯಕಶಪುವಿನಂತೆ ವರ್ತಿಸಬಾರದು. ನಾವು ಮಾತ್ರ ಪ್ರಹ್ಲಾದನಂತೆ ನಡೆಯುತ್ತಿದ್ದೇವೆ. ರಾಮಲಕ್ಷ್ಮಣರಂತೆ ಈ ದೇಶದ ಭವಿಷ್ಯವನ್ನು ನಿರ್ಧರಿಸುವುದರಲ್ಲಿ ರಕ್ಷಿಸುವ ಸಾಹಸ ಮಾಡಬೇಕೆಂದು ಹೇಳಿ, ಆ ರೀತಿ ನಮ್ಮ ಸಲಹೆಯನ್ನು ಸ್ವೀಕಾರಮಾಡಬೇಕೆಂದು ತಮ್ಮ ಮೂಲಕ ಕೈಗಾರಿಕೆಯ ಶಾಖೆಯ ಸಚಿವರನ್ನು ಪ್ರಾರ್ಥಿಸುತ್ತೇನೆ.

ಸ್ವಾಮಿ, ಹೊಸಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಎಷ್ಟು ಮಹತ್ತ್ವವೋ ಹಾಗೆಯೇ ಸ್ಥಾಪಿಸಿರತಕ್ಕ ಕೈಗಾರಿಕೆಗಳು ಕ್ಷೀಣವಾಗದಂತೆ ಅವನ್ನು ಹೆಚ್ಚು ಪ್ರಗತಿದಾಯಕವಾಗಿ ಬೆಳೆಸುವುದರಲ್ಲಿ ಹೆಚ್ಚು ಆಸಕ್ತಿ ಇಡತಕ್ಕದ್ದು ಅಷ್ಟೇ ಮುಖ್ಯ ಎನ್ನುವುದನ್ನು ಮಾನ್ಯ ಕೈಗಾರಿಕೆಯ ಶಾಖೆಯ ಸಚಿವರ ಗಮನಕ್ಕೆ ತರುತ್ತೇನೆ. ಆ ರೀತಿ ಆಸಕ್ತಿ ಕಡಮೆಯಾಗಿರುವುದು ಎಲ್ಲಿ ಎಂದು ಅವರು ಪ್ರಶ್ನೆ ಕೇಳುವುದಾದರೆ ಅದಕ್ಕೆ ಒಂದೆರಡು ಉದಾಹರಣೆಗಳನ್ನು ತಮ್ಮ ಮೂಲಕ ಕೈಗಾರಿಕೆಯ ಶಾಖೆಯ ಸಚಿವರ ಗಮನಕ್ಕೆ ತರುತ್ತೇನೆ. ಮಂಡ್ಯ ಸಕ್ಕರೆಯ ಕಾರ್ಖಾನೆ ಪ್ರಾರಂಭವಾಗಿ ಸುಮಾರು 25 ವರ್ಷಗಳಾದವು. ಅಲ್ಲಿ ಸುಮಾರು 20 ಸಾವಿರ ಎಕರೆ ಕಬ್ಬು ಬೆಳೆಯುತಕ್ಕ ಪ್ರದೇಶ ಇದ್ದರೂ ಕೂಡ ಈ ದಿವಸ ಆ ಕಾರ್ಖಾನೆಗೆ ಕೇವಲ 8,000 ಎಕರೆ ಕಬ್ಬನ್ನು ಅರೆಯುವ ಶಕ್ತಿ ಮಾತ್ರ ಇರುತ್ತದೆ. ಇತ್ತೀಚೆಗೆ ಪಾಂಡವಪುರದಲ್ಲಿ ಒಂದು ಕಾರ್ಖಾನೆ ಸ್ಥಾಪಿಸಬೇಕೆಂದು ಈಗಾಗಲೇ ಕಾರ್ಯಕ್ರಮ ನಡೆಯುತ್ತಾ ಇದೆ. ಹಾಗೆಯೇ ಮದ್ದೂರಿನಲ್ಲೂ ಕೂಡ ಒಂದು ಕಾರ್ಖಾನೆ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಸ್ಥಾಪಿಸಬೇಕೆಂಬ ಬಗ್ಗೆ ಸರ್ಕಾರದ ಗಮನ ಇದೆ ಎಂದು ತಿಳಿದು, ಅವರನ್ನು ತುಂಬಾ ಹೃತ್ಪೂರ್ವಕ ವಾಗಿ ವಂದಿಸುತ್ತೇನೆ. ಆದರೂ ಕೂಡ ಮಂಡ್ಯಕ್ಕೆ ಸಂಬಂಧಪಟ್ಟಂತೆ ಈಗ ಹಾಲಿ ಕಾರ್ಖಾನೆಗೆ ಸಾಗಿ ಸುವ 8,000 ಎಕರೆ ಬಿಟ್ಟರೆ 12 ಸಾವಿರ ಎಕರೆಯ ವರೆಗೂ ಕಬ್ಬು ಬೆಳೆಯತಕ್ಕ ಅವಕಾಶವಿದೆ ಎಂದು ಮಾನ್ಯ ಕೈಗಾರಿಕೆಯ ಶಾಖೆಯ ಸಚಿವರ ಗಮನಕ್ಕೆ ತರುತ್ತೇನೆ. ಹಾಗೆಯೇ ಈಗಿರುವಂತೆ 8,000 ಎಕರೆ ತೆಗೆದುಕೊಂಡರೂ ಕೂಡ ಇಷ್ಟನ್ನು ಸಕಾಲದಲ್ಲಿ ಅರೆ ಯುವ ಶಕ್ತಿ ಆ ಸಕ್ಕರೆಯ ಕಾರ್ಖಾನೆಗೆ ಇಲ್ಲ ಎಂಬು ದನ್ನು ಅಂಕಿಅಂಶಗಳಿಂದ ತೋರಿಸುತ್ತೇನೆ. 8,000 ಎಕರೆ ಕಟಾವಿಗೆ ಬಂದ ಬೆಳೆ ಆಗಸ್ಟ್‌ನಿಂದ ಪ್ರಾರಂಭ ವಾಗಿ, ಮಾರ್ಚಿವರೆಗೂ ಕಾರ್ಖಾನೆಯಲ್ಲಿ ಕಬ್ಬು ಅರೆ ಯಲ್ಪಡುತ್ತದೆ. ಇರತಕ್ಕ ಅಂಕಿಅಂಶಗಳಿಂದ ಯಾವ ರೀತಿ ಹೆಚ್ಚು ಆದಾಯ ಬರುವಂತಿದ್ದರೂ ಕಳೆದು ಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ. ಆಗಸ್ಟಿನಲ್ಲಿ ಪ್ರಾರಂಭವಾದಾಗ ಸಕ್ಕರೆ ಇಳುವರಿ ಶೇಕಡ 12ರಷ್ಟು ಬರುತ್ತದೆ. ಅದೇ ಫೆಬ್ರವರಿ ಅಥವಾ ಮಾರ್ಚಿಯಲ್ಲಿ ಶೇಕಡ 7ಕ್ಕೆ ಇಳಿಯುತ್ತದೆ. ಇದಕ್ಕೆ ಕಾರಣ ಕಬ್ಬು ಬಹುಕಾಲ ಅರೆಯದೆ ವಯಸ್ಸು ಮೀರಿ ಹಾಗೇ ಇಡು ವುದರಿಂದ ಸಕ್ಕರೆಯ ಇಳುವರಿ ಕಡಮೆಯಾಗುತ್ತದೆ. ಇಳುವರಿ ಶೇಕಡ 7 ಬರುತ್ತದೆ. ಇದರಿಂದ ಸುಮಾರು ಒಂದು ದಿವಸಕ್ಕೆ 1,500 ಟನ್ ಅರೆಯುವ ಶಕ್ತಿ ಇರ ತಕ್ಕ ಕಾರ್ಖಾನೆಯಲ್ಲಿ ಶೇಕಡ 12 ಇಳುವರಿ ಇದ್ದಾಗ 100 ಟನ್ ಕಬ್ಬು ಅರೆದರೆ 12 ಟನ್ ಸಕ್ಕರೆ ಬರುತ್ತದೆ. ಫೆಬ್ರವರಿ ಅಥವಾ ಮಾರ್ಚಿಯಲ್ಲಿ 100 ಟನ್ ಕಬ್ಬಿಗೆ ಏಳು ಟನ್ ಸಕ್ಕರೆ ಬರುತ್ತದೆ. ಅಲ್ಲಿಗೆ ಒಂದು ದಿವಸಕ್ಕೆ 75 ಟನ್ ಸಕ್ಕರೆ ಬರತಕ್ಕ ಉತ್ಪನ್ನ ಕಡಮೆಯಾಯಿತು. ಟನ್ ಒಂದಕ್ಕೆ 850 ರೂಪಾಯಿ ಸಕ್ಕರೆ ಬೆಲೆ ಇರು ವಾಗ ಒಂದು ದಿವಸಕ್ಕೆ 75 ಟನ್ ಸಕ್ಕರೆ ಕಡಮೆಯಾದರೆ ಇದು ಯಾವ ದೇಶದ ದೌರ್ಭಾಗ್ಯ, ಯಾರಿಗೆ ಬರತಕ್ಕ ಉತ್ಪನ್ನ ಹೋಯಿತು ಎಂಬುದನ್ನು ಸರ್ಕಾರದವರು ಪೂರ್ಣವಾಗಿ ವಿಮರ್ಶೆಮಾಡಬೇಕು. ಸಕ್ಕರೆಯ ಕಾರ್ಖಾನೆಯಲ್ಲಿ ಲಾಭ ಬಂದಿರಬಹುದು. ಆದರೆ ಅರೆದ ಕಬ್ಬಿನಲ್ಲಿ ಒಂದೊಂದು ದಿವಸಕ್ಕೆ 75 ಟನ್ ಸಕ್ಕರೆ ಉತ್ಪನ್ನ ಕಡಮೆ ಆದರೆ ದೇಶಕ್ಕೆ ಅದರಿಂದ ಎಷ್ಟು ತೊಂದರೆಯಾಗಬಹುದು ! ಒಂದು ಕಡೆ ಪ್ರತ್ಯಕ್ಷವಾಗಿ ಉತ್ಪನ್ನ ಕಡಮೆ ಆಯಿತು, ಮತ್ತೊಂದು ಕಡೆ ಅಪ್ರ ತ್ಯಕ್ಷವಾಗಿ ಸರ್ಕಾರಕ್ಕೆ ಬರುತ್ತಾ ಇದ್ದ ಸೇಲ್ಸ್ ಟ್ಯಾಕ್ಸು, ಎಕ್ಸೈಜ್ ಡ್ಯೂಟಿ ವಗೈರೆ ನಿಂತುಹೋಗು ತ್ತದೆ. ಹೀಗೆ ಸುಮಾರು ಒಂದು ವರ್ಷಕ್ಕೆ 35 ಲಕ್ಷ ರೂಪಾಯಿಗಳ ವರೆಗೂ ಕೂಡ ಬರತಕ್ಕ ಉತ್ಪನ್ನ ಕಡಮೆಯಾಗಿದೆ ಎನ್ನುವುದನ್ನು ನಾನು ಅಂಕಿಅಂಶಗಳ ಮೂಲಕ ಮಾನ್ಯ ಸಚಿವರ ಗಮನಕ್ಕೆ ತಂದಿಲ್ಲೆ. ಹೀಗೆ 25 ವರ್ಷಗಳಿಂದಲೂ ಪ್ರತಿವರ್ಷವೂ 35 ಲಕ್ಷ ರೂಪಾಯಿಗಳಷ್ಟು ಉತ್ಪತ್ತಿ ಕಡಮೆಯಾಗುತ್ತಿದೆ. ಇದರತ್ತ ಸರ್ಕಾರದವರು ಹೆಚ್ಚು ಗಮನ ಕೊಡದೆ ಇರುವುದಕ್ಕೆ ನಾನು ತುಂಬ ವಿಷಾದಿಸುತ್ತೇನೆ.

2-30 P.M.

ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಶ್ರೀ ಅಜಿತಪ್ರಸಾದ್ ಜೈನ್ ಅವರು ಮಂಡ್ಯದ ರೈತರ ವಿವಿ ಧೋದ್ದೇಶ ಸಹಕಾರ ಸಂಘದ ಕಟ್ಟಡ ಪ್ರಾರಂಭೋ ತ್ಸವದಲ್ಲಿ ಭಾಗವಹಿಸಿದ್ದಾಗ ಒಂದು ಮಾತನ್ನು ಅಪ್ಪಣೆ ಕೊಡಿಸಿದರು. ಒಟ್ಟು ಖರ್ಚಿನಲ್ಲಿ ಅರ್ಧಭಾಗ ವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ; ಉಳಿದ ಅರ್ಧ ಭಾಗವನ್ನು ಸಂಸ್ಥಾನದ ಸರ್ಕಾರ ವಹಿಸಬೇಕು. ಇದಕ್ಕೆ ಸಂಸ್ಥಾನದ ಸರ್ಕಾರದವರು ಒಪ್ಪುವುದಾದರೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಅಪ್ಪಣೆ ಕೊಡಿಸಿದರು. ಈ ದಿವಸ ಸಕ್ಕರೆಯ ಕಾರ್ಖಾನೆಯಲ್ಲಿ ಕಬ್ಬನ್ನು ಅರೆಯುವ ಶಕ್ತಿಯನ್ನು ಜಾಸ್ತಿ ಮಾಡಬೇಕಾದರೆ ಸುಮಾರು ಒಂದು ಕೋಟಿ ರೂಪಾಯಿಗಳಾಗಬಹುದು. ಒಂದು ಕೋಟಿ ರೂಪಾ ಯಿಗಳನ್ನು ಖರ್ಚುಮಾಡಿ, ಪ್ರತಿವರ್ಷ 35 ಲಕ್ಷ ರೂಪಾ ಯಿಗಳ ಉತ್ಪತ್ತಿ ಮಾಡತಕ್ಕದ್ದು ಒಳ್ಳೆಯದೆಂದು ಸರ್ಕಾರ ಯೋಚನೆ ಮಾಡಬೇಕು. ಫೆಬ್ರವರಿ, ಮಾರ್ಚಿ ತಿಂಗಳಿಗೆ ಬದಲು ಡಿಸೆಂಬರ್ ಆಖೈರಿಗೆ ಕಟಾವು ಮುಗಿದರೆ ಸಕಾಲದಲ್ಲಿ ಕಬ್ಬು ಅರೆದು ಹೆಚ್ಚು ಉತ್ಪತ್ತಿ ಬರುತ್ತದೆ. ರಾಗಿ ಅಥವಾ ಬೇರೆ ಕಾಳುಗಳ ಬೆಳೆ ಯನ್ನು ಬೆಳೆಯಬಹುದು. ಈ ಬೆಳೆಗಳನ್ನು ಬೆಳೆಯು ವುದಕ್ಕೆ ಆಗದೆ ಇರುವುದರಿಂದ ಇದರಿಂದಲೂ ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳ ಉತ್ಪತ್ತಿ ಕಡಮೆಯಾಗು ತ್ತದೆ ಎಂದು ಹೇಳಬಹುದು. ಸಕ್ಕರೆಯ ಕಂಪೆನಿಯಲ್ಲಿ ಸರ್ಕಾರದವರ ಬಂಡವಾಳವೇ ಶೇಕಡ 51 ಇರುವ ಕಾರಣ ಹೆಚ್ಚು ಶ್ರದ್ಧೆ ವಹಿಸಿ ಕಾರ್ಖಾನೆಯಲ್ಲಿ ಅರೆಯುವ ಶಕ್ತಿಯನ್ನು ದ್ವಿಗುಣಗೊಳಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಕಾಗದದ ಕಾರ್ಖಾನೆಯ ವಿಷಯದಲ್ಲಿ ಒಂದು ಮಾತು. ಸಕ್ಕರೆಯ ಕಾರ್ಖಾನೆಯಲ್ಲಿ ಒಂದು ದಿನಕ್ಕೆ 600-700 ಟನ್ ಬೆಗಾಸ್ ದೊರೆಯುತ್ತದೆ. ಇದರಿಂದ ಒಂದು ಕಾಗದದ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಬಹಳಮಟ್ಟಿಗೆ ಅನುಕೂಲವಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಈಗಾಗಲೇ ಒಂದು ತೀರ್ಮಾನಕ್ಕೆ ಬಂದಿದ್ದಾರೆಂದು ಕೇಳಿದ್ದೇನೆ. ಆದಷ್ಟು ಜಾಗ್ರತೆ ಈ ಕಾಗದದ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯ ದಲ್ಲಿ ಸರ್ಕಾರದವರು ನೆರವಾಗಬೇಕು. ಈ ಸಲಹೆ ಯನ್ನು ಕೊಟ್ಟು ರಾಮಲಕ್ಷ್ಮಣರಂತೆ ಈ ದೇಶದ ಭವಿಷ್ಯವನ್ನು ನಿರ್ಧರಿಸುವುದರಲ್ಲಿ ಸಹಕರಿಸಬೇಕು, ನಮ್ಮ ರಚನಾತ್ಮಕ ಸಲಹೆಗೆ ಸ್ವಾಗತ ಕೊಡಬೇಕು ಎಂದು ಹೇಳಿ, ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ಹೃತ್ಪೂರ್ವಕವಾಗಿ ವಂದಿ ಸುತ್ತೇನೆ.

[SRI Y. VEERAPPA in the Chair]

*ಶ್ರೀ ಕೆ. ಪಿ. ಗದಗ್ (ಗದಗ್).—ಮಾನ್ಯ ಅಧ್ಯಕ್ಷರೇ, 16,06,76,500 ರೂಪಾಯಿಗಳ ಈ ಬೇಡಿಕೆಗೆ ನನ್ನ ಅನುಮತಿಯನ್ನು ಕೊಡುತ್ತ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಈ ಬೇಡಿಕೆಗೆ ಅನುಮತಿ ಯನ್ನು ಕೊಡುವುದಕ್ಕೆ ಮುಖ್ಯ ಕಾರಣವೊಂದಿದೆ. ಸಾಮಾನ್ಯವಾದ ಬಡ್ಜೆಟ್ಟಿನ ಚರ್ಚೆಗೆ ಉತ್ತರ ಕೊಡು ವಾಗ್ಗೆ ಮಾನ್ಯ ಅರ್ಥಸಚಿವರು ಒಂದು ಮಹತ್ತ್ವದ ಹೇಳಿಕೆಯನ್ನು ಕೊಟ್ಟರು. ಅದೇನೆಂದರೆ, ಯಾವುದೇ ವಿಷಯದಿಂದ, ಹಿಂದುಳಿದ ಭಾಗಗಳ ಪ್ರಗತಿಯ ಸಲು ವಾಗಿ ವಿಶೇಷ ಗಮನ ಕೊಟ್ಟು ಹಿಂದುಳಿದ ಭಾಗಗಳು ಪ್ರಗತಿಯಾಗುವಂತೆ ಯಾವತ್ತೂ ಅಭಿವೃದ್ಧಿಗಳನ್ನು ಕೈಗೊಳ್ಳುತ್ತಿದ್ದೇವೆಂದು ಮಾನ್ಯ ಅರ್ಥಸಚಿವರು ಒಂದು ಆಶ್ವಾಸನೆಯನ್ನು ಕೊಟ್ಟರು. ಈ ಕಾರಣದಿಂದ ನಾನು ಇವೊತ್ತಿನ ಈ ಬೇಡಿಕೆಗಳಿಗೆ ಅನುಮತಿ ಅಥವಾ ಬೆಂಬಲ ಕೊಡುವೆನು, ಆದರೆ ಮಾನ್ಯ ಅರ್ಥಸಚಿವರು ಕೊಟ್ಟ ಒಂದು ಮಹತ್ತ್ವದ ಹೇಳಿಕೆಗೂ, ಈ ಬೇಡಿಕೆ ಗಳಿಗೂ ಯಾವ ಸಂಬಂಧವಿದೆ ಎನ್ನುವುದನ್ನು ಸ್ವಲ್ಪ ಪರಿಶೀಲಿಸಿ ನೋಡಬೇಕು. ಉದ್ಯಮಗಳ ಸಲುವಾಗಿ ಇಟ್ಟಿರುವ 16,62,06,500 ರೂಪಾಯಿಗಳಲ್ಲಿ ಹಳೆಯ

ಮೈಸೂರಿನಲ್ಲಿ ಈಗ ಇರುವ ವಿಶೇಷವಾದ ಸರ್ಕಾರಿ ಉದ್ಯಮಗಳಿಗೆ 13,74,89,000 ರೂಪಾಯಿಗಳು ಮಿಸಲಾಗಿರುತ್ತದೆ, ಇವುಗಳು ಯಾವುವು ಎನ್ನುವುದು ಇಲ್ಲಿ ಇದೆ. ವೇಳೆ ಬಹಳವಾಗುತ್ತದೆ ಎಂದು ಅವನ್ನೆಲ್ಲ ಇಲ್ಲಿ ತಿಳಿಸಲು ಇಚ್ಛೆಪಡುವುದಿಲ್ಲ. ಮುಖ್ಯವೆಂದರೆ ಕೋಲಾರ ಗೋಲ್ಡ್ ಮೈನಿಂಗ್‌ಗಾಗಿ 5,04,41,000 ತೋರಿಸಿದ್ದಾರೆ. ಮಾನ್ಯ ಸದಸ್ಯರು ಇದನ್ನೆಲ್ಲ ನೋಡಿರಬಹುದಾದ್ದರಿಂದ ನಾನು ಪುನಃ ಅದನ್ನೆಲ್ಲ ಹೇಳಿ ಈ ಸಭೆಯ ವೇಳೆಯನ್ನು ವ್ಯರ್ಥ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನುಳಿದ 2,87,00,000 ರೂಪಾಯಿಗಳು Cottage industries, fisheries, industrial development, technical education, Sericulture ವಗೈರೆ ಈ ಭಾಗಗಳಿಗೆ ಎಂದು ಕಾಣುತ್ತದೆ. ಇವೂ ಸಹ ವಿಶೇಷವಾಗಿ ಮೈಸೂರು ಭಾಗಕ್ಕೆ ಅನ್ವಯಿಸುತ್ತವೆ. ಆದರೆ ನಾನು ಇಷ್ಟು ಹೇಳುವುದು, ಮಾನ್ಯ ಅರ್ಥಸಚಿವರಾಗಲೀ, ಉದ್ಯಮದ ಮಂತ್ರಿಗಳಾಗಲೀ, ಕೊಟ್ಟ ಹೇಳಿಕೆಗೂ, ಈ ಬೇಡಿಕೆಗೂ ಏನೂ ಸಂಬಂಧವಿಲ್ಲ. ವಿಪರ್ಯಾಸವಾಗಿದೆ. ಇದು ಹೇಗೆ ಎನ್ನುವುದನ್ನು ಸ್ವಲ್ಪ ಸ್ಪಷ್ಟೀಕರಿಸಬೇಕಾಗಿದೆ. ಮಾನ್ಯ ಅರ್ಥಸಚಿವರಾಗಲೀ, ಮಾನ್ಯ ಮುಖ್ಯ ಮಂತ್ರಿಗಳಾಗಲೀ, ಎರಡನೆಯ ಭಾಗದಲ್ಲಿನ ಉದ್ಯಮಗಳನ್ನು ಯೋಚಿಸಿ, ತಯಾರಿಸಿ ಇಟ್ಟಿದ್ದಲ್ಲ ಇದು. ಆ ಕಾರಣ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದೇನೆಂದರೆ ಇನ್ನು ಮುಂದಾದರೂ ಕೂಡ, ಎರಡನೆಯ ಭಾಗದಲ್ಲಿ ಉದ್ಯಮಗಳನ್ನು ತೆಗೆದುಕೊಳ್ಳುವುದಕ್ಕೆ, ಯೋಜನೆಗಳನ್ನು ಮಾಡುವುದಕ್ಕೆ ಒಂದು ಸರ್ವೆ ಮಾಡುವುದಕ್ಕೆ ಇಂಥ ಕಾರ್ಯಗಳಿಗೆ, ವಿಚಾರಮಾಡಿ ಹಣವನ್ನು ತೆಗೆದಿಟ್ಟಿದ್ದರೆ, ಒಂದು ವೇಳೆ ಮುಂದೆಯಾದರೂ ಮಾಡುವಂಥ ವಿಚಾರವಿದೆ ಎಂದು ನಾವುಗಳು ಸ್ವಲ್ಪ ಸಮಾಧಾನ ಪಡಲಿಕ್ಕೆ ಆಸ್ಪದವಾಗುತ್ತದೆ. ಇದರಿಂದ ಯಾವ ಯೋಜನೆಯ ವಿಚಾರವೂ ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಕಂಡುಬಾರದ್ದರಿಂದ ಎರಡನೆಯ ಭಾಗದಲ್ಲಿ ಅಂದರೆ ಹಳೆಯ ಮೈಸೂರನ್ನು ಬಿಟ್ಟು ಉಳಿದ ಭಾಗಗಳು ಏನಿವೆ, ಉದ್ಯಮಗಳಲ್ಲಿ ಹಿಂದುಳಿದ ಭಾಗಗಳೇನಿವೆ ಅಲ್ಲಿ ಇನ್ನು ಮುಂದೆ ಉದ್ಯಮಗಳನ್ನು ಮಾಡಲಿಕ್ಕೆ ಯೋಚಿಸುತ್ತೀರೋ ಅಥವಾ ಉದ್ಯಮಗಳನ್ನು ಮುಂದುವರಿಸುತ್ತೀರೋ ಇಲ್ಲವೋ ಎನ್ನುವ ಒಂದು ವಿಶೇಷ ಸಂಶಯವಿದೆ. ಅದಕ್ಕೆ ನಾನು ಸರ್ಕಾರಕ್ಕೇ ಆಗಲಿ, ಮಾನ್ಯ ಉದ್ಯಮದ ಮಂತ್ರಿಗಳಿಗೇ ಆಗಲಿ ಒಂದು ಸಲಹೆ ಅಥವಾ ಸೂಚನೆ ಕೊಡುವುದೇನೆಂದರೆ, ಇಡಿಯ ಪ್ರಾಂತದಲ್ಲಿ ಯಾವ ಯಾವ ಉದ್ಯಮಗಳಿಗೆ resources ಇವೆ ಎನ್ನುವ ಬಗ್ಗೆ ಸರ್ವೆ ಮಾಡಿಸಲಿಕ್ಕೆ ಒಂದು ತಜ್ಞರ ಕಮಿಟಿಯನ್ನು ನೇಮಿಸತಕ್ಕದ್ದು. ತಜ್ಞರು ಎಂದರೆ, geologists, economists, industrialists, ಮತ್ತು ಈ ವಿಷಯಗಳಿಗೆ ಸಂಬಂಧಪಟ್ಟವರು ಈ ಕಮಿಟಿಯಲ್ಲಿರತಕ್ಕದ್ದು. ಈ ಕಮಿಟಿಯವರು ಮುಂದಿನ ಬಜೆಟ್ ವಿಚಾರಕ್ಕೆ ತೆಗೆದುಕೊಳ್ಳುವ ಅವಧಿಯೊಳಗೆ ಅವರು ರಿಪೋರ್ಟನ್ನು ಸಾದರಪಡಿಸಬೇಕು. ಮತ್ತೊಂದೇನೆಂದರೆ, ಈ ಕಮಿಟಿಯವರು, ಉದ್ಯಮಗಳನ್ನು classify ಮಾಡತಕ್ಕದ್ದು. Classify ಎಂದರೆ ಕೆಲವು ಉದ್ಯಮಗಳು ಕೇಂದ್ರ ಸರ್ಕಾರ ಕೈಗೊಳ್ಳತಕ್ಕದ್ದು, Iron and steel plant, D.D.T. plant, penicillin factory, ವಗೈರೆ heavy industries ಒಂದು class ; ಎರಡನೆಯದು ಎಂದರೆ National Industrial Dovelopment Corporation ನವರು ಪರ ರಾಷ್ಟ್ರಗಳ ಧನಸಹಾಯದಿಂದ ಕೆಲ ಉದ್ಯಮಗಳನ್ನು ಈಗ ನಮ್ಮ ದೇಶದಲ್ಲಿ ಹಾಕುತ್ತಿದ್ದಾರೆ. ಈಗ ಸ್ವಲ್ಪ ದಿವಸಗಳಲ್ಲಿ ತಾವು ಕೇಳಿರಬಹುದು, ಅಲ್ಯೂಮಿನಿಯಂ ಫ್ಯಾಕ್ಟರಿ ಮೆಟ್ಟೂರಿನಲ್ಲಿ, Newsprint Factory ಯನ್ನು ಶಕ್ಕರ್ ನಗರ್‌ನಲ್ಲಿ ಈ ಪ್ರಕಾರ ಹಾಕುವ ಒಂದು ವಿಚಾರ ನಡೆದಿದೆ. ಅದರಂತೆ ಮೂರನೆಯದು ನಮ್ಮ ಸಂಸ್ಥಾನದ ಸರ್ಕಾರ ಕೈಕೊಳ್ಳಬಹುದಾದಂಥ ಉದ್ಯಮಗಳು, rayon factory, silk factory ಇನ್ನು ಇತರೆಯವು, ನಾಲ್ಕನೆಯ ಭಾಗ ಬಂಡವಾಳ ಹಾಕಿ ಉದ್ಯಮಗಳನ್ನು ಸಾಗಿಸುವಂಥ ಜನರು ಕೈಕೊಳ್ಳಬಹುದಾದಂಥ ಫ್ಯಾಕ್ಟರಿಗಳು. ಹೀಗೆ ಪರಿಶೀಲಿಸಿ ಈ ಕಮಿಟಿಯವರು ಒಂದು ರಿಪೋರ್ಟ್ ಸರ್ಕಾರಕ್ಕೆ ಕೊಡಬೇಕು ; ಮತ್ತು ಸರ್ಕಾರದವರು ತಕ್ಷಣವೇ ಅವುಗಳು ಕಾರ್ಯಗತವಾಗುವಂತೆ ಕೆಲಸವನ್ನು ಮುಂದುವರಿಸಬೇಕು.

ಇನ್ನು ಯಾವ ಯಾವ ಭಾಗದಲ್ಲಿ ಉದ್ಯಮಗಳು ಯಾವ ಯಾವ ಸ್ಥಿತಿಯಲ್ಲಿವೆ, ಏನು ಇವೆ, ಎನ್ನುವ ವಿಷಯವಾಗಿ ನಾನು ಹೇಳುವೆನು. ಉತ್ತರ ಕರ್ಣಾಟಕದ ವಿಚಾರವನ್ನು ಸ್ವಲ್ಪ ಇಲ್ಲಿ ತಮ್ಮ ಗಮನಕ್ಕೆ ತರುವುದು ಅತ್ಯಾವಶ್ಯಕ. ಉತ್ತರ ಕರ್ಣಾಟಕದಲ್ಲಿ ಎಂದರೆ, ಬೊಂಬಾಯಿ ಕರ್ಣಾಟಕದ ಧಾರವಾಡ, ಬೆಳಗಾಂ, ಬಿಜಾಪುರ, ಕಾರವಾರ ಈ ಜಿಲ್ಲೆಗಳಲ್ಲಿ ಮಹತ್ತ್ವದ ಉದ್ಯಮಗಳಿಲ್ಲವೆಂದರೆ ತಪ್ಪಾಗಲಾರದು, ಅಲ್ಲಿರುವ ಉದ್ಯಮಗಳು ಎಂದರೆ, Bagalkot Cement Factory, Dandeli West Coast Paper Mill, ಮತ್ತೊಂದು ಇತ್ತೀಚೆಗೆ ಆಗಿರುವ Manganese Processing Plant ಮತ್ತು Gokak Spinning Mill. ಹುಬ್ಬಳ್ಳಿಯಲ್ಲಿ ಇದ್ದಂಥ Spinning Mill ಈಗ ನಿಂತುಹೋಗಿದೆ. ಗದುಗಿನಲ್ಲಿ ಒಂದು Spinning Mill ಇತ್ತು. ಅದೂ ಬೇರೆ ಕಾರಣದಿಂದ ನಿಂತುಹೋಗಿದೆ. ಇತರ ಉದ್ಯಮಗಳು ಯಾವುವೂ ಅಲ್ಲಿಲ್ಲ. Seasonal factories ಎಂದರೆ, ವರ್ಷದಲ್ಲಿ ಎರಡು ಮೂರು ತಿಂಗಳು ಮಾತ್ರ ನಡೆಯುವಂಥ Cotton Spinning Factory, Pressing Factory, Oil Mills ಇಂಥವು ವಿಶೇಷವಾಗಿವೆ.

ಆದರೆ ಅಲ್ಲಿ ವಿಶೇಷ resources ಇದ್ದಾಗ್ಗೂ ಅನೇಕ ಕಾರಣಗಳ ಮೂಲಕ ಇಂಡಸ್ಟ್ರೀಜ ಅಸ್ತಿತ್ವದಲ್ಲಿ ಬಂದಿಲ್ಲ. ಮುಖ್ಯ ಕಾರಣ ಬಂಡವಾಳ. ಒಳ್ಳೆಯ ಉದ್ಯಮಗಳನ್ನು ಸ್ಥಾಪಿಸಲು ಬಂಡವಾಳದಾರ ಜನರು ಕಡಮೆಯಾಗಿದ್ದಾರೆ. ಆದಕಾರಣ ಉದ್ಯಮಗಳನ್ನು ಪ್ರಾರಂಭಿಸುವುದು ಅತ್ಯಾವಶ್ಯಕವಾಗಿದೆ ಎಂದು ಸರಕಾರಕ್ಕೆ ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಸರಕಾರವು ಹೆಚ್ಚು ಬಂಡವಾಳ ಹಾಕಿ ಈ ಉದ್ಯಮಗಳಿಗೆ ಪ್ರೋತ್ಸಾಹ ಕೊಡುವುದು ಅತ್ಯವಶ್ಯವಾಗಿದೆ. ಮೊದಲಿನಿಂದಲೂ ಉತ್ತರ ಕರ್ಣಾಟಕದ ಭಾಗವು ಈ ಬಗ್ಗೆ ಹಿಂದೆ ಉಳಿದಿದೆ. ಆದುದರಿಂದ ಉದ್ಯಮಗಳನ್ನು ಸ್ಥಾಪಿಸಲು ನಮ್ಮ ಸರಕಾರ ಸಹಾಯ ಮಾಡಬೇಕೆಂದು ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

*ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡಲು ನಾನು ನಿಂತಿದ್ದೇನೆ. ಮುಖ್ಯವಾಗಿ ರೂರಲ್ ಇಂಡಸ್ಟ್ರಿಯಲೈಜೇಷನ್ ಸ್ಕೀಮಿನ ವಿಷಯದಲ್ಲಿ ಮಾತನಾಡುವವನು ಇದ್ದೇನೆ. ಈಗಾಗಲೇ ಅನೇಕ ಮಿತ್ರರು

(ಶ್ರೀ ಎನ್. ಜಿ. ನರಸಿಂಹೇಗೌಡ)

ಲಾರ್ಜ್‌ಸ್ಕೇಲ್ ಇಂಡಸ್ಟ್ರಿಯ ಬಗ್ಗೆ ಮಾತನಾಡಿದ್ದಾರೆ. ಆದಕಾರಣ ಅದರ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುವು ದಿಲ್ಲ. ಈ ಸಂಬಂಧದಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ಮುಖ್ಯವಾಗಿ ನಮ್ಮ ದೇಶ ಮುಂದಕ್ಕೆ ಬರಬೇಕಾದರೆ ಜನರ ಆರ್ಥಿಕಮಟ್ಟ ಜಾಸ್ತಿಯಾಗ ಬೇಕಾದರೆ ಕೈಗಾರಿಕೆಗಳನ್ನು ಜಾಸ್ತಿ ಮಾಡದೆ ಮುಂದಕ್ಕೆ ಬರಲು ಆಗುವುದಿಲ್ಲ. ಹೆಚ್ಚಿನ ಲಾಭ ಪಡೆಯತಕ್ಕಂಥ ದೊಡ್ಡ ಕೈಗಾರಿಕೆಗಳನ್ನು ಸರ್ಕಾರ ನಡೆಸುತ್ತದೆ. ಕೆಲವು ದೊಡ್ಡ ಕೈಗಾರಿಕೆಗಳು ನಮ್ಮ ಸರ್ಕಾರದ ಕೈಯಲ್ಲಿಯೇ ಇದೆ. ದೊಡ್ಡ ಕೈಗಾರಿಕೆ ಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ಸರ್ಕಾರ ತನ್ನ ಆದಾಯವನ್ನು ಜಾಸ್ತಿ ಮಾಡಿಕೊಳ್ಳುತ್ತಿದೆ. ಈಗ ರೂರಲ್ ಇಂಡಸ್ಟ್ರೀಸ್ ಸ್ಕೀಮ್ ಎಂದು ಒಂದು ಇದೆ. ಇದರ ವಿಚಾರದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ ವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹಳ್ಳಿ ಗಾಡಿನ ಜನರು ಮುಂದಕ್ಕೆ ಬರಬೇಕಾದರೆ ಗೃಹ ಕೈಗಾರಿಕೆಯನ್ನು ಬಿಟ್ಟರೆ ದೇಶವು ಮುಂದಕ್ಕೆ ಬರುವು ದಿಲ್ಲ. ಗೃಹ ಕೈಗಾರಿಕೆಯ ಅಭಿವೃದ್ಧಿಗೆ ಹಣ ಒದಗಿಸ ತಕ್ಕಂಥ ವಿಷಯದಲ್ಲಿ ಬಹಳ ಅಸಮಾಧಾನಕರ ವಾಗಿದೆಯೆಂದು ವಿಷಾದದಿಂದ ಹೇಳುತ್ತೇನೆ. ರೈತರು ಮುಂದಕ್ಕೆ ಬರಬೇಕು ಎಂಬ ಉದ್ದೇಶದ ಸಲುವಾಗಿ ಒಂದು ಯೋಜನೆಯನ್ನು ತಯಾರುಮಾಡಿ ಹಣ ಕೊಡುವ ಸಂದರ್ಭದಲ್ಲಿ ಲೋಪದೋಷಗಳು ಇರ ಬಹುದು. ಅನೇಕ ಸದಸ್ಯರು ಮತ್ತು ಕೆಲವು ಕಾಂಗ್ರೆಸ್ ಪಕ್ಷದ ಮಿತ್ರರು ಸಹ ರೂರಲ್ ಇಂಡಸ್ಟ್ರೀಸ್ ವಿಷಯ ದಲ್ಲಿ ಹಳ್ಳಿಗಾಡಿನ ಜನರಿಗೆ ಪ್ರೋತ್ಸಾಹ ಕೊಡುವುದರ ಸಲುವಾಗಿ ಯಾವ ಸಲಹೆ ಕೊಡಲಿಲ್ಲ. ರೂರಲ್ ಇಂಡ ಸ್ಟ್ರೀಸ್ ಇಲಾಖೆಯವರು ಸುಮಾರು 64,78,000 ರೂಪಾಯಿ ಹೊರಗಡೆ ಸಾಲ ಕೊಟ್ಟಿದ್ದಾರೆ. ಇದರ ಪೈಕಿ ರೈತರುಗಳ ಬಂಡವಾಳ 36,84,000 ರೂಪಾಯಿ ಆಗಿದೆ. ಸುಮಾರು 12,892 ಸಂಸಾರ ಗಳಿಗೆ ಈ ಹಣ ಹಂಚಲಾಗಿದೆ. ಒಂದು ರೀತಿಯಲ್ಲಿ ಡೈರೆಕ್ಟ್ ಅಥವಾ ಇನ್‌ಡೈರೆಕ್ಟಾಗಿ ರೈತರಿಗೆ ಅನು ಕೂಲವಾಗಿದೆ. ಆದರೆ ಇದರಲ್ಲಿ ತೊಂದರೆ ಏನು ಅಂದರೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 60 ಕೋಟಿ ರೂಪಾಯಿಗಳ ಪೈಕಿ 12 ಲಕ್ಷ ರೂಪಾಯಿ ಮಾತ್ರ ರೂರಲ್ ಇಂಡಸ್ಟ್ರೀಸ್ ಸಲುವಾಗಿ ತೋರಿಸ ಲಾಗಿದೆ. ಇದರಲ್ಲಿ ರೆಕರಿಂಗ್ ಎಕ್ಸ್‌ಪೆಂಡಿಚರ್ ಎಷ್ಟು ಮತ್ತು ಎಷ್ಟು ಜನರಿಗೆ ಉಪಯೋಗವಾಗುತ್ತಿದೆ ಎಂದರೆ ಐದು ಲಕ್ಷ ಮಾತ್ರ. ನನ್ನ ಅಭಿಪ್ರಾಯ ಇಷ್ಟೇ: ಇಂಡಿಯಾ ಸರ್ಕಾರದವರು ಸಹಾಯ ಕೊಟ್ಟಿದ್ದಾರೆ. ಅದನ್ನು ಬಜೆಟ್ಟದಲ್ಲಿ ಸೇರಿಸಿಲ್ಲ. ಸ್ಟೇಟ್ ಬಜೆಟ್ಟಿನಲ್ಲಿ ಎಷ್ಟು ಹಣ ಕೊಡಲಾಗಿದೆಯೋ ಅದು ಬಹಳ ಕಡಮೆ ಯಾಗುತ್ತದೆ. ಈಗಿರತಕ್ಕಂಥ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಡುತ್ತೇನೆ. ಅಗ್ರಿ ಕಲ್ಚರಲ್ ಇಂಡಸ್ಟ್ರೀಸ್ ಸಲುವಾಗಿ ಅಲ್ಪ ಸಾಲ ಕೊಡ ತಕ್ಕಂಥ ಬ್ಯಾಂಕುಗಳನ್ನು ಮರ್ಜ್‌ಮಾಡಿ ಡಿಸ್ಟ್ರಿಕ್ಟಿಗೆ ಒಂದು ಸೆಂಟ್ರಲ್ ಬ್ಯಾಂಕ್ ಮಾಡಬೇಕು. ಮುಂಚೆಯ ಕರ್ನಾಟಕ ಪ್ರದೇಶದಲ್ಲಿ ಇಂಥ ಬ್ಯಾಂಕುಗಳು ಇವೆ; ಉನ್ನತಮಟ್ಟದಲ್ಲಿ ಕೆಲಸಮಾಡುತ್ತಿವೆ. 1957-58ನೆಯ ಇಸವಿಯ ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದೀರಿ. ಬಹಳ ದಿವಸ ಹಾಗೆಯೇ ಪೆಂಡಿಂಗ್ ಇಡದೆ ಕೂಡಲೆ ಸ್ಯಾಂಕ್ಷನ್ ಮಾಡಿ ಹೊಸ ಮೈಸೂರು ಹಳೆಯ ಮೈಸೂರು ಎಲ್ಲ ಪ್ರದೇಶಕ್ಕೂ ಅನುಕೂಲವಾಗುವ ಹಾಗೆ ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ಕೂಡಲೆ ರಚಿಸ ಬೇಕು. ಇವುಗಳ ಸಹಾಯದಿಂದ ರೂರಲ್ ಇಂಡಸ್ಟ್ರೀಸ್ ಉತ್ತಮಗೊಳ್ಳುತ್ತವೆ. ಹಳ್ಳಿಗಾಡಿನ ಗೃಹ ಕೈಗಾ ರಿಕೆಗಳು ಉನ್ನತ ಮಟ್ಟಕ್ಕೆ ಬರುತ್ತವೆ.

ಸರ್ ಎಂ. ವಿಶ್ವೇಶ್ವರಯ್ಯನವರು ತಂದಿರತಕ್ಕಂಥ ಸ್ಕೀ ಮನ್ನು ಸರ್ಕಾರವು ಮುಂದುವರಿಸಿಕೊಂಡು ಹೋಗದೆ ಹಿಂದೆ ಉಳಿಯುತ್ತಿದೆ. ಈ ರೀತಿಯಾಗಿ ಮಾಡದೆ ನಿಜ ವಾಗಿ ಹಳ್ಳಿಗಾಡಿನಲ್ಲಿ ಇರತಕ್ಕಂಥ ಜನರ ಆರ್ಥಿಕ ಮಟ್ಟ ಸುಧಾರಣೆ ಮಾಡುವುದಕ್ಕೆ ತಂದಿರತಕ್ಕಂಥ ಈ ಸ್ಕೀಮಿಗೆ ಹೆಚ್ಚಿನ ಬೆಂಬಲ ಕೊಡಬೇಕು. 12 ಲಕ್ಷ ರೂಪಾಯಿಗಳ ಬದಲು 12 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂದು ಈ ಸಭೆಯಲ್ಲಿ ಇರತಕ್ಕಂಥ ಎಲ್ಲ ಮಾನ್ಯ ಸದಸ್ಯರುಗಳಿಗೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಸಲಹೆ ಕೊಡುತ್ತೇನೆ.

ಇನ್ನು ಮೂರು ವರ್ಷಗಳ ಕಾಲ ಮಾತ್ರ ರೂರಲ್ ಇಂಡಸ್ಟ್ರೀಸ್ ಸ್ಕೀಮನ್ನು ಮುಂದುವರಿಸಬೇಕೆಂದು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಈಗಾಗಲೇ ಒಂದು ವರ್ಷವಾಯಿತು. ಇನ್ನು ಎರಡು ವರ್ಷಗಳು ಉಳಿ ದಿವೆ. ಖಾಯಂ ಆಗಿ ಈ ಯೋಜನೆಯನ್ನು ಜಾಗ್ರತೆ ಯಾಗಿ ಜಾರಿಗೆ ತಂದರೆ ನಮ್ಮ ದೇಶ ಮುಂದಕ್ಕೆ ಬರು ತ್ತದೆ; ನಮ್ಮ ಹಳ್ಳಿಗಾಡಿನ ಗೃಹ ಕೈಗಾರಿಕೆಗಳು ಅಭಿ ವೃದ್ಧಿಯಾಗುತ್ತವೆ ಎಂದು ನಾನು ಹೇಳುತ್ತೇನೆ. ಇನ್ನು ಫಾರೆಸ್ಟ್ ವಿಷಯದಲ್ಲಿ ನಾನು ಕೆಲವು ಮಾತು ಗಳನ್ನು ಹೇಳುತ್ತೇನೆ. ಹಾಸನ ಡಿಸ್ಟ್ರಿಕ್ಟಿನ ಫಾರೆಸ್ಟ್ ಇಲಾಖೆಯ ಸಿಬ್ಬಂದಿಯ ವಿಷಯ ಹೇಳುವುದಾದರೆ ನಿಜವಾಗಿಯೂ ಅವರ ಎಫಿಷಿಯನ್ಸಿ ಬಹಳ ಕಡಮೆಯಾ ಗಿದೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ಮರಗಳನ್ನು ಸಾಗಿಸುತ್ತಿ ದ್ದಾರೆಂದು ಅನೇಕರು ಪೇಪರ್‌ನಲ್ಲಿ ಓದಿರಬಹುದು. ಮಂತ್ರಿಗಳೂ ನೋಡಿರಬಹುದು. ಅರಣ್ಯ ಶಾಖೆಯಲ್ಲಿ ಅನೇಕ ಲೆಕ್ಕಪತ್ರಗಳೇ ಇಲ್ಲದೆ ಅರಣ್ಯ ಇಲಾಖಾಧಿ ಕಾರ ವರ್ಗದವರನ್ನು ಒಂದುಗೂಡಿಸಿಕೊಂಡು ಹಾಸನ ದಿಂದ ಬೆಂಗಳೂರಿಗೆ ಕಳ್ಳತನದಿಂದ ಮರಮುಟ್ಟು ಗಳನ್ನು ಸಾಗಿಸುತ್ತಿದ್ದಾರೆ. ಎರಡನೆಯದಾಗಿ ಅರಣ್ಯ ಸಂಪತ್ತನ್ನು ಪ್ರತಿ ತಾಲ್ಲೂಕಿನಲ್ಲಿಯೂ ಬೆಳೆಸುವ ಹಾಗೆ ಏರ್ಪಾಡು ಮಾಡಬೇಕು. ಇನ್ನು ಕೆಲವು ವರ್ಷ ಗಳಾದ ಮೇಲೆ ನಿಜವಾಗಿಯೂ ಸೌದೆಗೋಸ್ಕರ ಜನರು ಬಹಳ ಕಷ್ಟಪಡಬೇಕಾಗುತ್ತದೆ. ವಿಶೇಷವಾಗಿ ಇದ್ದಿಲು ಒಲೆಯನ್ನಂಟಿಸಿ ಅಡಿಗೆ ಮಾಡುವ ಪರಿಸ್ಥಿತಿ ಒದಗಿಬರುತ್ತದೆ. ಆದ್ದರಿಂದ ಈಗಲೇ ಒಂದು ಸ್ಕೀ ಮನ್ನು ಹಾಕಿಕೊಳ್ಳಬೇಕು. ಪ್ರತಿ ತಾಲ್ಲೂಕಿನಲ್ಲಿಯೂ ಮತ್ತು ಪ್ರತಿ ಹೋಬಳಿಯಲ್ಲಿಯೂ ಅರಣ್ಯ ಸಂಪತ್ತನ್ನು ಬೆಳೆಸಲು ಏರ್ಪಾಡು ಮಾಡದಿದ್ದರೆ, ಅರಣ್ಯ ಸಂಪತ್ತು ಕಡಮೆಯಾಗಿ ನಾವು ಬಹಳ ಹಿಂದೆ ಹೋಗುವುದರಲ್ಲಿ ಏನೂ ಸಂಶಯವಿಲ್ಲವೆಂದು ನಾನು ಹೇಳುತ್ತೇನೆ. ನಾನು ರೂರಲ್ ಇಂಡಸ್ಟ್ರೀಸ್ ಬಗ್ಗೆ ನಮ್ಮ ತಾಲ್ಲೂ ಕಿನ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಶ್ರವಣಬೆಳಗೊಳದಲ್ಲಿ ಹಿತ್ತಾಳೆ, ಕಂಚು, ತಾಮ್ರದ ಸಾಮಾನುಗಳು ಮೈಸೂರು ಸಂಸ್ಥಾನದಲ್ಲಿ ನೂರಾರು ವರ್ಷಗಳಿಂದಲೂ ತಯಾರಾಗಿ ಹೆಸರುವಾಸಿಯಾಗಿವೆ. ಈ ವಿಷಯದಲ್ಲಿ ಒಂದು ಇಂಟರ್‌ಪೆಲೇಷನ್ ಕೂಡ ಸರ್ಕಾರದವರ ಮುಂದೆ ಇದೆ. ಆದ್ದರಿಂದ ದಯವಿಟ್ಟು ಶ್ರವಣಬೆಳಗೊಳದಲ್ಲಿ ಒಂದು ಫ್ಯಾಕ್ಟರಿ ಯನ್ನು ಸ್ಥಾಪಿಸಿದರೆ, ಈ ಕೈಗಾರಿಕೆ ಇನ್ನೂ ಅಭಿ ವೃದ್ಧಿಯಾಗುತ್ತದೆ. ಆ ಕಸಬನ್ನು ಮಾಡುವವರು ಇನ್ನೂ ಜಾಸ್ತಿಯಾಗುತ್ತಾರೆ. ಆ ಕೈಗಾರಿಕೆಗೆ ಹೆಚ್ಚಿನ ಉತ್ತೇಜನ ಕೊಟ್ಟಂತಾಗುತ್ತದೆ. ಕೂಲಿ ಗಾರರಿಗೆ ಅನುಕೂಲವಾಗುತ್ತದೆ. ಈ ಕೈಗಾರಿಕೆಯ ವಿಷಯದಲ್ಲಿ ಹೆಚ್ಚು ಅನುಭವ ಪಡೆದಿರತಕ್ಕ ಸಿಬ್ಬಂದಿ ಯುಳ್ಳ ಒಂದು ಸೆಕ್ಷನ್ನನ್ನೂ ಸಹ ಶ್ರವಣಬೆಳಗೊಳದಲ್ಲಿ

ಕೂಡಲೆ ತೆರೆಯಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀಮತಿ ಅನ್ನಪೂರ್ಣಾಬಾಯಿ (ಕಲ್ಯಾಣಿ).—ಮಾನ್ಯ ಇವೊತ್ತಿನ ದಿವಸ ನಾನು ಎಲ್ಲಾ ಬೇಡಿಕೆಗಳನ್ನು ಅನುಮೋದಿಸುತ್ತಾ ವಿದ್ಯುಚ್ಛಕ್ತಿ ಮತ್ತು ಕಾರ್ಖಾನೆಗಳ ವಿಷಯದ ಮೇಲೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ಕೃಷಿಯೇ ಪ್ರಧಾನವಾಗಿದೆ. ಶೇ. 85 ಭಾಗದಷ್ಟು ಜನರು ಒಕ್ಕಲತನ ವ್ಯವಸಾಯದಲ್ಲಿ ಸೇರಿದ್ದಾರೆ. ಭೂಮಿ ಕಡಮೆ ಇದ್ದು ಜನರ ಉತ್ಪತ್ತಿ ಹೆಚ್ಚಾಗಿ ಭೂಮಿಯೇ ಸಾಲಧಂತಾಗಿದೆ. ಒಕ್ಕಲತನದಲ್ಲಿ ಸೇರಿದ ಜನರಿಗೆ ವರ್ಷದಲ್ಲಿ ಆರು ತಿಂಗಳು ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಭೂಮಿಯ ಮೇಲಿನ ಒಜ್ಜೆಯನ್ನು ತೆಗೆದು ಹೆಚ್ಚಿನ ಜನರಿಗೆ ವ್ಯವಸಾಯದಲ್ಲಿ ತೊಡಗಿಸಬೇಕಾದರೆ ದೊಡ್ಡ ದೊಡ್ಡ ಮತ್ತು ಕುಟೀರ ಉದ್ಯೋಗಗಳನ್ನು ತೆರೆಯುವುದು ಅತ್ಯಾವಶ್ಯಕ. ಈ ರೀತಿ ಪ್ರಗತಿಹೊಂದಿರುವ ದೇಶ ಈಗ ಯಾವುದೆಂದರೆ ಅಮೇರಿಕಾ ದೇಶ. ಅಲ್ಲಿ ಪ್ರತಿ ಶತ 18 ಜನರು ಅಂದರೆ ಶೇ. 18 ಭಾಗದಷ್ಟು ಒಕ್ಕಲತನ ಉದ್ಯೋಗಮಾಡಿ ಇಡೀಯ ದೇಶಕ್ಕೆ ಆಹಾರ ಧಾನ್ಯಗಳನ್ನು ಒದಗಿಸುತ್ತಾರೆ. ಆರೀತಿ ಒದಗಿಸಿ ಹೆಚ್ಚಿಗೆ ಉಳಿದ ಧಾನ್ಯಗಳನ್ನು ಪರದೇಶಗಳಿಗೂ ಕಳುಹಿಸುತ್ತಾರೆ. ಇನ್ನುಳಿದ ಶೇ. 82 ಭಾಗದಷ್ಟು ಜನರು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿ ಅಪಾರವಾದ ಸಂಪತ್ತುಗಳನ್ನು ಗಳಿಸುತ್ತಾರೆ. ಆದರೆ ನಮ್ಮಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಇಲ್ಲದಿರುವ ಕಾರಣ ಜನರಲ್ಲಿ ನಿರುದ್ಯೋಗತನ ಬೆಳೆದು ಜನರು ಬಡತನಕ್ಕೆ ಈಡಾಗುತ್ತಿದ್ದಾರೆ. ಅಷ್ಟೇ ಅಲ್ಲ, ಅವರು ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದು ಕೊನೆಗೆ ಬಡತನದಲ್ಲಿಯೇ ಸಾಯುತ್ತಾರೆ. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕಾಗಿ ಭಾರತ ಸರ್ಕಾರ ಈಗಾಗಲೇ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯ ಕೊಟ್ಟು ನೀರಾವರಿ ಯೋಜನೆಯಲ್ಲಿ ಮತ್ತು ವಿದ್ಯುದ್ದೀಪಗಳ ನಿರ್ಮಾಣದಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ವೆಚ್ಚಮಾಡಿದೆ. ಅದರ ಪರಿಣಾಮವಾಗಿ ಆಹಾರಧಾನ್ಯ ಉತ್ಪಾದನೆ ಶೇ. 15 ರಷ್ಟು ಹೆಚ್ಚಾಗಿದೆ. ಆದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಡೊಡ್ಡ ದೊಡ್ಡ ಮತ್ತು ಸಣ್ಣಪುಟ್ಟ ಉದ್ಯೋಗಗಳಿಗೆ ಪ್ರಾಧಾನ್ಯ ಕೊಡಲಾಗಿದೆ. ಯಾವ ದೇಶವೇ ಆಗಲೀ ಪ್ರಗತಿ ಹೊಂದಬೇಕಾದರೆ ಅಲ್ಲಿ ಕಬ್ಬಿಣದ ಉತ್ಪತ್ತಿ ಮತ್ತು ವಿದ್ಯುದ್ದೀಪದ ನಿರ್ಮಾಣ ಹೆಚ್ಚಾಗಿರಬೇಕು.

ನಮ್ಮ ಮೈಸೂರಿನಲ್ಲಿ, ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ವಿಶೇಷ ಕಾರ್ಖಾನೆಗಳು ಇವೆ. ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಸೋಪ್ ಫ್ಯಾಕ್ಟರಿ, ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಎಲೆಕ್ಟ್ರಿಕ್ ಫ್ಯಾಕ್ಟರಿ, ಕ್ರೋಮ್ ಮತ್ತು ಲೆದರ್ ಫ್ಯಾಕ್ಟರಿ ಮುಂತಾದ ಕಾರ್ಖಾನೆಗಳಲ್ಲಿ ಸಮರ್ಪಕವಾಗಿ ಕೆಲಸಗಳು ನಡೆದಿದ್ದರೂ ಇನ್ನೂ ಹೆಚ್ಚಿಗೆ ಅಭಿವೃದ್ಧಿಯಾಗುವ ಆವಶ್ಯಕತೆ ಇದೆ. ಈ ಕಾರ್ಖಾನೆಗಳಲ್ಲಿ ಈಗ ಕೇಂದ್ರ ಸರ್ಕಾರದಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ ಹಣಕ್ಕಿಂತಲೂ ಹೆಚ್ಚಿಗೆ ಹಣವನ್ನು ಪಡೆದು ನಿರುದ್ಯೋಗಗಳಿಗೆ ಉದ್ಯೋಗಗಳನ್ನು ಒದಗಿಸುವ ಪ್ರಯತ್ನವನ್ನು ಮಾಡಬಹುದು. ಏಕೆಂದರೆ, ಈಗ ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ತೀವ್ರತೆಯಿಂದ ಕೂಡಿದೆ. ಅದಕ್ಕಾಗಿಯೇ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಾರಣವಾಗಿ ಒಂದು ಕೋಟಿ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಕೊಡಿಸುವ ಯೋಜನೆ ಇದೆ. ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ಶಿಕ್ಷಿತ ಮತ್ತು ಅಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಮೈಸೂರಿನಲ್ಲಿಯೂ ಈ ಸಮಸ್ಯೆ ಅಷ್ಟೇ ತೀವ್ರವಾಗಿದೆ ಎಂಬುದರಲ್ಲಿ ಸಂಶಯವೇನೂ ಇಲ್ಲ. ಆದ್ದರಿಂದ ಸಣ್ಣಪುಟ್ಟ ಉದ್ಯೋಗಗಳನ್ನು ವಿಶೇಷವಾಗಿ ಪ್ರಾರಂಭಿಸಬೇಕಾಗಿದೆ.

ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಎಂದರೆ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಒಬ್ಬನಿಗೆ ಉದ್ಯೋಗ ಒದಗಿಸಬೇಕಾದರೆ, 25 ಸಾವಿರ ರೂಪಾಯಿಗಳು ಖರ್ಚು ಆಗುತ್ತವೆ. ಆದರೆ ಕುಟೀರ ಮತ್ತು ಮಧ್ಯಮ ಉದ್ಯೋಗಗಳಲ್ಲಿ ಐದು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಒಬ್ಬನಿಗೆ ಉದ್ಯೋಗ ಸಿಕ್ಕುವುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ಉದ್ಯೋಗಗಳ ಆವಶ್ಯಕತೆ ಹೆಚ್ಚಾಗಿಬೇಕು. ಸಣ್ಣಪುಟ್ಟ ಸಣ್ಣಪುಟ್ಟ ಉದ್ಯಮಗಳು ಎಂದರೆ ಕೈಗಾಣ, ಪಕ್ಷಿ ಸಾಕುವುದು, ಡೈರಿಫಾರ್ಮ್, ಗಡಿಗೆಯ ವ್ಯವಸಾಯ, ಕಂಬಳಿನೇಯುವ ವ್ಯವಸಾಯ, ಬಡಗಿತನ, ಬೆಲ್ಲ ಮತ್ತು ಸಕ್ಕರೆ ಮುಂತಾದ ಉದ್ಯೋಗಗಳಿಗೆ ಹೆಚ್ಚಿಗೆ ಸರಕಾರದ ಸಹಾಯ ಆವಶ್ಯಕವಿದೆ. ಈ ವ್ಯವಸಾಯಗಳಿಗೆ ಉತ್ತೇಜನ ಸಿಕ್ಕುತ್ತಿದೆ ಭಾರತ ಸರ್ಕಾರವು ಖಾದೀ ಬೋರ್ಡ್, ಹ್ಯಾಂಡಿಕ್ರಾಫ್ಟ್ಸ ಬೋರ್ಡ್ ಮುಂತಾದ ಆರು ಬೋರ್ಡುಗಳನ್ನು ರಚಿಸಿದೆ. ಈ ಬೋರ್ಡುಗಳ ಮೂಲಕ ಸಿಕ್ಕುವ ಹಣದ ವಿನಿಯೋಗ ಸಂಪೂರ್ಣವಾಗಿ ಮಾಡಬೇಕಾದರೆ ಸರಕಾರವು ಆಸಕ್ತಿ ವಹಿಸಿ ಕೇಂದ್ರದ ಹಣವನ್ನು ಸಹಕಾರ ಸಂಘಗಳ ಮೂಲಕ ವಿತರಣ ಮಾಡಬೇಕು. ಇದರಲ್ಲಿ ಸ್ವಲ್ಪ ಏನಾದರೂ ಅಲಕ್ಷ್ಯಮಾಡಿದರೆ ಸಣ್ಣಪುಟ್ಟ ಉದ್ಯೋಗಗಳು ಬೆಳೆಯುವುದು ದುಸ್ತರ.

ಇನ್ನೊಂದು ಸಂಗತಿ. ಹಳೆಯ ಮೈಸೂರು ರಾಜ್ಯದಲ್ಲಿ ಹಳ್ಳಿಗಳ ಏಳಿಗೆಗಾಗಿ ಸರ್ ಎಂ. ವಿಶ್ವೇಶ್ವರಯ್ಯನವರು ತಯಾರಿಸಿದ ಯೋಜನೆ ಪೂರ್ಣವಾಗಿ ಹೊಸರಾಜ್ಯಕ್ಕೆ ಲಾಗುಮಾಡುವುದು ಅತ್ಯಾವಶ್ಯಕ. ಇಂಡಸ್ಟ್ರಿಯಲ್ ಬ್ಯಾಂಕುಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿಸಿ ಅವುಗಳ ಮೂಲಕ ವ್ಯವಸಾಯ ಸಹಕಾರ ಸಂಘಗಳಿಗೆ ಸಾಲಕೊಟ್ಟು ಎಲ್ಲ ಕುಟೀರ ಉದ್ಯೋಗಗಳನ್ನು ಪ್ರಗತಿಯ ಪಥದಮೇಲೆ ಹಚ್ಚಬೇಕಾಗಿದೆ. ಆಗ ಹಳ್ಳಿಗಳ ಅರ್ಥವ್ಯವಸ್ಥೆ ಭದ್ರವಾಗಿ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಣೆ ಹೊಂದಲು ಸಾಧ್ಯವಾಗುತ್ತದೆ.

ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ಈಗ ಎದ್ದು ಕಾಣಿಸುವ ಕಾರ್ಖಾನೆ ಎಂದರೆ ಬಿದರ್ ಜಿಲ್ಲೆಯ ಬಿದರಿನ ಕಾರ್ಖಾನೆ. ಇದರ ಕೀರ್ತಿ ನಮ್ಮ ಇಂಡಿಯಾ ದೇಶದಲ್ಲಿ ಅಷ್ಟೇ ಅಲ್ಲ. ಪರದೇಶಗಳಲ್ಲಿಯೂ ದಿನೇ ದಿನೇ ವ್ಯಾಪಿಸುತ್ತಿರುವುದು. ಆದರೆ ಅಲ್ಲಿಯ ಕೂಲಿ ಜನರಿಗೆ ಸಾಕಷ್ಟು ಸೌಕರ್ಯ ಸೌಲಭ್ಯಗಳು ದೊರಕುತ್ತಾ ಇಲ್ಲ. ಜಗತ್ತಿನಲ್ಲಿ ಪ್ರಸಿದ್ಧಿಹೊಂದಿರುವ ನಮ್ಮ ಬಿದರೆ ಜಿಲ್ಲೆಯ ಬಿದರಿನ ಕಾರ್ಖಾನೆಯ ಜನರನ್ನು ನಮ್ಮ ಸರ್ಕಾರದವರು ಲಕ್ಷ್ಯವಿಟ್ಟು ಅಭಿವೃದ್ಧಿ ಪಡಿಸಬೇಕೆಂಬುದು ನನ್ನ ಅತಿ ವಿನಯದ ಪ್ರಾರ್ಥನೆ.

ದೇಶದ ಪ್ರಗತಿ ಮತ್ತು ದೇಶದ ಆರ್ಥಿಕ ಉನ್ನತಿ ವಿದ್ಯುಚ್ಛಕ್ತಿಯ ಹೆಚ್ಚಿನ ಉತ್ಪಾದನೆಯನ್ನು ವಲಂಬಿಸಿದೆ. ನಮ್ಮ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿ

(ಶ್ರೀಮತಿ ಅನ್ನಪೂರ್ಣಾಬಾಯಿ)

ಯಿಂದ ಹುಟ್ಟುವಳಿ ಹೆಚ್ಚಾಗಿದೆ ಎಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ನಮ್ಮ ಮೈಸೂರು ಸರ್ಕಾರ ವಿದ್ಯುಚ್ಛಕ್ತಿಯನ್ನು ಮದ್ರಾಸ್, ಬೊಂಬಾಯಿ, ಆಂಧ್ರ ಪ್ರದೇಶಗಳಿಗೆ ಸೋಮಿದರದ ಮೇಲೆ ಒದಗಿಸಿದೆ. ಆದರೆ ನಮ್ಮ ಹೈದರಾಬಾದ್, ಬಿದರೆ ಜಿಲ್ಲೆಗಳಿಗೆ ಇದರ ಲಾಭ ಅಷ್ಟಾಗಿ ಸಿಕ್ಕಿಲ್ಲ. ಹಳೆಯ ಮೈಸೂರಿನಲ್ಲಿ ಒಕ್ಕಲತನ ವ್ಯವಸಾಯಕ್ಕೋಸ್ಕರ ವಿದ್ಯುಚ್ಛಕ್ತಿ ಪಂಪುಗಳನ್ನು ಒಕ್ಕಲಗರಿಗೆ ಒದಗಿಸಲಾಗಿದೆ. ನಮ್ಮ ಭಾಗಗಳಿಗೆ ಇದರ ಲಾಭ ಇನ್ನೂ ಸಿಕ್ಕಿಲ್ಲ. ಆದ್ದರಿಂದ ತುಂಗಭದ್ರಾ ಹೈಡ್ರೋ ಎಲೆಕ್ಟ್ರಿಕ್ ಪವರ್ ಯೋಜನೆ ಮುಗಿದಕೂಡಲೆ, ಟ್ರಾನ್ಸ್‌ಮಿಷನ್ ಲೈನನ್ನು ಹಾಕಿ ಗುಲ್ಬರ್ಗಾ ಮತ್ತು ಬಿದರೆ ಜಿಲ್ಲೆಗಳಿಗೆ ಅದರ ಉಪಯೋಗ ಲಭಿಸುವಂತೆ ಏರ್ಪಾಡು ಮಾಡಬೇಕು. ಇದರಿಂದ ವ್ಯವಸಾಯಕ್ಕೆ ಅಷ್ಟೇ ಅಲ್ಲ, ಒಕ್ಕಲುತನಕ್ಕೂ ಕೂಡ ಅಪಾರವಾಗಿ ಸಹಾಯ ಒದಗುವುದು. ಅದರ ಪರಿಣಾಮವಾಗಿ ಬಡತನದ ಬವಣೆಯಲ್ಲಿ ಸಿಕ್ಕಿರುವ ಜನರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅನುಕೂಲ ಉಂಟಾಗುವುದು; ಮತ್ತು ದೇಶದ ಆರ್ಥಿಕ ವ್ಯವಸ್ಥೆ ಸುಭದ್ರವಾಗಿ ನಿಲ್ಲುವುದಕ್ಕೆ ಒಂದು ಅವಕಾಶವಾಗುತ್ತದೆ. ಆದ್ದರಿಂದ ಈ ತುಂಗಭದ್ರಾ ಹೈಡ್ರೋ ಎಲೆಕ್ಟ್ರಿಕ್ ಪವರ್ ಯೋಜನೆಯಿಂದ ನಮ್ಮ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೂ ವಿದ್ಯುಚ್ಛಕ್ತಿಯ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನನ್ನ ಒತ್ತಾಯದ ಮತ್ತೊಂದು ಸೂಚನೆಯನ್ನು ಮಾಡಿ ಇಷ್ಟು ಹೊತ್ತು ಮಾತನಾಡಲು ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. SPEAKER in the Chair.]

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಮಾನ್ಯ ಸಭೆಯ ಮುಂದೆ ಇರುವ 27ನೆಯ ನಂಬರಿನ ಡಿಮ್ಯಾಂಡನ್ನು ನಾನು ಅನುಮೋದಿಸುತ್ತಾ ಕೈಗಾರಿಕೆಯ ಸಲುವಾಗಿ ಕೆಲವೊಂದು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕೈಗಾರಿಕೆಯ ಡಿಮ್ಯಾಂಡಿನಲ್ಲಿ ಗ್ರಾಮಾಂತರ ಕೈಗಾರಿಕೆಗಳಿಗೆ 60,45,500 ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಅದೇ ಪ್ರಕಾರ ಕೈಗಾರಿಕೆಯ ಶಿಕ್ಷಣಕ್ಕೆ 35,600 ರೂಪಾಯಿಗಳನ್ನು ಒದಗಿಸಿದ್ದಾರೆ. ನಾನು ಹೋದಸಾರಿ ಕೈಗಾರಿಕೆಯ ಶಾಲೆಗಳ ವಿಚಾರದಲ್ಲಿ ಮನವಿಮಾಡಿಕೊಂಡಹಾಗೆ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಯ ಶಾಲೆಗಳನ್ನು ಸ್ಥಾಪನೆ ಮಾಡುವುದು ಬಹಳ ಅವಶ್ಯವಾಗಿ ಕಾಣುತ್ತದೆ. ಏಕೆಂದರೆ ಸಾಧಾರಣವಾಗಿ ಹೆಣ್ಣುಮಕ್ಕಳಿಗೆ, ಬಾಲಕಿಯರಿಗೆ ಯಾವುದಾದರೂ ಒಂದು ಕಸಬನ್ನು ಕಲಿಸಬೇಕಾದರೆ ಈ ರೀತಿ ಒಂದು ಕೈಗಾರಿಕೆಯ ಶಿಕ್ಷಣಶಾಲೆ ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ನಮ್ಮ ಮನೆಗಳಲ್ಲಿ ಗೃಹಕೈಗಾರಿಕೆಗಳು ಹೆಚ್ಚಿಗೆ ಬೆಳೆಯಬೇಕಾದರೆ ಇಂತಹ ಕೈಗಾರಿಕೆಯ ಶಿಕ್ಷಣ ಸಂಸ್ಥೆಗಳು ಉತ್ತರ ಕರ್ನಾಟಕದಲ್ಲಿ ಬಹಳ ಅವಶ್ಯಕವಾಗಿವೆ ಎಂದು ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ಅದೇಪ್ರಕಾರ ಉತ್ತರ ಕರ್ನಾಟಕದಲ್ಲಿ ಹೆಚ್ಚು ಹೆಚ್ಚಾಗಿ ಕೈಗಾರಿಕೆಯ ಕೇಂದ್ರಗಳನ್ನು ತೆರೆಯಬೇಕಾಗಿದೆ. ಸಣ್ಣಸಣ್ಣ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬೆಳವಣಿಗೆಯಾಗಬೇಕಾದರೆ ಪ್ರತಿ ತಾಲ್ಲೂಕಿನಲ್ಲಿಯೂ ಚಿಕ್ಕ ಚಿಕ್ಕ ಕೈಗಾರಿಕೆಯ ಕೇಂದ್ರಗಳನ್ನು ಸ್ಥಾಪಿಸಬೇಕಾಗಿದೆ; ಮತ್ತು ಪಾರ್ಟ್‌ಟೈಮ್ ಕೈಗಾರಿಕೆಯ ಶಾಲೆಗಳನ್ನು ಸ್ಥಾಪಿಸಬೇಕಾಗಿದೆ. ಕೈಗಾರಿಕಾ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನೇಯಿಗೆ, ಬೀ. ಕೀಪಿಂಗ್, ಗಾಜು, ಮುಂತಾದ ಗೃಹಕೈಗಾರಿಕೆಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಆಸಕ್ತಿವಹಿಸುವ ಮನೋಭಾವನೆಯನ್ನು ಉಂಟುಮಾಡುವುದು ಅತ್ಯಾವಶ್ಯಕ. ಈ ದೃಷ್ಟಿಯಿಂದ ಪ್ರತಿ ಹೈಸ್ಕೂಲಿನಲ್ಲೂ, ಇಂಡಸ್ಟ್ರಿಯಲ್ ಕೇಂದ್ರವನ್ನು ಪ್ರಾರಂಭ ಮಾಡುವುದು ಯೋಗ್ಯ ಎಂದು ನಾನು ತಿಳಿಸಬಯಸುತ್ತೇನೆ. ಇದೇ ಪ್ರಕಾರ ಉಣ್ಣೆಯ ಕೈಗಾರಿಕೆಯ ಯೋಜನೆಯನ್ನು ಸ್ಟೇಟ್ ಬೋರ್ಡಿನವರು ಇಂಟ್ರೊಡ್ಯೂಸ್ ಮಾಡಿದ್ದಾರೆ. ಇಂಥಾ ಉಣ್ಣೆಯ ಕಾರ್ಖಾನೆಯು ಪ್ರತಿ ತಾಲ್ಲೂಕಿಗೂ ಅವಶ್ಯಕ. ಪ್ರತಿಯೊಂದು ಊರಿನಲ್ಲೂ ಒಬ್ಬರಲ್ಲ ಒಬ್ಬರು ನೇಯುವವರು ಇದ್ದೇ ಇರುತ್ತಾರೆ. ಆದ್ದರಿಂದ ಉಣ್ಣೆಯ ಕೈಗಾರಿಕೆಯನ್ನ ಸಂಸ್ಥಾನಕ್ಕೆಲ್ಲಾ ಒಂದು ಯೂನಿಟ್ ಆಗಿ ಮಾಡದೆ ಪ್ರತಿಯೊಂದು ತಾಲ್ಲೂಕನ್ನೂ ಯೂನಿಟ್ ಆಗಿ ಮಾಡುವುದು ಅವಶ್ಯಕವೆಂದು ಹೇಳುತ್ತೇನೆ. ಸೆಂಟ್ರಲ್ ಗೌರ್ನಮೆಂಟಿನವರು ಹೀಗೆ ಎಷ್ಟೋ ವಿಲೇಜ್ ಇಂಡಸ್ಟ್ರೀಸ್‌ಗೆ ಮುಖ್ಯವಾದ ಸ್ಥಾನವನ್ನು ಕೊಟ್ಟಿರುತ್ತಾರೆ. ಕೇಂದ್ರ ಸರ್ಕಾರದವರು ಇದಕ್ಕಾಗಿ ಕೊಡುವಂಥ ಹಣದಿಂದ ಸ್ಟೇಟ್ ಬೋರ್ಡಿನವರು ಸಹಾಯ ಮಾಡಬೇಕಾಗಿದೆ. ಇಂಥ ಬೋರ್ಡ್ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೂ ಸ್ಥಾಪನೆ ಆಗಿಲ್ಲ. ಈ ದೃಷ್ಟಿಯಿಂದ, ವಿಲೇಜ್ ಇಂಡಸ್ಟ್ರೀಸ್ ಬೋರ್ಡ್, ಹ್ಯಾಂಡ್‌ಲೂಮ್ ಬೋರ್ಡ್ ಮುಂತಾದುವುಗಳನ್ನು ಸ್ಟೇಟ್‌ಲೆವೆಲ್‌ನಲ್ಲಿ ಇನ್ನೂ ಮಾಡಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಅದಷ್ಟು ತೀವ್ರವಾಗಿ ಗಮನವಿಟ್ಟು ಇಂಥ ಬೋರ್ಡುಗಳನ್ನು ಸ್ಟೇಟಿನಲ್ಲಿ ಬೇಗನೆ ಪ್ರಾರಂಭ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಉತ್ತರ ಕರ್ನಾಟಕದ ಕಾರವಾರ ಜಿಲ್ಲೆಯ ವಿಷಯವಾಗಿ ಸಾಕಷ್ಟು ಜನರು ಮಾತನಾಡಿದ್ದಾರೆ. ಅಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದು ಅವಶ್ಯಕ. ಗಂಧದ ಕೆತ್ತನೆಯ ಕೆಲಸ, ಬಿದಿರಿನ ಕೆಲಸ, ಸಿರಾಮಿಕ್ ಕೈಗಾರಿಕೆ, ಮತ್ತು ಬೆತ್ತದ ಕೆಲಸ ಈ ಕೆಲಸಗಳನ್ನು ಬಹಳ ಹಣ ಉಪಯೋಗಿಸದೆ ಚಿಕ್ಕ ಬಂಡವಾಳ ಉಪಯೋಗಿಸಿ ಮಾಡಬಹುದು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಕೊಡುವುದು ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಪೇಪರ್ ಇಂಡಸ್ಟ್ರೀಸ್ ಸಲುವಾಗಿ ಲೋಂಡಾದಲ್ಲಿ ಇರುವಂಥ ಕಾರ್ಖಾನೆಯನ್ನು ಹೆಚ್ಚಿಗೆ ಡೆವಲಪ್‌ಮಾಡಿ ಬೆಳಸಿ ನಮ್ಮ ಉತ್ತರ ಕರ್ನಾಟಕಕ್ಕೆ ಹೆಚ್ಚಿಗೆ ಪ್ರೋತ್ಸಾಹ ಕೊಡುವುದು ಅವಶ್ಯಕ. ಕನ್ನಾಪೂರ್ ಸಿರಾಮಿಕ್ ಇಂಡಸ್ಟ್ರಿ ಬಹಳ ದಿವಸಗಳಿಂದ ನಡೆಯುತ್ತಿದೆ. ಅದನ್ನು ಎಕ್ಸಪೆರಿಮೆಂಟಲ್ ಬೇಸಿಸ್‌ನಲ್ಲಿ ಮಾಡುತ್ತಿದ್ದಾರೆ, ಅದನ್ನು ಪುನರ್ರಚನೆಗೊಳಿಸಿ ಸಿರಾಮಿಕ್ ಉದ್ಯೋಗವನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಆಸ್ಪದ ಮಾಡಿಕೊಡುವುದು ಅವಶ್ಯಕ. ನಾವು ಯಾವುದೇ ಒಂದು ಗೃಹ ಕೈಗಾರಿಕೆ, ವಿಲೇಜ್ ಇಂಡಸ್ಟ್ರೀಸ್ ಅಥವಾ ಗ್ರಾಮಕೈಗಾರಿಕೆಯನ್ನು ಕೈಕೊಂಡರೂ ಅದನ್ನು ಕೇವಲ ಡಿಸ್ಟ್ರಿಕ್ಟ್ ಅಥವಾ ಮುಖ್ಯ ಸ್ಥಳಗಳಲ್ಲಿ ಇಡದೆ ಪ್ರತಿಯೊಂದು ವರ್ಕ್‌ಷಾಪನ್ನು ಪ್ರತಿ ತಾಲ್ಲೂಕಿನಲ್ಲೂ ಪ್ರಾರಂಭ

ಮಾಡುವ ಯೋಜನೆಯನ್ನು ಅತಿ ಅವಶ್ಯವಾಗಿ ಕೈಗೊಳ್ಳಬೇಕಾಗಿದೆ, ಅವು ದೊಡ್ಡ ಪ್ರಮಾಣದಲ್ಲಿ ಅಲ್ಲದೆ ಚಿಕ್ಕ ಪ್ರಮಾಣದಲ್ಲಿಯೂ ಸ್ವಲ್ಪಮಟ್ಟಿಗೆ ಹಳ್ಳಿಯ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಅನುಕೂಲ ವಾಗುತ್ತವೆ. ಒಂದು ಸಣ್ಣ ಗುದ್ದಲಿ ಮಾಡಬೇಕಾದರೆ ಅದಕ್ಕೆ ಬೇಕಾದ ಸಲಕರಣೆಗಳನ್ನು ತರಲು ಜಿಲ್ಲೆಗೆ ಹೋಗಬೇಕಾಗುತ್ತದೆ. ಈ ವಿಷಯದಲ್ಲಿ ಸಂಶೋದನೆ ಆಗಬೇಕಾಗಿದೆ, ಆ ಸಂಶೋಧನೆಗೆ ಈಗ ಆಸ್ಪದ ಬಹಳ ಕಡಮೆಯಾಗಿದೆ. ಈ ದೃಷ್ಟಿಯಿಂದ ಪ್ರತಿಯೊಂದು ತಾಲ್ಲೂಕಿಗೆ ಬೇಕಾದ ಸಲಕರಣೆಗಳನ್ನು ಒದಗಿಸುವ ಸಲುವಾಗಿ ಒಂದು ಸ್ಕೂಲನ್ನು ಎಕ್ಸ್‌ಪೆರಿಮೆಂಟ್ ಬೇಸಿಸ್‌ನಲ್ಲಿ ತೆರೆಯಬೇಕಾದ್ದು ಅವಶ್ಯಕವಾಗಿದೆ.

ಇದೇ ಪ್ರಕಾರ ಕೇಂದ್ರ ಸರ್ಕಾರದವರು ಸಂಸ್ಥಾನದಲ್ಲಿ ರೂರಲ್ ಇಂಡಸ್ಟ್ರಿಯಲ್ ಸ್ಕೀಮಿಗೋಸ್ಕರ ಸಾಕಷ್ಟು ಹಣದ ಸಹಾಯವನ್ನು ಕೊಡುತ್ತಿದ್ದಾರೆ. ಇದರ ಪ್ರಚಾರ ನಮ್ಮ ಕಡೆಗೆ ಅಷ್ಟಾಗಿ ಇಲ್ಲ ಎಂದು ಹೇಳುತ್ತೇನೆ. ಏಕೆಂದರೆ ಇದರಲ್ಲಿ ಪ್ರತಿಯೊಬ್ಬನು ಕೆಲಸಗಾರ ಬಡಗಿ, ಕಮ್ಮಾರ ಯಾರೇ ಇರಲಿ ಆತನು ಚಿಕ್ಕ ಉದ್ಯೋಗವನ್ನು ತಾಲ್ಲೋಕಿನಲ್ಲಿ ಸ್ಥಾಪನೆ ಮಾಡಿಕೊಂಡು ಹೋಗುವುದಕ್ಕೆ ಅನುಕೂಲತೆಗಳು ಕೇಂದ್ರ ಸರ್ಕಾರದಿಂದ ಸಿಕ್ಕುತ್ತವೆ. ಇದಕ್ಕೆ ಹೆಚ್ಚಿಗೆ ಗಮನಕೊಟ್ಟು ಕೇಂದ್ರ ಸರ್ಕಾರದ ಹಣದ ಸಹಾಯ ಪಡೆಯುವ ಸಲುವಾಗಿ ಒಂದು ಇಂಡಸ್ಟ್ರೀಸ್ ಬೋರ್ಡನ್ನು ಕೂಡಲೇ ಸ್ಥಾಪನೆ ಮಾಡುವುದು ಅವಶ್ಯಕ. ಹಾಗೆ ಮಾಡಿದರೆ ಕೇಂದ್ರ ಸರ್ಕಾರದ ಸಹಾಯ ಪ್ರತಿಯೊಂದು ಹಳ್ಳಿಗೂ ಮತ್ತು ಪ್ರತಿಯೊಂದು ಮನೆಗೂ, ಮುಟ್ಟುವುದಕ್ಕೆ ಅವಕಾಶವಿದೆ. ಆದರೆ ಸ್ಟೇಟ್ ಸರ್ಕಾರದವರು ಗಮನಕೊಟ್ಟು ಈ ಯೋಜನೆಯನ್ನು ಕಾರ್ಯಗತ ಮಾಡುವುದು ಅತ್ಯ ಅವಶ್ಯವಾಗಿದೆ. ಗೃಹ ಕೈಗಾರಿಕೆಯ ಕೆಲಸ ಎಷ್ಟೋ ಕಡೆ ನಡೆಯುತ್ತಾ, ಜನರ ಲಕ್ಷ್ಯಕ್ಕೆ ಬಂದರೂ ಕೂಡ ಅದು ಸರಿಯಾದ ಸ್ಥಿತಿಯಲ್ಲಿ ಅವರ ಲಕ್ಷ್ಯಕ್ಕೆ ಬಂದಿಲ್ಲ, ಎಂದು ನನಗನ್ನಿಸುತ್ತದೆ. ಗೃಹ ಕೈಗಾರಿಕೆ ಮಾಡುವುದರ ಜೊತೆಗೆ ಹೆಣ್ಣುಮಕ್ಕಳ ಸಲುವಾಗಿ ಬತ್ತಿ ಇವು ಕುಟ್ಟುವುದು, ನೇಯ್ಗೆ ಕೆಲಸ, ಹೊಲಿಗೆ ಕೆಲಸ, ಅವರಲ್ಲಿ ಸಂಘಟನೆ ಉಂಟುಮಾಡುವ ವಿಷಯಗಳಿವೆ. ಈ ವಿಚಾರದಲ್ಲಿ ಕೆಲವೊಂದು ಕಡೆ ಕೆಲಸ ನಡೆದಿದೆ. ಆದರೆ ಅಂತಹ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದಮೇಲೆ ಆ ಮಹಿಳೆಯರ ಸಂಘಗಳೂ ಕೆಲಸ ಮಾಡುವುದು ಕಷ್ಟವಾಗಿದೆ. ಅವರಿಗೆ ಕೋ-ಆಪರೇಟೀವ್ ಸೊಸೈಟಿಯ ಲೆಕ್ಕಗಳನ್ನು ಇಡಲು ಸ್ವಲ್ಪ ತೊಂದರೆಯಾಗಿದೆ. ಇಂಥ ಸಂಘಗಳನ್ನು ಹೆಣ್ಣು ಮಕ್ಕಳು ಪ್ರಾರಂಭಮಾಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಗ್ರಾಮಾಂತರ ಕೈಗಾರಿಕೆಗಳನ್ನು ಪ್ರಾರಂಭಮಾಡುವಾಗ ಪ್ರಾರಂಭದಲ್ಲಿಯೇ ಅಂತಹ ನಿಯಮಗಳನ್ನು ಅನ್ವಯಿಸದೇ ಕೆಲವೊಂದು ನಿಯಮಗಳ ವಿಚಾರದಲ್ಲಿ ಅವರಿಗೆ ರಿಯಾಯಿತಿಕೊಟ್ಟು ಹೆಂಗಸರ ಸೊಸೈಟಿಗಳು ಬೆಳೆಯುವಂತೆ ಆರೀತಿ ಗ್ರಾಮ ಕೈಗಾರಿಕೆಗಳು ಬೆಳೆಯುವಂತೆ ಸರ್ಕಾರದವರು ಕೂಡಲೇ ಪ್ರೋತ್ಸಾಹ ಕೊಡುವುದು ಅತಿ ಅವಶ್ಯ ಎಂದು ಹೇಳುತ್ತೇನೆ.

ಸ್ಟೇಟ್ ಬೋರ್ಡುಗಳನ್ನು ನಿಯಮಿಸುವಾಗ್ಗೆ ಮಹಿಳೆಯರನ್ನು ಹಾಕುವುದು ಅವಶ್ಯಕ. ಅಡವಿಯ ಮಹಿಳಾ ಕೂಲಿಗಾರರಿಗೆ ಹೆಚ್ಚಿನ ಪ್ರಾಶಸ್ತ್ಯ ಅಗತ್ಯ. ಮಹಿಳೆಯರಿಗೆ ಪ್ರಾತಿನಿಧ್ಯ ಅವಶ್ಯ. ಕೇಂದ್ರ ಸರಕಾರದ ಯೋಜನೆಗಳ ಪ್ರಸಾರ ಹೆಚ್ಚಾಗಿ ಆಗಬೇಕು. ಅದೇ ಪ್ರಕಾರ ಮಹಿಳೆಯರು ಯಾವ ಕೈಗಾರಿಕೆಗಳಲ್ಲಿ ಕೆಲಸ ಮಾಡುವುದಕ್ಕೆ ಶಕ್ತಿಯಿದೆ ಅಂಥ ಕೈಗಾರಿಕೆಗಳಲ್ಲಿ ಹೆಣ್ಣುಮಕ್ಕಳನ್ನು ರಾಜ್ಯಾದ್ಯಂತ ಇಟ್ಟು ಬಿಡಬೇಕೆಂದು ಸಲಹೆ ಮಾಡುತ್ತೇನೆ. ಹೆವಿ ಲೇಬರ್ ಕೈಗಾರಿಕೆಗಳಿಲ್ಲದಿರುವ ಕಡೆ, ಸಣ್ಣ ಸಣ್ಣ ಕೆಲಸಮಾಡಿ ಜೀವನ ಸಾಗಿಸುವುದಕ್ಕೆ ಅವಕಾಶವಿರುವ ಕಡೆ ಸ್ಥಾನಗಳನ್ನು ಹೆಣ್ಣುಮಕ್ಕಳ ಸಲುವಾಗಿ ಮೀಸಲಾಗಿಡುವುದು ಅತ್ಯಾವಶ್ಯಕವಾಗಿದೆ. ಕೈಗಾರಿಕೆಯ ಯೋಜನೆಗಳನ್ನು ಸಾಕಷ್ಟು ಪ್ರಚಾರಮಾಡಲು ಸ್ಟೇಟ್ ಬೋರ್ಡ್ ಸ್ಥಾಪನೆ ಮಾಡುವಾಗ ಮಹಿಳೆಯರಿಗೂ ಕೂಡ ಅಲ್ಲಿ ಸ್ಥಾನಕೊಡಬೇಕು. ಖಾದಿ ಗ್ರಾಮ ಕೈಗಾರಿಕೆಯಿದೆ ಮತ್ತು ಕೆಲವು ಬೋರ್ಡುಗಳಿವೆ. ಕೈಗಾರಿಕೆಗಳು ಬೆಳೆಯಬೇಕಾದರೆ ಪ್ರತಿಯೊಂದು ಸ್ಟೇಟ್ ಬೋರ್ಡಿನಲ್ಲೂ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಅಡವಿಯಲ್ಲಿರುವ ಕೂಲಿಗಾರರ ಬಗ್ಗೆ ಒಂದೆರಡು ಮಾತನ್ನು ಹೇಳಲಿಚ್ಛಿಸುತ್ತೇನೆ. ಈಗ ಅಲ್ಲಲ್ಲಿ ಸರ್ಕಾರದವರು ಜೇನುಸಾಕಿ ಉಪಯೋಗ ಪಡೆಯುತ್ತಿದ್ದಾರೆ. ಆದರೆ ಅದರಿಂದ ಸಾಕಷ್ಟು ಉಪಯೋಗವಾಗದೆ ಸರ್ಕಾರದ ಹಣ ಹಾಳಾಗುತ್ತಿದೆ; ಸರಿಯಾದ ಅನುಕೂಲವಾಗುತ್ತಿಲ್ಲ. ಆದರೆ ನಮ್ಮ ಉತ್ತರ ಕರ್ಣಾಟಕದಲ್ಲಿ ಹೊನ್ನಾವರದ ಹತ್ತಿರ ಜೇನು ಸಾಕುವ ಉದ್ಯೋಗದಿಂದ ಬಹಳ ಪ್ರಗತಿಯಾಗಿದೆ; ಅಲ್ಲಿ ವಿಶೇಷವಾಗಿ ಫಾಯಿದೆ, ಲಾಭ ಪಡೆಯುವುದಕ್ಕೆ ಪ್ರಯತ್ನವಿದೆ, ಸಣ್ಣ ಸಣ್ಣ ಪೆಟ್ಟಿಗೆಗಳನ್ನಿಟ್ಟು ಜೇನು ನೊಣ ಸಾಕಿ ಅದರಿಂದ ತಿಂಗಳಿಗೆ ಸುಮಾರು ಹತ್ತು ರೂಪಾಯಿಗಳನ್ನಾದರೂ ಉತ್ಪನ್ನಮಾಡುವ ಶಕ್ತಿ ಅಲ್ಲಿನವರಿಗಿದೆ. ಆದ್ದರಿಂದ ಸರ್ಕಾರದಲ್ಲಿರುವ ಜೇನು ಸಾಕುವ ಒಂದು ವ್ಯವಸ್ಥೆಯಿಂದ ನಷ್ಟವೆಂದು ತಿಳಿದುಕೊಳ್ಳಬಾರದು. ಇನ್ನೂ ಬಹಳ ವಿಷಯ ಹೇಳಬೇಕಾಗಿತ್ತು. ಕಾಲವಿಲ್ಲದ್ದರಿಂದ ಇಷ್ಟಕ್ಕೆ ಮುಗಿಸಿ ದೇಶದ ಹಿತದೃಷ್ಟಿಯಿಂದ ಗೃಹ ಕೈಗಾರಿಕೆಗಳನ್ನು ಎಲ್ಲಾ ಕಡೆಯೂ ಕೈಕೊಂಡು ಸಣ್ಣ ಸಣ್ಣ ಉದ್ಯಮಗಳು ಹೆಚ್ಚಾಗಿ ಬೆಳೆಯುವಂತೆ ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡಲುಪೇಟೆ).—ಮಾನ್ಯ ಅಧ್ಯಕ್ಷರೆ, ಈ ದಿವಸ 43ನೆಯ ಡಿಮ್ಯಾಂಡಿನಲ್ಲಿ ಸೂಚಿತವಾಗಿರುವ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನಡೆಯುತ್ತಿರುವ ಕೆಲವು ವಿಷಾದ ವಿಚಾರಮತ್ತು ಅದಕ್ಕೆ ಆಗುತ್ತಿರುವ ಆಯುವ್ಯಯ ಸರ್ಕಾರದ ಗಮನಕ್ಕೆ ತಂದು ಸರ್ಕಾರ ಯಾವ ರೀತಿ ಅದನ್ನು ಬಂದೋಬಸ್ತು ಮಾಡಬೇಕೋ ಆ ರೀತಿ ಮಾಡಲು ವ್ಯವಸ್ಥೆ ಮಾಡಬೇಕೆಂದು ಕೇಳುವುದಕ್ಕಾಗಿ ನಾನು ಈ ನಿಂತಿದ್ದೇನೆ. ವಿದ್ಯುಚ್ಛಕ್ತಿ ಇಲಾಖೆಯು ಸ್ಥಾಪನೆಯಾಗಿ ಸುಮಾರು ಅರವತ್ತು ವರ್ಷಗಳಾಗಿವೆ. ಇದು ಸರ್ಕಾರಕ್ಕೆ ಉತ್ಪತ್ತಿ ಕೊಡುವ ಬಾಬುಗಳಲ್ಲಿ ಮೂರನೆಯದಾಗಿತ್ತು; ಮೊದಲನೆಯದು ಜನರಲ್ ರೆವೆನ್ಯೂ, ಎರಡನೆಯದು ಎಕ್ಸೈಜ್, ಮೂರನೆಯದು ವಿದ್ಯುಚ್ಛಕ್ತಿ ಇಲಾಖೆ ಹೀಗೆ ಆದಾಯ ಕೊಡುತ್ತಿದ್ದ ವಿದ್ಯುಚ್ಛಕ್ತಿ ಇಲಾಖೆ ಈಗ ನಷ್ಟದಲ್ಲಿ ನಡೆಯುತ್ತಿದೆ. ನಷ್ಟವಾಗುವುದಕ್ಕೆ ನಿಜವಾಗಿಯೂ ಕಾರಣವಿರಬೇಕು, ಇದ್ದೇ ಇದೆ ಎಂದು ಹೇಳಲೇಬೇಕಾಗಿದೆ. ಈಗ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ಡೊಮೆಸ್ಟಿಕ್ ಪರ್ಪಸ್, ಇರಿಗೇಷನ್ ಪರ್ಪಸ್ ಮತ್ತು ಇಂಡಸ್ಟ್ರಿಯಲ್ ಪರ್ಪಸ್—ಈ ಮೂರಕ್ಕೆ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಅದರ ಪೈಕಿ ಸುಮಾರು ಶೇಕಡ 85 ಭಾಗವನ್ನು ಇಂಡಸ್ಟ್ರಿಯಲ್ ಪರ್ಪಸ್‌ಗೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಉಪಯೋಗಿಸಿ ಬಾಕಿ ಉಳಿದ 15 ಭಾಗವನ್ನು ಇತರ ಎಲ್ಲಾ ಪರ್ಪಸ್‌ಗಳಿಗೆ ಉಪಯೋಗಿಸುತ್ತಿದ್ದಾರೆಂದು ಹೇಳಬಹುದು. ಹೀಗೆ ಕಮರ್ಷಿಯಲ್ ಪರ್ಪಸ್‌ಆದ ಕೈಗಾರಿಕೆಗಳಿಗೆ ಯಾವ ದರದಲ್ಲಿ ವಿದ್ಯುಚ್ಛಕ್ತಿ ಸರಬರಾಯಿ ಆಗಿದೆಯೆಂದರೆ ಉದಾಹರಣೆಗೆ ಕೆ. ಜಿ. ಎಫ್. ಗಣಿಗೆ ಸುಮಾರು ಒಂದು ಯೂನಿಟ್ಟಿಗೆ 2¼ ಕಾಸಿನಂತೆ, ಕೊಡುತ್ತಿದ್ದಾರೆ. ರಾಗಿ, ಜೋಳ, ಬೆಳೆ ಬೆಳೆಯುವುದಕ್ಕೆ ಒಂದು ಯೂನಿಟ್ಟಿಗೆ 9 ಕಾಸು, ಮನೆಗಳಲ್ಲಿ ಉರಿಸುವ ದೀಪಕ್ಕೆ ಒಂದು ಯೂನಿಟ್ಟಿಗೆ ನಾಲ್ಕಾಣೆ ಹೀಗೆ ಛಾರ್ಜು ಮಾಡುತ್ತಿದ್ದಾರೆ. ಇಷ್ಟು ವಹಿವಾಟಿರುವ ಇಲಾಖೆಯನ್ನು ನಮ್ಮಂಥ ಶೇಕಡ 15 ಭಾಗ ಉಪಯೋಗಿಸುವ ಜನರು ಹಣ ಕೊಟ್ಟು ನಡೆಸಬೇಕಾಗಿದೆ. ನಮ್ಮ ಈ ವ್ಯವಸಾಯೋದ್ಯಮ ಬೇಕಾದಷ್ಟು ಲಾಭ ಪಡೆದು ಡಿವಿಡೆಂಡ್‌ಹಂಚುವ ಇಂಡಸ್ಟ್ರಿಯಲ್ ಕನ್ಸರ್ನ್ ಅಲ್ಲ. ಹೀಗಿದ್ದಾಗ್ಲೂ ಈ ಬಾಬಿಗೆ ಇಷ್ಟು ಜಾಸ್ತಿ ರೇಟನ್ನು ವಿಧಿಸಿರುವುದು ಯಾವ ನ್ಯಾಯ ಎಂದು ಕೇಳುತ್ತಿದ್ದೇನೆ. ವಿದ್ಯುಚ್ಛಕ್ತಿ ಇಲಾಖೆಯವರು ಎಲ್ಲಾದರೂ ಈ ವ್ಯವಸಾಯೋದ್ಯಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಕೆಲಸ ತೆಗೆದುಕೊಳ್ಳಬೇಕಾದರೆ ಶೇಕಡ 5 ರಿಂದ 10 ರವರೆಗೆ ವರಮಾನ ಬರುವ ಹಾಗಿದ್ದರೇ ತೆಗೆದುಕೊಳ್ಳುವುದಕ್ಕೆ ಒಪ್ಪುವುದು. ಹಾಗಾದರೂ ಇಷ್ಟು ನಷ್ಟವಾಗುವುದಕ್ಕೆ ಕಾರಣವೇನು ? ಬಹುಶಃ ಗೆಜೆಟೆಡ್ ಸ್ಥಾನಗಳನ್ನು ಕೆಲವು ಅಧಿಕಾರಿಗಳಿಗೆ ಕೊಡುವ ಉದ್ದೇಶದಿಂದ ಹೆಚ್ಚು ಹೆಚ್ಚಾಗಿ ಕೆಲಸವಿರಲಿ, ಇಲ್ಲದಿರಲಿ, ಸ್ಥಾನಕಲ್ಪನೆ ಮಾಡುತ್ತಿರುವುದು, ಎಸ್ಟಿಮೇಟ್ ಮಾಡುವಾಗ ಜಾಗ ಸೃಷ್ಟನೆ ಮಾಡುವುದು, ಹೆಚ್ಚು ಹೆಚ್ಚಾಗಿ ವ್ಯಾನು ಮತ್ತು ಜೀಪುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತಿರುವುದು, ಗೆಜೆಟೆಡ್ ಆಫೀಸರುಗಳಿಗೆ ಕನ್ವೇಯನ್ಸ್ ಅಲೋಯನ್ಸ್ ಜೊತೆಗೆ ವ್ಯಾನುಗಳನ್ನೂ, ಜೀಪುಗಳನ್ನೂ ಕೊಡುತ್ತಿರುವುದು, ಹೀಗೆ ಅನೇಕ ಕಾರಣಗಳಿವೆಯೆಂದು ಧಾರಾಳವಾಗಿ ಹೇಳಬಹುದಾಗಿದೆ. ಕೆಲವು ಗೆಜೆಟೆಡ್ ಅಧಿಕಾರಿಗಳಿಗೆ ಪ್ರಮೋಷನ್ ಕೊಡುವ ಉದ್ದೇಶದಿಂದ ಸ್ಥಳವನ್ನು ಕಲ್ಪಿಸಿ ಬಡ್ತಿ ಕೊಟ್ಟು ಅವರ ಕೆಲಸದ ಸ್ಥಳ ಎಲ್ಲೋ ಇರುವುದು ಅವರು ವಾಸ ಮತ್ತು ಕೆಲಸ ಎಲ್ಲೋ ಮಾಡುವುದು ಇದಕ್ಕೆಲ್ಲಾ ಅವಕಾಶ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ದೊಡ್ಡ ದೊಡ್ಡ ಅಧಿಕಾರಿಗಳಿಗೆ ವಾಹನದ ಭತ್ಯ ಕೊಡುವ ಉದ್ದೇಶವಾದರೂ ಏನು ? ಅವರವರೇ ಸ್ವಂತವಾಗಿ ವಾಹನವನ್ನಿಟ್ಟುಕೊಂಡು ಉಪಯೋಗಿಸಬೇಕೆಂದಲ್ಲವೆ ? ವ್ಯಾನು, ಸೊಗಸಾದ ಜೀಪು ಕೊಟ್ಟು ಕನ್ವೇಯನ್ಸ್ ಅಲೋಯನ್ಸ್ ಏಕೆ ಕೊಡುತ್ತಿದ್ದಾರೋ ಏನೋ ನನಗೆ ಗೊತ್ತಾಗಿಲ್ಲ. ಹೀಗೆ ಅನ್ಯಾಯವಾಗಿ ಸರ್ಕಾರದ ಹಣ ವ್ಯಯವಾಗುತ್ತಿದೆ. ಹೀಗೆ ಖರ್ಚುಮಾಡಬಹುದೆ ? ಈ ವ್ಯಾನುಗಳನ್ನು ಕೊಡುವುದರ ಜೊತೆಗೆ ಪೆಟ್ರೋಲು, ಆಯಿಲ್, ಒಬ್ಬ ಡ್ರೈವರ್ ಎಲ್ಲಾ supply ಆಗುತ್ತಿದೆ. ಡ್ರೈವಿಂಗ್ ಬಾರದಿರುವ ದೊಡ್ಡ ದೊಡ್ಡ ಅಧಿಕಾರಿಗಳು ಕೂಡ ಡ್ರೈವರನ್ನಿಟ್ಟುಕೊಂಡಿಲ್ಲ. ಪ್ರತಿಯೊಬ್ಬರೂ ಇಲಾಖೆಯ ಡ್ರೈವರನ್ನೇ ತಮ್ಮ ಕಾರನ್ನು ನಡೆಸಲು ಉಪಯೋಗಿಸಿಕೊಳುತ್ತಿದ್ದಾರೆಯೇ ಹೊರತು ತಾವು ಸ್ವಂತವಾಗಿ ಡ್ರೈವರನ್ನಿಟ್ಟುಕೊಂಡಿಲ್ಲ. ಹೀಗೆ ಡ್ರೈವರನ್ನಿಟ್ಟುಕೊಳ್ಳದೆ ಹೆಂಗಸರು ಮದುವೆ, ಮುಂಜಿ ಮುಂತಾದುವಕ್ಕೆ ಹೋಗಲು ಸರ್ಕಾರಿ ಡ್ರೈವರನ್ನು, ಪೆಟ್ರೋಲು, ಎಣ್ಣೆ ಮುಂತಾದ್ದನ್ನು ಉಪಯೋಗಿಸುವುದು ಸರಿಯಲ್ಲ. ಸರ್ಕಾರದಿಂದ ವ್ಯಾನು, ಜೀಪು, ಪೆಟ್ರೋಲು, ಡ್ರೈವರು ವಗೈರೆ ಕೊಟ್ಟಮೇಲೆ ಅಲೋಯನ್ಸ್ ಕೊಡಬೇಕಾಗಿಲ್ಲ. ಅಲೋಯನ್ಸ್ ಕೊಟ್ಟರೆ ವ್ಯಾನು, ಡ್ರೈವರು, ಪೆಟ್ರೋಲು ಕೊಡಬೇಕಾಗಿಲ್ಲ. ಈಗ ಕನ್ವೇಯನ್ಸ್ ಅಲೋಯನ್ಸ್ ಜೊತೆಗೆ ವ್ಯಾನು, ಪೆಟ್ರೋಲು ವಗೈರೆ ಕೊಡುವುದರಿಂದ ಹಣ ದ್ವಿಗುಣವಾಗಿ ವ್ಯಯವಾಗುತ್ತಿದೆ. ಇದು ಸರಿಯಲ್ಲ. ಅಲ್ಲದೆ ಇನ್ಸ್‌ಪೆಕ್ಟರು ವ್ಯಯವಾಗಿರುವುದಕ್ಕಲ್ಲ ಲೆಕ್ಕ, ತಪಶೀಲು ಬರೆಯಬೇಕು. ಅಧಿಕಾರಿಗಳು ಇನ್ಸ್‌ಪೆಕ್ಟರಿಗೆ ಬರಿ ಎಂದು ಹೇಳಿದಮೇಲೆ ಅವರು 200 ಮೈಲಿ ಹೋಗಿರುವುದಾಗಿ ಹೇಳಿದರೆ ಅದಕ್ಕೆ ತಪಶೀಲು ಬರೆಯಬೇಕು, ದಾಕ್ಷಿಣ್ಯಕ್ಕೊಳಗಾಗಿ ಇನ್ಸ್‌ಪೆಕ್ಟರು ಬರೆಯಲೇಬೇಕು, ಸಾಹೇಬರು ಎಂದು ಹೆದರಿ ಬರೆಯಲೇಬೇಕು. ಸಾಹೇಬರು ಹೀಗೆ ಇನಸ್ಪೆಕ್ಟರ ದಾಕ್ಷಿಣ್ಯಕ್ಕೆ ಒಳಗಾಗುತ್ತಾರೆ. ಹೀಗಿದೆ ವಿಚಾರ. ಇದು ಅಪವ್ಯಯಕ್ಕೆ ಮೊದಲನೆಯ ಕಾರಣ.

ಎರಡನೆಯದು, ಎಸ್ಟಿಮೇಟ್ ಆಗಿ ಕೆಲಸ ಷುರುವಾಗುವುದಕ್ಕೆ ಮೊದಲೇ ಜಾಗ ಸೃಷ್ಟನೆಯಾಗಿರುತ್ತದೆ. "ಕೂಸು ಹುಟ್ಟುವುದಕ್ಕೆ ಮೊದಲೇ ಕುಲಾವಿ ಹೊಲಿಸಿದರು" ಎಂಬಂತೆ ಎಂಟ್ರಿಯೋ ಸ್ಟೇಜಿನಲ್ಲೇ ಸಿಬ್ಬಂದಿ ಮಂಜೂರಾಗಿರುತ್ತದೆ. ಸಾಮಾನು ಇನ್ನೂ ಅಮೇರಿಕಾದಿಂದ ಬರಬೇಕಾಗಿರುವಾಗಲೇ ಸಿಬ್ಬಂದಿ ಮಂಜೂರಾಗಿರುತ್ತದೆ. ಹೀಗೆ ಮೊದಲೇ ಸಿಬ್ಬಂದಿ ಮಂಜೂರಾಗಿ ಅವರುಗಳಿಗೆ ಕೊಡಬೇಕಾದ ಸಂಬಳ ಸಾರಿಗೆ ಮತ್ತು ಭತ್ಯ ಕೊಡುತ್ತಿರುತ್ತಾರೆ. ಇಲಾಖೆಯ ಅಧಿಕ ವೆಚ್ಚಗಳಿಗೆ ಇದು ಎರಡನೆಯ ಕಾರಣ ಎಂದು ನನ್ನ ಭಾವನೆ.

ಇನ್ನು ದಿನಗೂಲಿಗಿದ್ದ ಆಳುಗಳ ವಿಚಾರದಲ್ಲಿ ಅವರನ್ನು ನೇಮಿಸಿಕೊಳ್ಳಲು ಲೆಕ್ಕ, ಮಿತಿ ಯಾವುದೂ ಇಲ್ಲ. ಆಳುಗಳು ಖಾಯಂ ಆದಕೂಡಲೇ ಅವರು ಕೆಲಸಮಾಡುವಂತಿಲ್ಲ. ಅವರು ಏಕ್‌ದಂ ಮೇಸ್ತ್ರಿಗಳು ಆದರೂ ಆದರು. ಮೀರಿದರೆ ಇನ್ಸ್‌ಪೆಕ್ಟರ್ ಆದರೂ ಆದರು. ಖಾಯಂ ಆದ ಆಳುಗಳು ಹಂಗಾಮಿ ಆಳುಗಳಂತೆ ಕಂಬ ಎತ್ತುವುದಾಗಲೀ, ವೈರನ್ನು ಎಳೆಯುವುದಾಗಲೀ, ಬೇರೆ ಕೆಲಸಮಾಡುವುದು ಅವರಿಗೆ ಹೀನಾಯ, ಅಗೌರವ. ಉದಾಹರಣೆಗೆ ಮೊನ್ನೆ Shimsha Accident ಆಯಿತಲ್ಲ, ಅಲ್ಲಿ ಎಷ್ಟು ಜನ ಪರ್ಮನೆಂಟು ಆಳುಗಳು ಸತ್ತರು ? ಎಷ್ಟು ಜನ ಮೇಸ್ತ್ರಿಗಳಿಗೆ ಜಖಂ ಆಗಿದೆ? ಎಷ್ಟು ಜನ Inspectorsಗೆ ಪೆಟ್ಟು ಬಿದ್ದಿದೆ? ಎಂದರೆ, ಸತ್ತವರೆಲ್ಲ ಬರಿಯ ಟೆಂಪರರಿ ಕೂಲಿಗಳು, ಕೆಲವು ಪರ್ಮನೆಂಟ್ ಆಳುಗಳು, ಅನುಭವವಿರುವ ಮೇಸ್ತ್ರಿ ಮತ್ತು ಇರಬೇಕಾಗಿದ್ದ Inspector ಒಬ್ಬರೂ ಇಲ್ಲ. ಟೆಂಪರರಿ ಆಳುಗಳೇ ಈ ಕೆಲಸ ನಿಬಾಯಿಸಬಹುದಾದರೆ ಪರ್ಮನೆಂಟ್ ಸ್ಟಾಫ್‌ನ ಜರೂರು ಆದರೂ ಏನು! ಹೀಗೆ Accident ಗಳಾದರೆ ಒಳಗಡೆಯ ವಿಷಯ ಹೊರಗೆ ಬಾರದಂತೆ ದೊಡ್ಡ ಅಧಿಕಾರಿಗಳು ಬಹಳ ಜಾಗರೂಕತೆಯಿಂದ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಏನಾದರೂ ಆಕ್ಸಿಡೆಂಟು ಆದಾಗ ಕೂಡಲೇ Electric Inspector ಒಬ್ಬರು ಅಲ್ಲಿಯ ಆಕ್ಸಿಡೆಂಟಿಗೆ ಕಾರಣವೇನು ? ಏಕೆ ಆಯಿತು ? ಏನು ಕಥೆ? ಎಂದು ಮಹಜರು ಮಾಡುವುದಕ್ಕೆಂದೇ ಸರಕಾರದಿಂದ ಖರ್ಚು ಮಾಡಿ ಕಳುಹಿಸುವ ವಿಚಿತ್ರ ವ್ಯವಸ್ಥೆಯೊಂದು ಇದೆ. ಈ Inspectorರ ದರ್ಜೆ ಹೇಗಿದೆ ಎಂದರೆ ಈ ಇಲಾಖೆಯ ಮುಖ್ಯಾಧಿಕಾರಿಗಳ ಕೈಕೆಳಗೆ ಕೆಲಸಮಾಡತಕ್ಕ Sectional officerಗಳ ದರ್ಜೆಗೂ ಕಡಮೆ. ಈ Inspector ದರ್ಜೆ. ಆಕ್ಸಿಡೆಂಟು ಆದ ಸ್ಥಳ Sectional officerನ Controlನಲ್ಲಿರುತ್ತದೆ. ಈ

Inspector ಹೋಗಿ ತನ್ನ ದರ್ಜೆಗೆ ಮೇಲ್ಪಟ್ಟಿರುವವರ ಸ್ಥಳದಲ್ಲಿ ಆಗಿರುವ Accidentನ ವಿವರ ಎಷ್ಟರ ಮಟ್ಟಿಗೆ ಅಜಮಾಯಿಷಿ ಮಾಡಬಹುದು, ನೀವೇ ಹೇಳಿ ? ಒಂದೊಂದು ವೇಳೆ ಈ Inspector ಆ Section Officerರವರ ಕೈಕೆಳಗೆ ಕೆಲಸಮಾಡಬೇಕಾಗಿ ಬಂದರೂ ಬರುತ್ತದೆ. ಇದನ್ನೆಲ್ಲ ತಮ್ಮ Future ನೋಡಿಕೊಂಡು ಈ Inspectorಗಳು ಸುಲಭವಾಗಿ Sectional Officer ಕೊಡುವ ವರದಿಯನ್ನೇ ಸುಖ ವಾಗಿ ರಿಪೋರ್ಟುಮಾಡಿ ಬಿಡುತ್ತಾರೆ.

ಈ ಟೆಂಪರರಿ ಆಳುಗಳನ್ನು ನೇಮಿಸುವ ಅಧಿಕಾರ Sectional Officerಗಳಿಗೆ ಇದೆ. ಆದುದರಿಂದ ಅವರು ಎಷ್ಟು ಆಳುಗಳನ್ನು ಬೇಕಾದರೂ ನೇಮಿಸಿ ಕೊಳ್ಳಬಹುದು. ಇನ್ನೊಂದು ವಿಷಯವೇನೆಂದರೆ, ಟೆಂಪರರಿ ಆಳುಗಳಲ್ಲಿ ಎರಡು ವಿಧವಿದೆ. ಒಂದು ಟೆಂಪರರಿ ಆದರೂ ಪರ್‌ಮನೆಂಟಿನಂತೆ. ಏಕೆಂದರೆ ರಿಜಿಸ್ಟರಿನಲ್ಲಿ ಮಾತ್ರ ಮೂರು ತಿಂಗಳಿಗೊಮ್ಮೆ ಕೆಲವು ದಿವಸ ಅವರ ಹೆಸರು ತೆಗೆದು ಪುನಃ ಸೇರಿಸಿಕೊಳ್ಳು ವುದು. ಏಕೆಂದರೆ ಪರ್‌ಮನೆಂಟ್ ಮಾಡಿಬಿಟ್ಟರೆ ಇವರಿಗೆ ಬೇಕಾದಾಗ ಬೇರೆ ಆಳನ್ನು ಸೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. 10-15 ವರ್ಷ ಕೆಲಸ ಮಾಡಿ ದರೂ ಅವರು ಇನ್ನೂ ಟೆಂಪರರಿನೇ, ಇವರಿಗೆ safety, security ಏನೂ ಯಾವ ತರಹದ್ದೂ ಇಲ್ಲ. ಇವರಿಗೆ Pension ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದಲೇ ಇವರನ್ನೂ ಖಾಯಂ ಮಾಡುವುದಿಲ್ಲ. ಇಂತಹ ಟೆಂಪರರಿ ಆಳುಗಳು ಅಧಿಕಾರಿಗಳ ಮನೆಯ ಕೆಲಸಕ್ಕೆ ಬಾಕಿ ಟೆಂಪರರಿ ಆಳುಗಳು ಹೀಗೆ ಅನುಭವ ವಿಲ್ಲದವರು. ಹೇಳಿಕೊಡಲು ಸಿಬ್ಬಂದಿ ಮತ್ತು ಹೇಳಿ ಮಾಡಿಸಲು ಸಿಬ್ಬಂಧಿ ದಿಕ್ಕಿಲ್ಲದೆ ಸಾಯುತಕ್ಕವರು ಈ ರೀತಿ ಲೆಕ್ಕಾಚಾರವಿಲ್ಲದೆ ಕೂಲಿಗಳನ್ನು ನೇಮಿಸಿ ಕೊಂಡು ಲೆಕ್ಕಾಚಾರವಿಲ್ಲದೆ ವೆಚ್ಚಮಾಡುತ್ತಿರುವುದು ಮೂರನೆಯ ಕಾರಣ.

ಇನ್ನು ನಾಲ್ಕನೆಯ ಕಾರಣ ಏನೆಂದರೆ Irrigation Pumpಗಳ ವಿಚಾರ. ಕೇಂದ್ರ ಸರಕಾರದವರು ರೈತ ರನ್ನು ಉದ್ಧಾರಮಾಡಿಬಿಡಬೇಕೆಂದು ಲಕ್ಷ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಈ ಪಂಪು ಗಳನ್ನು ಹಾಕಿಕೊಡುವ ಎಲೆಕ್ಟ್ರಿಕ್ ಡಿಪಾರ್ಟು ಮೆಂಟಿನವರು, ಮುಗ್ಧರೂ, ಮೂಢರೂ ಆಗಿರತಕ್ಕ ಹಳ್ಳಿ ರೈತರಿಗೆ ಏನಾದರೂ Pump work ಆಗದೆ ನಿಂತುಹೋಗಿದ್ದರೆ ಅಥವಾ ನಿಂತುಹೋದರೆ ಯಾವ ವಿಧವಾದ ಸಹಾಯವನ್ನೂ ಮಾಡುವುದಿಲ್ಲ. ಅವರು 25 ಸಾರಿ ಅವರ ಆಫೀಸಿನ ಬಾಗಿಲಿಗೆ ತಿರುಗಿದ ಮೇಲೆ ಅದೂ ಇವರ ಮನಸ್ಸು ನಾಲ್ಕುಭಾಗದಲ್ಲೂ ತೃಪ್ತಿ ಯಾಗಿದ್ದರೆ ಕಾರಣ ವಿಚಾರಿಸಿ ಅವರಿಗೆ ಸಹಾಯ ಮಾಡಿದರೆ ಮಾಡಿದರು ಇಲ್ಲದಿದ್ದರೆ ಇಲ್ಲ. ಹಳ್ಳಿಗರಿಗೆ ಈ Electricity ಅಂದರೆ ಎಷ್ಟು ಭಯ, ಎಷ್ಟು ಅಂಜಿಕೆ ಎನ್ನುವುದನ್ನು ಒತ್ತಿ ಹೇಳಲೇಬೇಕಾಗಿಲ್ಲ. ಏನಾದರೂ Fuse ಹೋದದ್ದೇ ಆಗಲೀ, ಅಥವಾ ಇನ್ನಾವುದಾ ದರೂ Trouble ಬಂದದ್ದೇ ಆದರೆ ಈ ಇಲಾಖೆಯ ವರು ಸಹಾಯ ಒದಗಿಸಿ ರೈತರಿಗೆ ಸಹಕಾರ ನೀಡಿದ್ದೇ ಆದರೆ ಈಗ ನಡೆಯುತ್ತಿರುವಂತೆ ಈ Irrigation Scheme lossನಲ್ಲಿ ನಡೆಯುವುದಿಲ್ಲ. ಹಿಂದೆ ಈ ಎಲೆ ಕ್ಟ್ರಿಕ್ ಡಿಪಾರ್ಟುಮೆಂಟ್ ಇದರ ದಕ್ಷತೆಗೂ ಪ್ರಾಮಾಣಿ ಕತೆಗೂ, ಜನೋಪಕಾರಕ್ಕೂ ಹೆಸರು ಪಡೆದಿತ್ತೆಂದರೆ ಉತ್ಪ್ರೇಕ್ಷೆಯಾಗಲಾರದು. ಆದರೆ ಆ ಗುಣವೆಲ್ಲವೂ ಈಗ ಎಲ್ಲಿ ಅವಿತುಕೊಂಡಿವೆ ಎನ್ನುವುದನ್ನು ಬೇರೆ ಯಾವುದಾದರೂ ದೀಪದ ಸಹಾಯದಿಂದ ಹುಡುಕ ಬೇಕಾಗಿದೆ.

ಗೆಜೆಟೆಡ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್ ಅಧಿಕಾರಿ ಗಳಿಗೆ ಸಮ. ಅವರು ಸತ್ಯವಂತರು ಎನ್ನುವ ಒಂದು ಪ್ರತೀತಿ ಇತ್ತು. ಈಗ ಇವರು ಕೆಲಸಮಾಡು ವುದರಲ್ಲಿ ಬೇಜವಾಬ್ದಾರರಾಗಿದ್ದಾರೆ. ಮಾಡಿದ ತಪ್ಪುಗಳನ್ನು ಮುಚ್ಚಿಕೊಳ್ಳಲು ಅವರು ಎಷ್ಟು ಅಸತ್ಯ ವಂತರಾಗಬೇಕು! ಅದರ ಪರಿಣಾಮವಾಗಿ ಅನಾಹುತ ಗಳೆಷ್ಟು ಎಂಬುದು ಹೇಳತೀರದು ಮತ್ತು ಅಸಾಧ್ಯ.

ಮೂರುನಾಲ್ಕು ತಿಂಗಳ ಹಿಂದೆ ಮೈಸೂರಿನಲ್ಲಿ ರಮಾವಿಲಾಸ ಅಗ್ರಹಾರದಲ್ಲಿ Electrocute ಆಗಿ ಒಬ್ಬ ಹೆಂಗಸು ಮತ್ತು ಒಂದು ಹುಡುಗಿ ಸತ್ತ ಪ್ರಸಂಗ ಎಲ್ಲರೂ ಪೇಪರುಗಳಲ್ಲಿ ಓದಿರಬಹುದು. ಅವರಿಗೆ ಏಕಪ್ಪ Shock ತಗಲಿತು ಎಂದರೆ Contractor ಆದವನು Wiring ಮಾಡಿ ಅದನ್ನು ಎರಡು ಭಾಗ ಮಾಡುವಾಗ Conduit Pipeನ್ನು ಸರಿಯಾಗಿ ಹಾಕದೆ ಹೀಗೆ ಅನಾಹುತ ಸಂಭವಿಸಿತೆಂದು ತಿಳಿದು ಬಂದಿತು ಇದೇ ಕಾರಣ.

ಗೆಜೆಟೆಡ್ ಅಧಿಕಾರಿಗಳು Service ಕೊಡುವುದಕ್ಕೆ ಮುಂಚೆ ಬಂದು inspect ಮಾಡುತ್ತಾರೆ. ತಪ್ಪಿದ್ದರೆ ತನ್ನ Licenceನ್ನು ಕಿತ್ತುಹಾಕುತ್ತಾರೆ ಎನ್ನುವ ಭಯ ಕಂಟ್ರಾಕ್ಟರುಗಳಿಗಿದ್ದರೆ ಅವರು ತಮ್ಮ ಕೆಲಸವನ್ನು ನಿಗಾದಿಂದ ಮಾಡುತ್ತಾರೆ. ಇಲ್ಲದಿದ್ದರೆ ಹೀಗೆ ಅನ್ಯಾ ಯವಾಗಿ ಪ್ರಾಣಗಳನ್ನೇ ಬಲಿಕೊಡಬೇಕಾಗುತ್ತದೆ.

ಸರಕಾರದವರು ದಯವಿಟ್ಟು ಈ ಅಧಿಕಾರಿಗಳ Efficiency ಬಗ್ಗೆಯೂ, ಸರಕಾರಿ ವಾಹನಗಳನ್ನು ಮುಲಾಜಿಯಿಲ್ಲದೆ ಉಪಯೋಗಿಸುತ್ತಿರುವ ಬಗ್ಗೆಯೂ ಕೂಡಲೇ ನಿಗಾ ತೆಗೆದುಕೊಂಡು ದುಂದುವೆಚ್ಚ ತಪ್ಪಿಸಿ ಇಲಾಖೆಯವರ Expenditure ಗಾಗಿ ಬೇಡಿರುವ Demandನಲ್ಲಿ ಕಡಮೆ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).— ಸ್ವಾಮಿ, ಈ ಕೈಗಾರಿಕೆಗಳಿಂದ ಲಾಭ ಬರುತ್ತಿದೆ ಎಂದು ಸರಕಾರದವರು ಒಂದು ಸಲ ಚರ್ಚೆಗೆ ಉತ್ತರ ಕೊಡುತ್ತ ಹೇಳಿದರು. ಯಾವ ತರಹದ ಲಾಭ ಬರುತ್ತಿದೆಯೋ ನಮಗೇನೂ ಅರ್ಥವಾಗು ವುದಿಲ್ಲ. ಈ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಕಡಮೆ ರೇಟಿನಲ್ಲಿ ಕೊಟ್ಟು ರಾ ಮೆಟೀರಿಯಲ್ಸ್‌ಗಳಿಗೆ ಯಾವ ವಿಧವಾದ Tax ಗಳೂ ಇಲ್ಲದಂತೆ ಕೊಡುತ್ತಿದ್ದಾರೆ. ಅಲ್ಲದೆ ಹಿಂದೆ ಶ್ರೀಮಾನ್ ವಿಶ್ವೇಶ್ವರಯ್ಯನವರ ಕಾಲ ದಲ್ಲಿ, ಸರ್ ಮಿರ್ಜಾ ಇಸ್ಮಾಯಿಲ್‌ರವರ ಕಾಲದಲ್ಲಿ ಅವು ಹೇಗೆ ನಡೆದುಕೊಂಡು ಬರುತ್ತಿತ್ತೋ ಅದೇ ರೀತಿ ಇವೊತ್ತು ಕೂಡ ನಡೆದುಕೊಂಡು ಬಂದು 3½ ಪರ್ಸೆಂಟು ಅಥವಾ 2½ ಪರ್ಸೆಂಟು ಲಾಭ ಬರುತ್ತಿದೆ. ಅದ್ದರಿಂದ ಸರಿಯಾದ ಕೆಲಸ ನಡೆಯುತ್ತಿಲ್ಲ ವೆಂದು ಹೇಳಬೇಕಾಗಿದೆ. ಹಿಂದಿನಿಂದಲೂ ಯಾವುದೋ ಒಂದು ತರಹದ ಲಾಭ ಬರುತ್ತಿರುವ ಸನ್ನಿವೇಶವನ್ನು ತೋರಿಸುತ್ತಿದ್ದಾರೆ. ಇದು ದೇಶಕ್ಕೆ ಒಂದು ತರಹ ಮೋಸಮಾಡುವ ರೀತಿಯಲ್ಲದೆ ಎಂದು ಕಾಣುತ್ತದೆ. ಹೊಸದಾಗಿ ಕಬ್ಬಿಣ ಕಾರ್ಖಾನೆಯನ್ನು ಎಷ್ಟೋ ದಿವಸ ಗಳ ಹಿಂದೆ ಸ್ಥಾಪಿಸಿದ್ದಾರೆ. ಅದು ನಮ್ಮ ಮೈಸೂರು ಸ್ಟೇಟಿನಲ್ಲಿರುವುದರಿಂದ ಅದರಿಂದ ಜನಗಳಿಗೆ ಉಪ ಯೋಗವಾಗುವಂತೆ ಮಾಡಬೇಕು. ಇಲ್ಲಿ ತಯಾರಿಸಿದ ಕಬ್ಬಿಣದಿಂದ ರೈತರಿಗೆ ಬೇಕಾದ ಸಣ್ಣ ಸಣ್ಣ ಸಾಮಾನು ಗಳು ಎಂದರೆ ಗುಳ, ಪಟ್ಟೆಯ ಸಾಮಾನುಗಳು ಸಿಕ್ಕುವಂತೆ ಮಾಡಬೇಕು. ಆದರೆ ಈಗೇನಾಗಿದೆ ಎಂದರೆ ಸಾಮಾನ್ಯ ಜನರಿಗೆ ಕಬ್ಬಿಣವೇ ಸಿಕ್ಕುವುದಿಲ್ಲ. ದೊಡ್ಡ ದೊಡ್ಡ ಮನುಷ್ಯರುಗಳಿಗೆ, ದೊಡ್ಡ ದೊಡ್ಡ

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಕಂಟ್ರಾಕ್ಟರುಗಳಿಗೆ ಬೇಕಾದಷ್ಟು ಕಬ್ಬಿಣ ಸಿಕ್ಕುತ್ತಿದೆ. ಆದರೆ ವ್ಯವಸಾಯದ ಉತ್ಪನ್ನವನ್ನು ಜಾಸ್ತಿ ಮಾಡುತ್ತಿರುವ ರೈತರಿಗೆ ಕಡಮೆ ದರದಲ್ಲಿ ಗುಳ ಮುಂತಾದುವುಗಳನ್ನು ಕೊಡುವ ಶಕ್ತಿ ಇಲ್ಲದಿದ್ದರೆ ಈ ಕಾರ್ಖಾನೆಯಿಂದ ದೊರೆಯುವ ಪ್ರಯೋಜನವಾದರೂ ಏನು ? ನಮ್ಮ ದೇಶದ ಅಭಿವೃದ್ಧಿಯಲ್ಲಿ ಅದರಲ್ಲೂ ಶೇಕಡ 80 ರಷ್ಟು ಜನ ಇರತಕ್ಕ ರೈತರಿಗೆ ತಾವು ಯಾವ ರೀತಿಯ ಸೌಕರ್ಯಗಳನ್ನು ಕೊಡುತ್ತಿದ್ದೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಯೋಚಿಸಬೇಕು. ನಮ್ಮ ದೇಶ ಮುಂದಕ್ಕೆ ಬರಬೇಕಾದರೆ ರೈತರ ಆರ್ಥಿಕಸ್ಥಿತಿಯನ್ನು ಸರಿಪಡಿಸಿ, ಅವರಿಗೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡಬೇಕು. ಸಾಮಾನ್ಯವಾಗಿ ಮಂತ್ರಿಗಳಾಗಿ ಬಂದಿರುವವರು ಹಾಗಾಗಿಬರುವುದಕ್ಕೆ ಮುಂಚೆ ನಮ್ಮ ಊರಿನ ರೈತರು ಮುಂದಕ್ಕೆ ಬರಬೇಕು ಅವರ Education ಮಟ್ಟವನ್ನು ಹೆಚ್ಚಿಸಬೇಕು ಮತ್ತು ರೈತರಿಗೆ ತಕ್ಕಷ್ಟು ಉತ್ತೇಜನವನ್ನು ಕೊಡಬೇಕೆಂದಿರುತ್ತಾರೆ. ಮತ್ತು ಇವೊತ್ತು ಮಂತ್ರಿಮಂಡಲದಲ್ಲಿರುವವರು ನಾಳೆ ಇರುವುದಿಲ್ಲ, ಮುಂದೆ ಯಾರು ಬರುತ್ತಾರೋ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಬಂದ ಮಂತ್ರಿಗಳು ಮಂತ್ರಿಮಂಡಲದಲ್ಲಿ ಏನೋ ಅಷ್ಟೋ ಇಷ್ಟೋ ಅನುಕೂಲಗಳನ್ನು ಮಾಡೋಣ ಎಂದು ಯೋಚಿಸುವುದರೊಳಗೆ ಅವರೂ ಕೂಡ ಮುಂದೆ ಇರುತ್ತಾರೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಸಾಮಾನ್ಯವಾಗಿ ಮಂತ್ರಿಗಳಾಗಿ ಬಂದವರು ಮಂತ್ರಿಮಂಡಲದಿಂದ ಹೊರಗೆ ಬಂದ ಮೇಲೆ ಅವರುಗಳು ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನಗಳ ಸ್ಥಿತಿಯನ್ನು ನೋಡಿ ಅವರನ್ನು ಉತ್ತಮಪಡಿಸಬಹುದು. ಆದರೆ ಸಾಮಾನ್ಯವಾಗಿ, ವಿದ್ಯಾವಂತರಾದವರು ಹಳ್ಳಿಗಳಿಗೆ ವಾಪಸು ಹೋಗಲು ಇಷ್ಟವಿಲ್ಲದೆ ಬೆಂಗಳೂರಿನಲ್ಲಿಯೇ ವಾಸಿಸುತ್ತಾರೆ.

ಶ್ರೀ ಹೆಚ್. ಎಸ್. ರುದ್ರಪ್ಪ.—ಬೇಕಾದಷ್ಟು ಜನ ಹೋಗುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಊರಿಗೆ ಹೋದರೂ ಕೂಡ ಒಂದು ದಿವಸ ಅಲ್ಲಿರುವುದಿಲ್ಲ, ಸ್ವಾಮೀ. ಈಗ ಈ Rural Industries Scheme ಎಂದು ಇದೆ. ಇದು ಬಹಳ ಮುಖ್ಯವಾದ ಯೋಜನೆ. ನಮ್ಮನೆ ಇದರಲ್ಲಿ ವಿಶ್ವೇಶ್ವರಯ್ಯನವರ ಹೆಸರನ್ನು ತೆಗೆದುಕೊಂಡು ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಏನನ್ನೂ ಮಾಡುತ್ತಿಲ್ಲ. ಈಗ ಈ ಯೋಜನೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದಾರೆ, ಇದಕ್ಕಾಗಿ ಷೇರುಗಳನ್ನು ಅಮಲ್ದಾರರವರೇ ಆಯಾ ಗ್ರಾಮದಿಂದ ಹಾಕಿಸಿ ಪ್ರಾರಂಭವೇನೋ ಮಾಡಿದ್ದಾರೆ. ಆದರೆ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳೆಲ್ಲ Loss ನಲ್ಲಿಯೇ ನಡೆಯುತ್ತಿವೆ. ಆದರೆ ಕೆಲವು ಕಡೆ ಸರಕಾರದವರು Subsidy ಕೊಟ್ಟು ನಡೆಸುತ್ತಿರುವುದರಿಂದ ಅಂತಹ ಸಹಕಾರ ಸಂಘಗಳಲ್ಲಿ ಮಾತ್ರ ಎಲ್ಲೋ ಸ್ವಲ್ಪ ಲಾಭ ಬಂದಿದೆ. ಅದರಲ್ಲಿ ಸ್ವಲ್ಪ Dividend ಕೊಟ್ಟಿದ್ದಾರೆ. Subsidy ಕೊಡದೆ ಇದ್ದರೆ ಅವೂ ಕೂಡ ನಷ್ಟದಲ್ಲೇ ನಡೆಯುತ್ತಿದ್ದುವು. ಒಂದು ಸಂಘಕ್ಕೂ ಲಾಭ ಬಂದಿಲ್ಲ. ಸಬ್‌ಸಿಡಿ ಕೊಟ್ಟಿದ್ದರೆ ಅಂಥಾ ಸಂಘಗಳಲ್ಲಿ ಸ್ವಲ್ಪ ಲಾಭ ಕಾಣುತ್ತಿದೆ. ಅನೇಕ ಅರ್ಜಿಗಳು ಬಂದು ಒಂದೆರಡು ವರ್ಷಗಳಿಂದ ತೀರ್ಮಾನವಾಗದೆ ಪೆಂಡಿಂಗ್ ಆಗಿದ್ದು ಈ ಸಂಘಗಳಲ್ಲಿ ಜನರಿಗಿದ್ದ ನಂಬಿಕೆ ಹಾಳಾಗಿ ಹೋಗಿದೆ. ಸರ್ಕಾರ ಪ್ರಾರಂಭ ಮಾಡಿರುವ ಕೈಗಾರಿಕೆಗಳಲ್ಲಿ ಕಳ್ಳಭಟ್ಟಿ ಕೈಗಾರಿಕೆ ಬಹಳ ಪ್ರಾಮುಖ್ಯ ಕೈಗಾರಿಕೆ ಎಂದು ಹೇಳಬಹುದು.

ನಮ್ಮಲ್ಲಿ ಗಂಧದ ಮರ ಬೆಳೆಯುವುದು ಸಾಲದು ; ನಮಗೆ ಅಗತ್ಯವಾದಷ್ಟಿಲ್ಲವೆಂದು ಹೇಳುತ್ತಾರೆ. ಸರ್ಕಾರದಲ್ಲಿ ದಕ್ಷತೆಯಿಲ್ಲದೇ ಇರುವುದರಿಂದ ಹಳ್ಳಿಗಳಲ್ಲಿ ಗಂಧದ ಮರವನ್ನು ಒಲೆಗೆ ಹಾಕಿ ಸೌದೆಯಾಗಿ ಉಪಯೋಗಿಸುತ್ತಿದ್ದಾರೆ. ಅಲ್ಲದೆ, ಇಲ್ಲಿಗೆ ತಂದದ್ದರಲ್ಲಿ ಡಿಪೋವಿನಿಂದ ಈ ಮರವನ್ನು ತುಂಡುತುಂಡು ಮಾಡಿ ಚೀಲಗಳಲ್ಲಿ ತುಂಬಿಕೊಂಡು ಸೈಕಲ್‌ಗಳಲ್ಲಿ ಸಾಗಿಸುತ್ತಿದ್ದಾರೆಂದು ಕೇಳಿದ್ದೇನೆ. ಸರ್ಕಾರ ಸಾಕಷ್ಟು ಗಮನ ಕೊಡದೆ ಹಳ್ಳಿಗಳಲ್ಲಿ ಸೌದೆಗೆ ಉಪಯೋಗವಾಗುತ್ತಿದೆ, ಗಂಧದ ಮರ. ಇದು ನಮ್ಮ ದೇಶಕ್ಕೆ ಹಣ ಕೊಡತಕ್ಕದ್ದು. ದಯವಿಟ್ಟು ಮಾನ್ಯ ಮಂತ್ರಿಗಳು ಈ ವಿಷಯದತ್ತ ಗಮನ ಕೊಡಬೇಕು.

ದೊಡ ದೊಡ್ಡ ಕೈಗಾರಿಕೆಗಳನ್ನು ಬೆಂಗಳೂರು ಪಟ್ಟಣದ ಸುತ್ತಮುತ್ತ ಸ್ಥಾಪನೆಮಾಡಿ ವ್ಯವಸಾಯದ ಜಮೀನುಗಳನ್ನು ಕಿತ್ತುಕೊಂಡಿರುವುದರಿಂದ ವ್ಯವಸಾಯಕ್ಕೆ ತೊಂದರೆಯಾಗಿದೆ. ಇಂಥಾ ಕೈಗಾರಿಕೆಗಳನ್ನು ಬೇರೆ ಬೇರೆ ಊರುಗಳಲ್ಲಿ ಎಲ್ಲೆಲ್ಲಿ ಕಚ್ಚಾ ಮಾಲುಗಳು ಸಿಕ್ಕುತ್ತವೆಯೋ ಅಲ್ಲಿ ಸ್ಥಾಪಿಸಿದರೆ ಅಲ್ಲಿನ ಜನರಿಗೆ ಕೂಲಿ ಸಿಕ್ಕುತ್ತದೆ. ಇನ್ನು ಮುಂದಾದರೂ ಸರ್ಕಾರದ ಈಗಿನ ನೀತಿಯನ್ನು ಬದಲಾಯಿಸಿ, ಎಲ್ಲವನ್ನು ಬೆಂಗಳೂರಿನಲ್ಲೇ ಮಾಡುವುದನ್ನು ಬಿಡಬೇಕು.

ವ್ಯವಸಾಯಕ್ಕೆ ಕೊಡುವ ವಿದ್ಯುಚ್ಛಕ್ತಿಯ ಚಾರ್ಜು ಹೆಚ್ಚು ಮಾಡಿರುವುದು ತುಂಬಾ ಅನ್ಯಾಯ. ಇದನ್ನು ಕಡಮೆ ಮಾಡಬೇಕು. ಅಲ್ಲದೆ ರಾತ್ರಿಯ ಕಾಲದಲ್ಲಿ ಪಂಪುಗಳನ್ನುಪಯೋಗಿಸಬೇಕೆಂದು ವಿಧಾಯಕ ಮಾಡಿದ್ದಾರೆ. ಸಿನೀಮಾ, ಸರ್ಕಸ್ ಮುಂತಾದುವಕ್ಕೆ ಕೊಡುವುದಕ್ಕೆ ವಿದ್ಯುಚ್ಛಕ್ತಿ ಇದೆ. ಪಂಪುಗಳಿಗುಪಯೋಗಿಸುವುದಕ್ಕೆ ಇಲ್ಲವೆ ? ವ್ಯವಸಾಯಕ್ಕೆ ಹೇಗೆ ರಾತ್ರಿಕಾಲದಲ್ಲಿ ಉಪಯೋಗಿಸುವುದು !

ಸರ್ಕಾರಿ ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗತಕ್ಕ ಮಾಲುಗಳನ್ನು ವಿಲೇವಾರಿ ಮಾಡುವುದರಲ್ಲಿ ದಾಕ್ಷಿಣ್ಯಕ್ಕೊಳಗಾಗಿ, ಅಥವಾ ತಮ್ಮ ಪಕ್ಷವನ್ನು ಬೆಳೆಸುವ ದೃಷ್ಟಿಯಿಂದ ಕೆಲವರಿಗೆ ಏಜೆನ್ಸಿಕೊಡುತ್ತಿರುವುದರಿಂದ ಸರಕಾರಕ್ಕೆ ಬರುವ ಲಾಭ ಕಡಮೆಯಾಗಿದೆಯೆಂದು ಕಾಣುತ್ತದೆ. ಶೇಕಡ ಎರಡು ಅಥವಾ ಮೂರರಷ್ಟು ಕಮಿಷನ್ ಕೊಟ್ಟರೆ ಮಾರಾಟ ಮಾಡಿಕೊಡುತ್ತೇವೆಂದು ಇತರರು ಹೇಳಿದರೂ ಕೂಡ ಸ್ವಜನರಿಗೆ ಕೊಡುವ ಉದ್ದೇಶದಿಂದ ಶೇಕಡ ಐದು. ಆರರಷ್ಟು ಕಮಿಷನ್‌ಗೆ ಏಜೆನ್ಸಿ ಕೊಡುತ್ತಿರುವುದು ನ್ಯಾಯವಲ್ಲ. ಏಜೆನ್ಸಿಕೊಡುವುದರಲ್ಲಿ ದಾಕ್ಷಿಣ್ಯಕ್ಕೊಳಗಾಗಬಾರದು.

ತಿಪಟೂರು ಬೇಕಾದಷ್ಟು ತೆಂಗಿನಕಾಯಿ ಬೆಳೆಯುವ ಊರು. ಅಲ್ಲಿ ನಾರಿನ ಕೈಗಾರಿಕೆ ಪ್ರಾರಂಭಮಾಡಿ, ಅಲ್ಲಿನ ಜನ ಜೀವನಮಾಡಿಕೊಳ್ಳಲು ಕೂಲಿ ಸಿಕ್ಕುವಂತೆ ಮಾಡಬೇಕು.

ವಿದ್ಯುಚ್ಛಕ್ತಿಯನ್ನು ಸಿನಿಮಾ ನಾಟಕ ಮುಂತಾದುವಕ್ಕೆ ಕೊಡುವ ಬದಲು ಮಗ್ಗಗಳಿಗೆ ಕೊಡಬೇಕು. ಇಂಥಾ ಕೈಗಾರಿಕೆಗಳಿಗೆ ಕೊಟ್ಟರೆ ದೇಶಕ್ಕೆ ಒಳ್ಳೆಯದಾಗುತ್ತದೆ.

ಸರ್ಕಾರಿ ಕೈಗಾರಿಕೆಗಳಲ್ಲಿ ಲಾಭ ಬರುವುದಕ್ಕೇನು ನೀತಿಯನ್ನನುಸರಿಸಬೇಕೆಂಬುದರ ಬಗ್ಗೆ ‘ಪಾಲಿಸಿ’ ಸಮಿತಿಗಳನ್ನು ಮಾಡಿದ್ದಾರೆ. ಇವು ‘ಪಾಲಿಷ್’ ಸಮಿತಿಗಳಾಗಿವೆ. ಸರ್ಕಾರದವರು ತಮಗೆ ಬೇಕಾಗಿದ್ದವ

ರನ್ನು ಈ ಸಮಿತಿಗಳಿಗೆ ಹಾಕಿಕೊಂಡು, ಟೀಪಾರ್ಟಿಗಳನ್ನು ಮಾಡಿಕೊಂಡು ತಮ್ಮ ಗುಂಪನ್ನು ಕಟ್ಟುವುದಕ್ಕೆ ಯೋಚನೆಮಾಡುತ್ತಿದ್ದಾರೆ. ದಕ್ಷತೆಯಿಂದ ಕೆಲಸ ಮಾಡಿದರೆ, ಹಿಂದೆ ಸರ್ ಮಿರ್ಜಾ, ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಒಳ್ಳೆಯ ಹೆಸರು ಬಂದಂತೆ ಈ ಸರ್ಕಾರಕ್ಕೂ ಬರುತ್ತದೆ. ಹೀಗೆ ಒಳ್ಳೆಯ ಹೆಸರು ಪಡೆಯಲು ದಕ್ಷತೆಯಿಂದ ಕೆಲಸಮಾಡುತ್ತಾರೆಂದು ನಂಬಿದ್ದೇನೆ.

Mr. SPEAKER.—The Hon'ble Minister in charge will now reply to the debate.

(Some Hon'ble Members rose.)

I am sorry, I cannot give anybody any chance. I have to put the Demands to vote at 4 or at the most 4-15. Hon'ble Members come and go and they stand up at the eleventh hour. How can I help ?

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ಕೆಲವು ಇಲಾಖೆಗಳ ವಿಷಯದಲ್ಲಿ ಮಾನ್ಯ ಸದಸ್ಯರು ಸೂಚನೆಗಳನ್ನು ಕೊಟ್ಟಿದ್ದಾರೆ, ಇರತಕ್ಕ ಲೋಪದೋಷಗಳನ್ನು ತಿಳಿಸಿದ್ದಾರೆ; ಇದಕ್ಕಾಗಿ ಅವರೆಲ್ಲರನ್ನೂ ವಂದಿಸುತ್ತೇನೆ. ಶ್ರೀಮಾನ್ ವೆಂಕಟೇಗೌಡರು, ಮೈಸೂರು ದೇಶಕ್ಕೆ ಕೊಳ್ಳೇಗಾಲ ಸೇರಿದಮೇಲೆ, ಅರಣ್ಯ ಇಲಾಖೆಯವರು ಇದ್ದಿಲು ಸಾಗಿಸುವುದಕ್ಕೆ ಲೈಸೆನ್ಸ್ ಕೊಡುತ್ತಿದ್ದಾರೆ, ಇದು ಬಹಳ ತಪ್ಪು ಎಂದು ಹೇಳಿದರು. ಅರಣ್ಯ ಇಲಾಖೆಗೆ ಲೈಸೆನ್ಸ್ ಕೊಡುವುದಕ್ಕೆ ಅಧಿಕಾರವಿಲ್ಲ. ಹಾಗೆ ಅವರು ಕೊಟ್ಟಿದ್ದರೆ ಅದು ತಪ್ಪೆಂದು ಕಾಣುತ್ತದೆ. ಇದನ್ನು ವಿಚಾರಣೆ ಮಾಡುತ್ತೇನೆ. ಅನೇಕ ವಿಧದಲ್ಲಿ ಅರಣ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆಯವರು ಕೊಟ್ಟಿರುವ ಪರ್ಮಿಟ್‌ಗಳನ್ನು ದುರುಪಯೋಗ ಮಾಡಿದ್ದಾರೆಂದು ಹೇಳಿದ್ದಾರೆ. ಯಾವ ರೀತಿ ದುರುಪಯೋಗವಾಗಿದೆ. ಎನ್ನುವುದನ್ನು ತನಿಖೆಮಾಡುತ್ತೇವೆ. ಈ ವಿಚಾರವನ್ನು ಅವರು ಮುಂಚಿತವಾಗಿಯೇ ನನಗೆ ಹೇಳಿದ್ದಿದ್ದರೆ ಎಷ್ಟೋ ಮಾಲು ಉಳಿಯುತ್ತಿತ್ತು ಎನಿಸುತ್ತದೆ. ನಮ್ಮಂತೆಯೇ ಮಾನ್ಯ ಸದಸ್ಯರಿಗೂ ದೇಶದ ಹಿತದ ದೃಷ್ಟಿ ಇದೆ. ಇಂಥಾ ವಿಷಯಗಳಲ್ಲಿ ತಡವಾದರೆ, ದುರುಪಯೋಗವಾದಮೇಲೆ ಸರಿಪಡಿಸುವುದಕ್ಕಾಗುವುದಿಲ್ಲ. ಇಂಥಾದ್ದಕ್ಕೆ ಯಾರು ಜವಾಬ್ದಾರರೋ ಆ ಅಧಿಕಾರಿಗಳಿಗೆ ಶಿಕ್ಷೆ ಕೊಡಬಹುದೇ ಹೊರತು ಹೋದ ಮಾಲನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥಾ ವಿಷಯಗಳನ್ನು ಮಾನ್ಯ ಸದಸ್ಯರು ಯಾವಾಗ ಬೇಕಾದರೂ ನನಗೆ ಬರೆದು ತಿಳಿಸಿದರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಸಾರ್ವಜನಿಕರ—ಸರ್ಕಾರದ ಸ್ವತ್ತನ್ನು ಕಾಪಾಡಲು ಪ್ರಯತ್ನಮಾಡುತ್ತೇನೆ. ಈ ಇಲಾಖೆಯಲ್ಲಿ ಕೆಲವು ನ್ಯೂನತೆಗಳಿವೆ ಎಂಬುದು ನನಗೂ ಗೊತ್ತಿದೆ. ನಾನು ಈ ಇಲಾಖೆಯನ್ನು ತೆಗೆದುಕೊಂಡ ಮೇಲೆ, ಇದರಲ್ಲಿ ಏನು ಲೋಪದೋಷಗಳಿವೆ ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಕೆಲವು ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ, ಬಹಳ ತಪ್ಪುಗಳನ್ನು ಮಾಡುತ್ತಿದ್ದಾರೆ. ಒಂದೇ ಸಾರಿ ಅವರನ್ನೆಲ್ಲಾ ತನಿಖೆ ಮಾಡಿ ಶಿಕ್ಷೆಕೊಡುವುದು ಕಷ್ಟವಾಗಿದೆ. ಇದನ್ನು ಯೋಚನೆಮಾಡಿ, ಅವರೆಲ್ಲರಿಗೂ ಸಕಾಲದಲ್ಲಿ ತಿಳಿವಳಿಕೆ ಕೊಡುತ್ತೇವೆ. ಹಾಗೂ ತಪ್ಪುದಾರಿಗೆ ಹೋದರೆ ಅವರಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಕೊಡುತ್ತೇವೆ.

ರಸ್ತೆಗಳು ಬಹಳ ಕೆಟ್ಟುಹೋಗಿವೆಯೆಂದು ಹೇಳಿದರು. ಕೆಲವು ಅರಣ್ಯಗಳಲ್ಲಿ ರಸ್ತೆಗಳಿವೆ. ಇವು ಇರಬೇಕೋ ಬೇಡವೋ ಗೊತ್ತಿಲ್ಲ. ಕೆಲವು ರಸ್ತೆಗಳಿಲ್ಲದೇ ಹೋದರೆ ನಮ್ಮ ಅರಣ್ಯ ಸಂಪತ್ತು ಭದ್ರವಾಗಿರುತ್ತದೆಯೋ ಏನೋ ಎನ್ನಿಸುತ್ತದೆ. ಯಾವುದೋ ಕಾಲದಲ್ಲಿ ಅರಣ್ಯೋತ್ಪನ್ನಗಳನ್ನು ತರುವುದಕ್ಕಾಗಿ ಈ ರಸ್ತೆಗಳನ್ನು ಮಾಡಿದ್ದರು. ಈಗ ಹಾಗೆ ತರುವ ಪ್ರಸಂಗವಿಲ್ಲವಾದುದರಿಂದ ಇವುಗಳೇಕಿರಬೇಕೆಂದು ಯೋಚಿಸಬೇಕಾಗಿದೆ. ಕೆಲವು ದಿವಸ ಅರಣ್ಯಗಳಿಗೆ ವಿಶ್ರಾಂತಿ ಕೊಟ್ಟರೆ ಒಳ್ಳೆಯದೆನಿಸುತ್ತದೆ. ಈ ಕಾರಣಗಳಿಂದ ಕೆಲವು ರಸ್ತೆಗಳನ್ನು ದುರಸ್ತುಮಾಡುವುದು ಅನಾವಶ್ಯಕವೆಂದು ಕಾಣುತ್ತದೆ. ಎಲ್ಲಿ ನಮ್ಮ ಮಾಲನ್ನು ಸಾಗಿಸುವುದಕ್ಕೆ ರಸ್ತೆ ಆವಶ್ಯಕವೋ ಅಲ್ಲಿ ಆ ರಸ್ತೆಗಳನ್ನು ನೋಡಿಕೊಳ್ಳುತ್ತೇವೆ. ಗಂಧದ ಮರವನ್ನು ಸಾಗಿಸುವುದಕ್ಕಾಗಿ ಯಾವಾಗಲೋ ಮರಳವಾಡಿಯಲ್ಲಿ ಒಂದು ರಸ್ತೆಯನ್ನು ಮಾಡಿದ್ದರು. ಅದನ್ನು ಈಗ ರಿಪೇರಿಮಾಡಿಸಬೇಕೆಂದರೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಅಲ್ಲದೆ ಈ ರಸ್ತೆಯಿಂದ ಫಾರೆಸ್ಟ್ ಇಲಾಖೆಗೆ ಅನುಕೂಲವಾಗುವುದಿಲ್ಲ ; ಇನ್ನೂ ತೊಂದರೆಯಾಗುತ್ತದೆ. . . .

ಶ್ರೀ ಎಂ. ಲಿಂಗೇಗೌಡ.—ಜನರಿಗೆ ರಸ್ತೆ ಬೇಕಲ್ಲ ಅದಕ್ಕೇನು ಮಾಡುತ್ತೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ರಸ್ತೆಗಳು ಜನರಿಗೆ ಬೇಕಾದರೆ, ಫಾರೆಸ್ಟ್ ಇಲಾಖೆ ಹಣವನ್ನು ಖರ್ಚುಮಾಡಿ ಇಂಜಿನಿಯರುಗಳನ್ನಿಟ್ಟು ಮಾಡಿಸುವುದಕ್ಕೆ ಸಾಧ್ಯವಿಲ್ಲ. ಇಂಥಾ ರಸ್ತೆಗಳು ಯಾವು ಯಾವುವೋ ಅವುಗಳನ್ನು ಜಿಲ್ಲಾಬೋರ್ಡ್ ಮತ್ತು ಪಬ್ಲಿಕ್‌ವರ್ಕ್ಸ್ ಇಲಾಖೆಗೇ ರಿಪೇರಿಮಾಡಲು ಕೊಡಬೇಕಾಗುತ್ತದೆ.

ಶ್ರೀಮಾನ್ ಕಾಮತ್‌ರವರು ಕೆಲವು ವಿಷಯಗಳನ್ನು ಹೇಳಿದರು. Plantation and Fire accidents ಸಂಬಂಧವಾಗಿ ಸಾಕಷ್ಟು ಹಣವನ್ನೊದಗಿಸಿಲ್ಲವೆಂದು ಹೇಳಿದರು. ಈ ಬಾಬುಗಳಿಗೆ ಸಾಕಷ್ಟು ಒದಗಿಸಿದ್ದೇವೆ ; ಒಂದು ವೇಳೆ ಹೆಚ್ಚು ಅಗತ್ಯವೆಂದು ಕಂಡುಬಂದರೆ ಒದಗಿಸುತ್ತೇವೆ. ಅರಣ್ಯವನ್ನು ಚೆನ್ನಾಗಿ ಬೆಳೆಸಿದರೆ ಬೇಕಾದಷ್ಟು ಹಣವನ್ನೊದಗಿಸುತ್ತೇವೆಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ.

ಗಂಧದ ಮರಗಳ ಕಳ್ಳತನವಾಗುತ್ತಿದೆಯೆಂದು ಕೆಲವರು ಹೇಳಿದರು. ನನಗೂ ಗೊತ್ತಿದೆ. ಗಂಧದ ಮರದ ಬೆಲೆ ಈಗ ಬಹಳ ಜಾಸ್ತಿಯಾಗಿದೆ. ಬಾಕಿ ಕಳ್ಳತನಗಳನ್ನು ಮಾಡುವುದಕ್ಕಿಂತ ಗಂಧದ ಮರದ ಕಳ್ಳತನಮಾಡಿದರೆ ಹೆಚ್ಚಿನ ಲಾಭ ದೊರೆಯುವುದೆಂಬ ಉದ್ದೇಶದಿಂದ ಕೆಲವರು ಈ ರೀತಿ ಮಾಡುತ್ತಿದ್ದಾರೆ. ಕೆಲವರು ಗಂಧದ ಮರಗಳನ್ನು ಇತರ ಮರಗಳ ನಡುವೆ ಲಾರಿಗಳಲ್ಲಿ ಹಾಕಿಕೊಂಡು ಹೋಗುತ್ತಾರೆ. ನಾನು ಇದನ್ನು ತಡೆಗಟ್ಟಲು ಅನೇಕ ಮಾರ್ಗಗಳನ್ನು ಯೋಚಿಸಿದ್ದೇನೆ. ಬೇರೆ ಕಡೆ ಲಾರಿಗಳ ಮೂಲಕ ಸಾಗಿಸುವವರನ್ನು ಹಿಡಿದು ಅವರಿಗೆ ನಾಲ್ಕು ಸಾವಿರ ರೂಪಾಯಿ ಜುಲ್ಮಾನೆ ಹಾಕಿದರೂ ಅವರಿಗೇನೂ ತೊಂದರೆಯಾಗುವುದಿಲ್ಲ. ಈಗ ವಿಧಾಯಕವಾಗಿರುವ ಶಿಕ್ಷೆ ಸಾಲದು, ಬಹಳ ಕಡಮೆ. ಯಾವುದೋ ಕಾಲದಲ್ಲಿ ಕಳ್ಳತನವಾಗದೇಯಿರುವಾಗ ಮಾಡಿದ ಕಾನೂನು ಈಗ ಸರಿಹೋಗುವುದಿಲ್ಲ. ಈ ಅಪರಾಧಕ್ಕೆ ಉಗ್ರವಾದ ಶಿಕ್ಷೆಯನ್ನು ವಿಧಿಸಬೇಕಾಗಿದೆ. ಇದಕ್ಕೆ ಸೂಕ್ತವಾದ

(ಶ್ರೀ ಎಚ್. ಎಸ್. ರುದ್ರಪ್ಪ)

ಕಾನೂನನ್ನು ಈ ಅಧಿವೇಶನದಲ್ಲೇ ಸಭೆಯ ಮುಂದೆ ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೆಂಗಳೂರು ಕೋಠಿಯಿಂದ ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಚೀಲಗಳಲ್ಲಿ ಹಾಕಿಕೊಂಡು ಕಂಟೋನ್ಮೆಂಟಿಗೆ ಸಾಗಿಸುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಇಲ್ಲಿ ಚರ್ಚೆ ಮಾಡುವುದರಲ್ಲಿ ಅಂಥವರೆಲ್ಲ ಹುಷಾರಾಗಿ ಬಿಡುತ್ತಾರೋ ಏನೊ !

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಎಂಟು ಹತ್ತು ಮೈಲಿಗೆ ಒಬ್ಬ ಗಾರ್ಡ್ ಹಾಕಿದ್ದಾರೆ. ಇವರಿಂದ ಸಾಧ್ಯವೆ ! ಇವರ ಸಂಖ್ಯೆಯನ್ನು ಹೆಚ್ಚು ಮಾಡಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಹೆಚ್ಚು ಖರ್ಚಾಗುತ್ತಿದೆಯೆಂದು ಈಗಾಗಲೇ ಹೇಳುತ್ತಿದ್ದಾರೆ. ಗಾರ್ಡುಗಳೂ ಇತರರೂ ಸತ್ಯಸಂಧರಾಗಬೇಕು. ಇಲ್ಲದಿದ್ದರೆ ಈಗಾಗಲೇ ಒಂದು ಕೋಟಿ ನಲವತ್ತು ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಇನ್ನೂ ಮೂರು ಕೋಟಿ ರೂಪಾಯಿ ಖರ್ಚುಮಾಡಿದರೂ ಕಳ್ಳತನ ನಿಲ್ಲುವುದಿಲ್ಲ. ಅಪರಾಧಿಗಳಿಗೆ ಉಗ್ರವಾದ ಶಿಕ್ಷೆಯಾಗಬೇಕು. ಹೇಗೆ ಮಾಡಬೇಕೆಂದು ಯೋಚನೆಮಾಡುತ್ತಿದ್ದೇವೆ.

ಶ್ರೀ ಎ. ಮುನಿಯಪ್ಪ.—ಆ ಲಾರಿ, ಕಾರುಗಳನ್ನು ಫರ್‌ಫೀಟ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳಿರತಕ್ಕ ವಿಚಾರವೆಲ್ಲ ನನಗೆ ಗೊತ್ತಿದೆ. ಆದರೆ ಅಲ್ಲಿ ಕಾನೂನು ಯಾವ ರೀತಿ ಇವೆಯೋ ಗೊತ್ತಿಲ್ಲ. ಅಂತೂ ಜಾಮೀನು ಮೇಲೆ ಬಿಟ್ಟಿದ್ದಾರೆ. ಆ ಕಾನೂನನ್ನು ನಾವು ಮುಂದಕ್ಕೆ ಬದಲಾವಣೆ ಮಾಡಲು ಪರಿಶೀಲನೆ ಮಾಡುತ್ತೇವೆ. ಶ್ರೀ ಕಾಮತ್‌ರವರು ಅರಣ್ಯ ಶಾಖೆಯ ಜಮೀನುಗಳು ಸಾಗುವಳಿಗೆ ಸರಿಯಾಗಿ ಸಿಕ್ಕುತ್ತಿಲ್ಲವೆಂದು ತಿಳಿಸಿದ್ದಾರೆ. ಅಲ್ಲದೆ ಅಲ್ಲಿ ವ್ಯವಸಾಯಗಾರರಿಗೆ ಮನೆ ಕಟ್ಟಿಕೊಳ್ಳಲು ತೊಂದರೆ ಬಹಳವಾಗಿದೆ ಎಂದು ತಿಳಿಸಿದರು. ಅವರು ಈ ವಿಚಾರಗಳನ್ನೆಲ್ಲಾ ಆ ಮಲೆನಾಡು ಕಾನ್‌ಫರೆನ್ಸಿನಲ್ಲೂ ನಮ್ಮ ಗಮನಕ್ಕೆ ತಂದಿದ್ದಾರೆ. ಆ ತೊಂದರೆಗಳನ್ನೆಲ್ಲಾ ನಿವಾರಣೆ ಮಾಡಲು ಯಾವ ರೀತಿಯಾಗಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲಾಗುತ್ತದೆ. ಆದರೆ ನನಗೆ ಈಗ ಕಾಲಾವಕಾಶವಿಲ್ಲದ್ದರಿಂದ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರತಿಯೊಂದು ವಿಚಾರಕ್ಕೂ ಉತ್ತರ ಕೊಡಲು ಆಗುವುದಿಲ್ಲ. ಶ್ರೀ ಕಾಮತ್‌ರವರು ಫಾರೆಸ್ಟ್ ವರ್ಕರ್ಸ್ ಕೋ-ಆಪರೇಟೀವ್ ಸೊಸೈಟಿಗಳ ವಿಚಾರ ಬೇರೆ ಪ್ರಸ್ತಾಪಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ಕೆಲವರಿಂದ ಈ ಯೋಜನೆಯನ್ನು ತಪ್ಪಿಸಬೇಕೆಂದು ಅರ್ಜಿಗಳು ಬಂದಿದ್ದರೆ ಮತ್ತೆ ಕೆಲವರು ಇದಕ್ಕೆ ಅದಷ್ಟು ಉತ್ತೇಜನ ಕೊಟ್ಟು ಇವುಗಳನ್ನು ಅಭಿವೃದಿಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ಈ ಯೋಜನೆಯನ್ನು ಅಡವಿಯಲ್ಲಿ ಸ್ವತಃ ಯಾರುಕೆಲಸ ಮಾಡುತ್ತಾರೋ ಅಂಥವರಿಗೆ ಮಾತ್ರ ಮೊದಲು ಆಳವಡಿಸಿ ಬೊಂಬಾಯಿ ಸರ್ಕಾರದಲ್ಲಿ ಒಂದ ಸ್ಕೀಮನ್ನು ಮಾಡಲಾಗಿದ್ದಿತು. ಆದರೆ ಇತ್ತೀಚಿಗೆ ಇದರಲ್ಲಿ ಇತರರೂ ಲಾಭ ಪಡೆಯಲು ಸೇರಿಕೊಂಡಿರುತ್ತಾರೆ. ಆದ್ದರಿಂದ ಈ ಯೋಜನೆಯನ್ನು ಕಡ್ಡಾಯವಾಗಿ ಯಾರು ಯಾರು ಅರಣ್ಯದಲ್ಲಿ ಕೆಲಸ ಮಾಡುತ್ತಿರುತ್ತಾರೋ ಅಂಥವರಿಗೆ ಮಾತ್ರ ಅವಕಾಶ ಕೊಟ್ಟು ಈ ಸಂಸ್ಥೆಗಳನ್ನು ಬೆಳೆಸಲು ಪ್ರೋತ್ಸಾಹ ಕೊಡತಕ್ಕದ್ದು ಆವಶ್ಯಕ. ಇನ್ನು ಶ್ರೀ ಬದರೀನಾರಾಯಣ ಅವರು ಸಕ್ಕರೆ ಕಂಪೆನಿಯ ವಿಚಾರವನ್ನು ಪ್ರಸ್ತಾಪ ಮಾಡಿ ಅಲ್ಲಿ ಹೆಚ್ಚಿಗೆ ಕಬ್ಬನ್ನು ಬೆಳೆಯಲು ಜನರಿಗೆ ಸಾಕಷ್ಟು ಜಮೀನಿಲ್ಲವೆಂಬುದಾಗಿ ತಿಳಿಸಿದ್ದಾರೆ. ಈ ವಿಚಾರವಾಗಿ ಇನ್ನೂ ಮೊನ್ನೆ ತಾನೆ ಸರ್ಕಾರದವರು 1,500 ಎಕರೆ ಭೂಮಿಯನ್ನು ಅರಣ್ಯ ಖಾತೆಯಿಂದ ರೆವಿನ್ಯೂ ಇಲಾಖೆಗೆ ರಿಲೀಜ್‌ಮಾಡಿ ಕೊಟ್ಟಿದ್ದಾರೆ. ಆದರೆ ಆ ಆರ್ಡರಿನ್ನೂ ಸ್ಥಳಕ್ಕೆ ತಲುಪಿಲ್ಲವೆಂದು ಕಾಣುತ್ತದೆ. ಈ ವರ್ಷ ಪ್ರಾರಂಭ ವಾಗುವಾಗ್ಗೆ ಹೆಚ್ಚು ಜನರು ಕಬ್ಬನ್ನು ಬೆಳೆಯಲು ಸಾಧ್ಯವಾಗುತ್ತದೆಂದು ನಾನು ಅವರಿಗೆ ತಿಳಿಸಬಯಸುತ್ತೇನೆ. ಆ ಪ್ರದೇಶದಲ್ಲಿ ಜಮೀನಿಲ್ಲದವರಿಗೆ ಜಮೀನು ಕೊಡುವುದಲ್ಲದೆ ಅವರಿಗೆ ಕೆಲವು ಕಾಲ ಪ್ರೋತ್ಸಾಹ ಕೊಟ್ಟು ಅಲ್ಲಿ ಹೆಚ್ಚಾಗಿ ಕಬ್ಬಿನ ಬೆಳೆಯನ್ನು ಪುರೋಭಿವೃದ್ಧಿಗೆ ತರಲು ಪ್ರಯತ್ನ ನಡೆಸುವುದಲ್ಲದೆ ರೈತಾಪಿ ಜನರಿಗೂ ಸಹ ಹೆಚ್ಚು ಅನುಕೂಲವಾಗುವ ರೀತಿ ಕೆಲಸ ನಡೆಸಲಾಗುತ್ತದೆಂದು ನಾನು ಅವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ಮನ್ನಾ ಜಂಗಲಿಗಳಲ್ಲಿರತಕ್ಕ ಜಮೀನನ್ನು ಸಾಗುವಳಿಗೆ ಕೊಡತಕ್ಕ ವಿಚಾರದಲ್ಲ ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಆದರೆ ಈ ಬಗ್ಗೆ ಸರ್ಕಾರದವರ ನೀತಿಯೇನೆಂಬುದನ್ನು ತಿಳಿಸುವಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ನಮ್ಮ ರಾಜ್ಯದಲ್ಲಿರತಕ್ಕ ಅರಣ್ಯ ಪ್ರದೇಶ ಒಟ್ಟು ಪ್ರದೇಶದ ಶೇಕಡ 15.6 ರಷ್ಟು ಮಾತ್ರ ಇದೆ. ಆದರೆ ನಮಗೆ ಕನಿಷ್ಠ ಪಕ್ಷ ಶೇಕಡ 33 1/3 ಭಾಗದಷ್ಟಾದರೂ ಅರಣ್ಯ ಪ್ರದೇಶವಿರಬೇಕೆಂಬುದಾಗಿ ಕೇಂದ್ರ ಸರ್ಕಾರದವರು ತಿಳಿಸುತ್ತಿದ್ದಾರೆ. ಹೀಗಿರುವಾಗ ಅರಣ್ಯದ ಭೂಮಿಯನ್ನು ವ್ಯವಸಾಯಕ್ಕೆ ಬಿಟ್ಟು ಕೊಡಲು ಸಾಮಾನ್ಯವಾಗಿ ಆಗುವುದೇ ಇಲ್ಲ. ಆದರೆ ಅನೇಕರು ವಿಶೇಷವಾಗಿ ಒತ್ತಾಯಮಾಡುತ್ತಿರುವುದರಿಂದ ವಿಧಿಯಿಲ್ಲದೆ ಅನಿವಾರ್ಯವಾಗಿ ಕೆಲವುಕಡೆ ಭೂಮಿಯನ್ನು ಸಾಗುವಳಿಗೆ ಬಿಟ್ಟುಕೊಡಲಾಗಿದೆ. ಅದರೆ ಅಡವಿಯ ಬೆಳವಣಿಗೆಗೇನೂ ತೊಂದರೆಯಾಗದಿದ್ದರೆ ಕೊಂಚ ಭಾಗವನ್ನು ಕೊಟ್ಟರೂ ಕೊಡಬಹುದಿತ್ತು. ಆದರೆ ಈ ವಿಚಾರವನ್ನು ಆಯಾ ಸ್ಥಳದ ಮಾಹಿತಿಗನುಗುಣವಾಗಿ ಪರಿಶೀಲನೆ ಮಾಡಬೇಕಾಗಿರುತ್ತದೆ.

ಶ್ರೀ ಎಂ. ಲಿಂಗೇಗೌಡ.—ತಾಂಗ್ಯಾ ಸಿಸ್ಟಂ ವಿಚಾರವೇನಾಯಿತು ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ತಾಂಗ್ಯಾ ಸಿಸ್ಟಂನ್ನು ಜಾರಿಗೆ ತರುವ ವಿಚಾರದಲ್ಲಿ ಏನೂ ತೊಂದರೆಗಳಿದ್ದ ಹಾಗೆ ಕಾಣುವುದಿಲ್ಲ. ಆ ಪದ್ಧತಿಯಿಂದ ಅಡವಿಬೆಳೆಯಲು ಇನ್ನು ಅನುಕೂಲವಿದೆಯೆಂದು ಮೈಸೂರು ಸರ್ಕಾರದವರು ಅದನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಪದ್ಧತಿಯಿಂದ್ದರೇನೂ ತೊಂದರೆಯಾಗುವುದಿಲ್ಲ. ಇದನ್ನು ಮಾಡೋಣ. ಕಾಡು ಇತ್ತೀಚೆಗೆ ಬಹಳ ಲುಕ್ಸಾನಾಗುತ್ತಿದೆ. ಕಡತಲೆ ಜಾಸ್ತಿ ಆಗುತ್ತಿದೆ. ಕಾಡನ್ನು ಬೆಳೆಸಲು ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹೋದ ವರ್ಷ 8,000 ಎಕರೆಗಳಲ್ಲಿ ಕಾಡು ಬೆಳೆಸಲು ಪ್ರಯತ್ನ ಮಾಡಲಾಗಿದೆ. ಈ ವರ್ಷ [illegible],800 ಎಕರೆಗಳಲ್ಲಿ ಕಾಡು ಬೆಳೆಸಲು ಪ್ರಯತ್ನ ನಡೆದಿದೆ. ಈ ವಿಚಾರದಲ್ಲಿ ಸರ್ಕಾರದವರು ಎಷ್ಟೆಷ್ಟು ಪ್ರಯತ್ನಗಳನ್ನು ಈ ಅರಣ್ಯಗಳ ಅಭಿವೃದ್ಧಿಗಾಗಿ ನಡೆಸುತ್ತಿದ್ದಾರೆ ಎಂಬುದನ್ನು ಈ ಮಾನ್ಯ ಸಭೆಯ ಸದಸ್ಯರಿಗೆ ಒಂದೆರಡು ಕಡೆಗಳಿಗೆ ಕರೆದುಕೊಂಡು ಹೋಗಿ ತೋರಿಸಬೇಕೆಂದು ಅದಕ್ಕೆ ಸೂಕ್ತ ಪ್ರಯತ್ನಗಳನ್ನೂ ಮಾಡಬೇಕೆಂದೂ ನಾನು ನಮ್ಮ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಇನ್ನು ಹಾಸನ ಜಿಲ್ಲೆಯಲ್ಲಿ ನಾಟಾ ಕಳವು ಜಾಸ್ತಿಯಾಗಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಅದನ್ನು ತಡೆಗಟ್ಟಲು ಸರ್ವ ಪ್ರಯತ್ನಗಳನ್ನೂ ಮಾಡುತ್ತೇವೆ. ಇನ್ನು ಕೆಲವರು ಜೇನುಸಾಕುವ ವಿಚಾರ ಹೇಳಿದ್ದಾರೆ. ಇದು ಒಂದು ಗೃಹಕೈಗಾರಿಕೆಯಂತಿದೆ. ಇದನ್ನು ಅಭಿವೃದ್ಧಿಗೆ ತಂದರೆ ಇದರಿಂದ ಸರ್ಕಾರಕ್ಕೂ ಸಹ ಹೆಚ್ಚಿನ ವರಮಾನವಿದೆ. ಇನ್ನೂ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಮತ್ತು ಸಲಹೆಗಳನ್ನು ನೀಡಿದ್ದಾರೆ. ನನಗೆ ಈಗ ಮಾತನಾಡಲು ಹೆಚ್ಚು ಕಾಲಾವಕಾಶವಿಲ್ಲದ್ದರಿಂದ ಆ ಎಲ್ಲ ವಿಚಾರಗಳ ಬಗ್ಗೆಯೂ ಸೂಕ್ತ ಪರಿಶೀಲನೆ ನಡೆಸಿ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲಾಗುತ್ತದೆಂಬ ಭರವಸೆಯನ್ನು ಸಭೆಗೆ ನೀಡಿ ತಾವೆಲ್ಲರೂ ಈ ಡಿಮ್ಯಾಂಡ್‌ಗಳಿಗೆ ತಮ್ಮ ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಅಧ್ಯಕ್ಷರೇ, ಶ್ರೀ ಎಚ್. ಕೆ. ವೀರಣ್ಣಗೌಡರಿಗೆ ಮೈಯ್ಯಲ್ಲಿ ಅಸ್ವಸ್ಥತೆಯಿರುವುದರಿಂದ ನಾನೀಗ ಅವರಿಗೆ ಸಂಬಂಧಪಟ್ಟ ಎರಡು-ಮೂರು ವಿಚಾರಗಳ ಬಗ್ಗೆ ಉತ್ತರ ಕೊಡಲು ನಿಂತಿದ್ದೇನೆ. ಶ್ರೀ ನರಸಿಂಹನ್ ಅವರು ಮಾತನಾಡುವಾಗ ವಿದ್ಯುಚ್ಛಕ್ತಿ ಇಲಾಖೆಯ ವಿಷಯದಲ್ಲಿ ಒಂದೆರಡು ವಿಚಾರಗಳನ್ನೆತ್ತಿದ್ದಾರೆ. ಓವರ್ ಹೆಡ್‌ಕೇಬಲ್ ಮತ್ತು ಫ್ರೀಕ್ವೆನ್ಸಿ ಕನ್‌ವರ್ಷನ್‌ಗಳ ವಿಚಾರದಲ್ಲಿ ಏನು ತೊಂದರೆ ಆಗುತ್ತಿದೆ ಎಂಬುದನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಆ ಪ್ರಶ್ನೆಗಳಿಗೆಲ್ಲ ನನಗೀಗ ದೀರ್ಘವಾಗಿ ಉತ್ತರ ಕೊಡಲು ಕಾಲಾವಕಾಶವಿಲ್ಲ. ಅವರು ತಿಳಿಸಿರತಕ್ಕ ಪ್ರತಿಯೊಂದು ವಿಚಾರವನ್ನೂ ನಾನು ಕೂಲಂಕಷವಾಗಿ ವಿಮರ್ಶೆಮಾಡಲು ಇಲಾಖೆಯವರ ಗಮನಕ್ಕೆ ತರುತ್ತೇನೆಂದು ಮಾತ್ರ ಈಗ ತಿಳಿಸಲಿಚ್ಛಿಸುತ್ತೇನೆ. ಇನ್ನು ಅವರು ಆಯಾ ಬಾಬಿಗೆ ಒಬ್ಬ ಟೆಕ್ನಿಕಲ್ ಆಡಿಟರ್ ಇರತಕ್ಕದ್ದು ಉತ್ತಮ ಎಂದು ಸಲಹೆ ಕೊಟ್ಟಿದ್ದಾರೆ. ಆ ರೀತಿ ಇರತಕ್ಕದ್ದು ಉತ್ತಮವಾದುದೆಂದು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಇನ್ನು ಶ್ರೀ ಕೆ. ಕೆಂಚಪ್ಪನವರು ಹಳೆಯ ಮೈಸೂರಿನ ವಿಚಾರವಾಗಿ ಬಹಳ ಪ್ರಸ್ತಾಪಮಾಡಿದ್ದಾರೆ. ಇಲ್ಲಿ ಪ್ರತಿಯೊಂದು ವಿಚಾರದಲ್ಲೂ ಪಕ್ಷಪಾತ ಮನೋಭಾವನೆ ತುಂಬಿತುಳುಕುತ್ತಿದೆ ಎಂದು ಹೇಳುತ್ತಾ ತುಂಗಭದ್ರಾ ನದಿಯ ಅಕ್ಕಪಕ್ಕದಲ್ಲೆಲ್ಲ ಎಲೆಕ್ಟ್ರಿಸಿಟಿ ಲೈನನ್ನು ಎಳೆದಿರತಕ್ಕ ವಿಚಾರವನ್ನೆತ್ತಿದ್ದಾರೆ. ಆದರೆ ಅವರೇನೂ ಈ ವಿಚಾರವನ್ನು ಹೊಸದಾಗಿ ಎತ್ತಿದಂತೆ ಆಗುವುದಿಲ್ಲ. ಕಾರಣವೇನೆಂದರೆ ಈ ಮೊದಲೆ ಶ್ರೀ ಭೀಮಪ್ಪನಾಯಕರೇ ಆ ವಿಚಾರವಾಗಿ ಈ ಸಭೆಯಲ್ಲಿ ಮಾತನಾಡಿದ್ದಾರೆ. ಆದರೆ, ಏಕೆ ಇದನ್ನು ಮಾಡಿದರು ಅಂದರೆ, ಅಲ್ಲಿ ಹೊಳೆಯ ಹತ್ತಿರ Lift pumps ಹಾಕಿಕೊಂಡು ಅದರಿಂದ ನೀರೆತ್ತಿ ಒದಗಿಸುವ ಒಂದು ಯೋಜನೆಯನ್ನು ಮಾಡಿದ್ದರು. ಇದು ಸರಿಯಾಗಿರಬಹುದು ಅಥವಾ ಸರಿಯಾಗಿಲ್ಲದಿರಬಹುದು. ಸದ್ಯಕ್ಕೆ ಆ ವಿಷಯವನ್ನು ಪ್ರಸ್ತಾಪಮಾಡುವುದು ಅನಗತ್ಯವೆಂದು ಹೇಳುತ್ತೇನೆ. ಆದರೆ ಒಂದು ವಿಷಯ ಮಾತ್ರ ಹೇಳಬೇಕು, ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಸಿರಾ ವಿಚಾರವನ್ನು ಈ ಸಂದರ್ಭದಲ್ಲಿ ಅವರು ಪ್ರಸ್ತಾಪಮಾಡಿದ್ದು ತಪ್ಪು ಭಾವನೆಯಿಂದ ಎಂದು. 1951ನೆಯ ಇಸವಿಯಿಂದೀಚೆಗೆ Lift irrigation and River Valleys ಎಂಬ Headನಲ್ಲಿ ಎಷ್ಟೋ ರೂಪಾಯಿಗಳನ್ನು ಖರ್ಚುಮಾಡಿದೆ. ಪ್ರಥಮತಃ ಎಲ್ಲೆಲ್ಲಿ ಬಾವಿಗಳಿದ್ದುವು, ಮತ್ತು ಎಲ್ಲೆಲ್ಲಿ ನೀರಿನ ಸೌಕರ್ಯವಿತ್ತು ಅಂಥ ಕಡೆಗಳಲ್ಲೆಲ್ಲಾ ಮೊದಲು ಗಮನಕೊಡಬೇಕೆಂದು ಹೇಳಿ ಕೇಂದ್ರ ಸರ್ಕಾರದವರಿಗೆ ಒಂದು ಯೋಜನೆಯನ್ನು ಕಳುಹಿಸಿ ಅದರ ಮೇಲೆ ಕೇಂದ್ರ ಸರ್ಕಾರದವರು ಒದಗಿಸಿದ 50 ಲಕ್ಷ ಒಂದುಸಾರಿ, ಇನ್ನು 50 ಲಕ್ಷ ಇನ್ನೊಂದು ಸಾರಿ ಖರ್ಚು ಮಾಡಿದ್ದೇವೆ. ಇದನ್ನೆಲ್ಲಾ ಒಂದು Planned Basis ಮೇಲೆ ಪ್ರತಿವರ್ಷವೂ ಹೆಚ್ಚು ಹೆಚ್ಚು Irrigation ಪಂಪುಗಳನ್ನು ಕೊಡಬೇಕೆಂದು ಮಾಡಿಕೊಂಡು, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ನಮ್ಮ ಸಂಸ್ಥಾನದ North-east ಪ್ರದೇಶದಲ್ಲಿ ಮಾಡಿದ್ದಾರೆ. ಇದೇನೂ ಹೊಸ ಸ್ಕೀಮೇನೂ ಅಲ್ಲ. ಮತ್ತು ಯಾವ ಸ್ವಜನ ಪಕ್ಷಪಾತದ ವಿಷಯವೂ ಇದರಲಲ್ಲ. ಅಲ್ಲದೆ, ಅಲ್ಲಿರತಕ್ಕ ಜನರಲ್ಲಿ ಸ್ವಜನರು ಯಾರೂ ಇಲ್ಲವೇ ಇಲ್ಲ. ಯಾರೊಬ್ಬರಿಗೂ ಸಹಾಯ ಮಾಡಬೇಕೆಂದು ಉದ್ದೇಶಪೂರ್ವಕವಾಗಿ ಏನೂ ಮಾಡಿಲ್ಲ. 30-40 ಅಡಿ ಬಾವಿ ತೆಗೆದು ಬಿಟ್ಟರೆ ಯಥೇಚ್ಛ ನೀರು ಬರುತ್ತದೆ. ಈ ಪ್ರದೇಶಗಳಲ್ಲಿ ಕೆಲವು ಬಾವಿಗಳು ಆಗಲೇ ಇದ್ದುವು. ಅವುಗಳನ್ನು Renovate ಮಾಡಬೇಕೆಂಬ ದೃಷ್ಟಿಯಿಂದ ಮಾತ್ರ ಕೊಟ್ಟಿದ್ದೇವೆ.

ಶ್ರೀಮಾನ್ ಬದರೀನಾರಾಯಣ ಅವರು ಹೇಳಿದ ವಿಚಾರವನ್ನು ಆಮೇಲೆ ಪ್ರಸ್ತಾಪಮಾಡುತ್ತೇನೆ.

ಶ್ರೀಮತಿ ನಾಗರತ್ನಮ್ಮನವರು ಒಂದು ಒಳ್ಳೆಯ ಅಂಶವನ್ನು ಪ್ರಸ್ತಾಪಮಾಡಿದ್ದಾರೆ. She is really a chip of the old block. ಅವರ ತಂದೆ ಶ್ರೀ ಸಿ. ಆರ್. ಗೌಡರು, ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದವರು. ಅವರಿಂದ ಒಳ್ಳೆಯ ತರಪೇತಾಗಿ ಬಂದಿರುವವರಾಗಿ ಕೊಟ್ಟಿರುವಂಥ ಸಲಹೆಗಳು ನಿಜವಾಗಿಯೂ ಸ್ವಾಗತಾರ್ಹವಾದುವು. ನನಗಂತೂ, ಆರ್ಥಿಕ ಮಂತ್ರಿಯಾಗಿ, ಅವು ಬಹಳ ಉತ್ತಮವಾದುವೆನ್ನಿಸುತ್ತವೆ. Economy ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಎಲ್ಲೆಲ್ಲಿ ಸಾಧ್ಯವೋ, ಯಾವ ಯಾವ ಹುದ್ದೆಗಳನ್ನು ತೆಗೆಯುವುದಕ್ಕೆ ಸಾಧ್ಯವೋ ಅವುಗಳನ್ನು ಖಂಡಿತವಾಗಿ ನೋಡಿಯೇ ನೋಡುತ್ತೇವೆ. ಅನಾವಶ್ಯಕವಾಗಿ ಖರ್ಚು ತೋರಿಸಿದ್ದರೆ ಅವನ್ನು ತನಿಖೆಮಾಡದೆ ಬಿಡುವುದಿಲ್ಲ. ಆದರೆ ಒಂದು ವಿಷಯ ಅವರಿಗೆ ತಿಳಿಸಬೇಕು. ಅವರ ತಂದೆಯವರ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ವ್ಯತ್ಯಾಸವಿದೆ. ಅವರ ತಂದೆಯವರ ಕಾಲಕ್ಕಿಂತ ಈಗಿನ ಕೆಲಸ ಮೂರು ನಾಲ್ಕರಷ್ಟು ಹೆಚ್ಚಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, A point of order. ಮಾನ್ಯ ಮಂತ್ರಿಗಳು 'ತಾವು' 'ತಮಗೆ' ಎಂದು ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ಅವರು ಅಧ್ಯಕ್ಷರನ್ನು ಉದ್ದೇಶಿಸುತ್ತಿಲ್ಲ. ಹೀಗೆ ಮಾಡಬಹುದೇ ಎಂಬ ವಿಷಯದಲ್ಲಿ ತಮ್ಮ ರೂಲಿಂಗ್ ಆಗಬೇಕು.

ಅಧ್ಯಕ್ಷರು.—ಇಂಗ್ಲೀಷಿನಲ್ಲಿ Second person ಮತ್ತು Third personಗಳಿಗೆ ಬೇರೆ ಬೇರೆ ಪದಗಳಿರುವಂತೆ ಕನ್ನಡದಲ್ಲಿ 'ತಾವು' ಎಂಬ ಪದವನ್ನುಪಯೋಗಿಸಿ ಭೇದವನ್ನು ಸೂಚಿಸುವುದಕ್ಕಾಗುವುದಿಲ್ಲ. 'ತಮ್ಮ' ಎನ್ನುವುದು Second person ಆಗಬಹುದು, Third person ಕೂಡ ಆಗಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಾಗಾದರೆ ತಮ್ಮ ತಂದೆಯವರು ಎಂದರೆ ಅಧ್ಯಕ್ಷರ ತಂದೆಯವರು ಎಂದಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ಶ್ರೀಮಾನ್ ಪುಟ್ಟರಾಮಯ್ಯನವರು ತಿಳಿದುಕೊಳ್ಳಬೇಕು, ನಾವೇನು ಮಾತನಾಡಿದರೂ ಅದು ಅಧ್ಯಕ್ಷರ ಮೂಲಕ ಸದಸ್ಯರುಗಳಿಗೆ ಅನ್ವಯಿಸುತ್ತದೆ ಎಂದು.

ಅಧ್ಯಕ್ಷರು.—ಪುಟ್ಟರಾಮಯ್ಯನವರೂ ಅದೇ ರೀತಿ ಮಾತನಾಡುವ ಪ್ರಯತ್ನಮಾಡಿದ್ದಾರೆ.

ಶ್ರೀ ಟಿ. ಮರಿಯಪ್ಪ.—ದಿನವೂ ಮಾಡುತ್ತಿದ್ದಾರೆ. ಆದ್ದರಿಂದ ಹಿಂದೆ ಇದ್ದಂಥ ಇಲಾಖೆಯ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಈಗ ಜನರಿಂದ ಬರುತ್ತಿರುವ ಡಿಮ್ಯಾಂಡ್ ಬಹಳವಾಗಿದೆ. ಮೊದಲು ಒಂದು ಸಾವಿರ ಅಪ್ಲಿಕೇಷನ್ಸ್ ಬರುವುದೇ ಕಷ್ಟವಾಗಿದ್ದರೆ, ಈಗ ಅಪ್ಲಿಕೇಷನ್‌ಗಳ ಸಂಖ್ಯೆ ಹತ್ತು ಸಾವಿರದ ವರೆಗೂ ಹೋಗಿದೆ. Expansion ಅಂತೂ Rural electrification ಹೆಚ್ಚಿಗೆ ಆಗಬೇಕೆಂದು ಅಸಾಧ್ಯ ಒತ್ತಡ ಬರುತ್ತಿದೆ. ಇದಲ್ಲದೆ ಅಪ್ಲಿಕೇಷನ್ ಹಾಕಿದ್ದರೂ ಹಿಂದೆ ನಿಧಾನವಾಗಿದ್ದರೂ ಕೇಳುವವರೇ ಇರಲಿಲ್ಲ. ಸರ್ಕಾರವನ್ನು ಕೇಳಬೇಕೆಂದರೆ ಹೆದರಿಕೆಯಿತ್ತು. ಈಗ ಪ್ರತಿಯೊಂದೂ ಜಾಗ್ರತೆ ಆಗಬೇಕು. ಆದ್ದರಿಂದ ಕೆಲಸದಲ್ಲಿ ಜಾಗ್ರತೆ ಮಾಡಬೇಕೆಂದು ಹೇಳಿ ಸಿಬ್ಬಂದಿ ಸ್ವಲ್ಪ ಜಾಸ್ತಿಯಿರಬಹುದೇ ಹೊರತು ವ್ಯಥಾ ಜಾಸ್ತಿ ಮಾಡಿಲ್ಲ. ಅಲ್ಲದೆ Economy ಆಫೀಸರೊಬ್ಬರನ್ನು ನೇಮಕಮಾಡಬೇಕೆಂಬ ಯೋಚನೆ ಕೂಡ ಇದೆ. ಅವರು ಮಾಡುವ ಸಲಹೆಯನ್ನು ನೋಡಲೇಬೇಕಾಗಿದೆ, ನೋಡಿಯೇ ನೋಡುತ್ತೇವೆ.

ಇನ್ನೊಂದು ವಿಚಾರ ಹೇಳಿದರು, ಈ ಇಲಾಖೆಯಲ್ಲಿ ಎಷ್ಟು ವರ್ಷಗಳಾದರೂ 'ಟೆಂಪರರಿ' ಎಂದು ಇಟ್ಟುಕೊಂಡೇ ಇರುತ್ತಾರೆ ಎಂದು.

ಶ್ರೀಮಾನ್ ಕೆ. ಟಿ. ಭಾಷ್ಯಂರವರು ಇದ್ದಾಗ ಏನೂ ಟೆಂಪರರಿಯಾಗಿ ಇರಲಿಲ್ಲ. ಡೆವಲಪ್‌ಮೆಂಟ್ ಸ್ಕೀಮುಗಳನ್ನು ತೆಗೆದುಕೊಂಡಿರುವಾಗ ತಾತ್ಕಾಲಿಕವಾಗಿ ಆ ಕೆಲಸ ಪೂರೈಸುವವರೆಗೂ ಹೀಗೆ ಟೆಂಪರರಿ ನೌಕರರನ್ನು ಇಟ್ಟುಕೊಂಡಿರಬೇಕಾಗುತ್ತದೆ. ಸಾಮಾನ್ಯವಾಗಿ P.W.D. ಮತ್ತು ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಈ ರೀತಿ ಟೆಂಪರರಿ ಸ್ಟ್ಯಾಫ್ ಇರುವುದು ಸ್ವಾಭಾವಿಕ. Expansion Schemes ಇರುವವರೆಗೂ ಹೀಗೆ Temporary Staff ಇಟ್ಟುಕೊಳ್ಳಲೇ ಬೇಕಾಗುತ್ತದೆ. ಆದರೆ, ಮಾನ್ಯ ಸದಸ್ಯರು ಹೇಳಿದಹಾಗೆ ಕೆಲವರು ಮನೆಯ ಕೆಲಸಗಳನ್ನು ಮಾಡಿಸುತ್ತಾರೆ. ನಿಜ. ಅವರಿಗೂ ಅದು ಗೊತ್ತಿಲ್ಲದ ವಿಷಯವಲ್ಲ. ಎಲ್ಲರೂ ಮಾಡಿಸುತ್ತಿದ್ದಾರೆ. ಹಾಗೆ ಮಾಡಬಾರದು; ಅದು ಅನ್ಯಾಯ. ಸಾರ್ವಜನಿಕರ ದುಡ್ಡು ಎಂಬುದನ್ನು ತಿಳಿದೂ ಅವರಿಂದ ಸೌದೆ ಹೊಡೆಸಿಕೊಳ್ಳುವುದು, ಬಟ್ಟೆ ಒಗೆಯಿಸಿಕೊಳ್ಳುವುದು ಸರಿಯಲ್ಲ. ಅದನ್ನೆಲ್ಲಾ ತಪ್ಪಿಸಬೇಕೆಂದು ಉದ್ದೇಶಿಸಿದೆ.

ಇರಿಗೇಷನ್ ಪಂಪುಗಳ ವಿಚಾರದಲ್ಲಿ ಮಾತ್ರ ಮೈಸೂರು ಸರ್ಕಾರದವರು ಸರ್ಕಾರದವರಿಗಿಂತ ಅತ್ಯಂತ ಕಡಮೆ ದರದಲ್ಲಿ ಕೊಡುತ್ತಿದ್ದಾರೆ. ಇಂಡಸ್ಟ್ರೀಸಿಗೆ ಇನ್ನೂ ಕಡಮೆ ದರದಲ್ಲಿ ಕೊಡುತ್ತಿದ್ದೇವೆ, ಕೆ. ಜಿ. ಎಫ್. ಕಂಪೆನಿಗೆ ಕೊಟ್ಟಿರುವುದು ಬಹಳ ಕಡಮೆ ದರ ಎಂದು ಆಕ್ಷೇಪಣೆ ಮಾಡಿದರು. ಶಿವನಸಮುದ್ರವನ್ನು ಮಾಡಿದ್ದೇ ಕೆ. ಜಿ. ಎಫ್. ಗಾಗಿ ಅವರೊಡನೆ ಮಾಡಿಕೊಂಡಿರುವ ಅಗ್ರಿಮೆಂಟನ್ನು ನಾವು respect ಮಾಡುತ್ತಿದ್ದೇವೆ ಎಂದು ಮಾತ್ರ ನಾನದಕ್ಕೆ ಹೇಳುತ್ತೇನೆ. ಆದರೂ ಸರ್‌ಚಾರ್ಜ್ ಹಾಕಿದ್ದೇವೆ. ಅಲ್ಲದೆ ಮನೆಯವರಿಗೆ ಹಾಕುವಂತೆ ಕೈಗಾರಿಕೆಗಳಿಗೆ ಒದಗಿಸುವ ವಿದ್ಯುಚ್ಛಕ್ತಿಗೆ ಯೂನಿಟ್ಟಿಗೆ 4 ಆಣೆ ಹಾಕಿದರೆ ಕೈಗಾರಿಕೆಯ ಅಭಿವೃದ್ಧಿ ಸಾಧನೆ ಯೇ ಆಗುವುದಿಲ್ಲ. ಆದ್ದರಿಂದ ಎಲ್ಲಿ ಹೆಚ್ಚಿಗೆ Power consumption ಆಗುತ್ತಿದೆಯೋ, Bulk consumer ಗಳಿಗೆ permanent consumer ಗಳಿಗೆ ಕಡಮೆ ದರದಮೇಲೆ ಕೊಡಬೇಕೆಂಬುದು ಒಂದು Recognised ನೀತಿ. ಪ್ರಪಂಚದ ಎಲ್ಲ ಕಡೆಯಲ್ಲೂ ಆ ಪದ್ಧತಿಯಿದೆ.

ಶ್ರೀ ಕೆ. ಕೆಂಚಪ್ಪ.—ವ್ಯವಸಾಯಕ್ಕೆ ?

ಶ್ರೀ ಟಿ. ಮರಿಯಪ್ಪ.—ವ್ಯವಸಾಯಕ್ಕೂ ಮಿಕ್ಕೆಲ್ಲ ಕಡೆಗಳಿಗಿಂತ ಕಡಮೆ ದರದಲ್ಲಿ ಕೊಡುತ್ತಿದ್ದೇವೆ. ಮದ್ರಾಸಿನಲ್ಲಿ ಯೂನಿಟ್ಟಿಗೆ ಎರಡಾಣೆ ಹಾಕಿದ್ದಾರೆ. ಬೊಂಬಾಯಿನಲ್ಲಿ ಎರಡಾಣೆ ಹಾಕಿದ್ದಾರೆ. ನಮ್ಮಲ್ಲಿ ಯೂನಿಟ್ಟಿಗೆ ಒಂಭತ್ತು ಕಾಸಿನಂತೆ ಕೊಡುತ್ತಿದ್ದೇವೆ.

ಶ್ರೀ ಬದರಿ ನಾರಾಯಣ್ ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಶರಾವತಿ ಪ್ರಾಜೆಕ್ಟ್ ಸಂಬಂಧದಲ್ಲಿ ಸಬ್‌ಮರ್ಜ್ ಆಗುವ ಜಮೀನುಗಳ ರೈತರಿಗೆ ಸರಿಯಾದ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ. ಈ ಸಭೆಗೇ ಗೊತ್ತು, ಈ ಸರ್ಕಾರದ ನೀತಿ. ಎಲ್ಲಿ ಜನರಿಗೆ ತೊಂದರೆಯಾಗುತ್ತದೋ ಅಲ್ಲಿ Reasonable Compensation ಕೊಡುವುದಲ್ಲದೆ ಏನೇನು ಅನುಕೂಲಗಳನ್ನು ಕೊಡಬೇಕೋ ಅವುಗಳನ್ನು ಖಂಡಿತ ಕಲ್ಪಿಸಿಕೊಡುತ್ತೇವೆ. ಆ ವಿಷಯದಲ್ಲೇನೂ ಸಂಶಯ ಅಥವಾ ಗಾಬರಿಯಿಟ್ಟುಕೊಳ್ಳಬೇಕಾಗಿಲ್ಲವೆಂದು ಹೇಳುತ್ತೇನೆ.

ಶ್ರೀಮಾನ್ ಷಂಸುದ್ದೀನ್ ಅವರು Ports ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗತಾನೆ ಒಂದು ಬೇರೆ ಇಲಾಖೆಯನ್ನು ಇದಕ್ಕಾಗಿ ಏರ್ಪಾಡು ಮಾಡಿದ್ದೇವೆಯೆಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ; ಮತ್ತು ಬೊಂಬಾಯಿ ಸರ್ಕಾರದವರೇ ಆಗಲಿ, ಮದ್ರಾಸ್ ಸರ್ಕಾರದವರೇ ಆಗಲಿ ಏನು ಸ್ಕೀಮ್ Provide ಮಾಡಿದ್ದರೋ ಅದರ ಜೊತೆಗೆ ಒಂದು Lumpsum Provision ಬೇರೆ ಮಾಡಿದ್ದೇವೆ. ಆದರೆ ಒಂದಂಶವನ್ನು ನಾವು ತಿಳಿದುಕೊಳ್ಳಬೇಕು. ನಾವು ಈ ವಿಚಾರದಲ್ಲಿ free agents ಅಲ್ಲ. ಇಂಡಿಯಾ ಸರ್ಕಾರದವರು ಮತ್ತು Planning Commission ಅವರು ಇದಕ್ಕೆ ಒಪ್ಪಬೇಕು. ಎರಡನೆಯದಾಗಿ Development of Ports ವಿಷಯ ಆತುರ ಮಾಡಿದರೆ ಆಗುವುದಿಲ್ಲ. ನಿಧಾನವಾಗಿ ಪರಿಣತರನ್ನು ಕರೆಸಿ ಕೇಳಿ ಮಾಡಬೇಕೇ ವಿನಾ ಸುಮ್ಮನೆ ಆಗುವುದಿಲ್ಲ. ಹೊಸ ಮೈಸೂರಾಗಿ ಈಗ ಆರೇಳು ತಿಂಗಳುಗಳಲ್ಲಿ ತಾನೆ ಒಂದು Port ನಮಗೆ ಬಂದಿದೆ. ಬಹಳ ವರ್ಷಗಳಿಂದ ಇದ್ದರೂ ಮದ್ರಾಸ್ ಸರ್ಕಾರದವರು ಒಂದು ಸಣ್ಣ ಪೋರ್ಟನ್ನು ಮಾಡುವುದಕ್ಕಾಗಲಿಲ್ಲ. ಅಂಥಾದ್ದರಲ್ಲಿ ನಾವಾಗಲೇ ಸ್ವಲ್ಪ ಮಟ್ಟಿಗೆ ಪ್ರಯತ್ನ ನಡೆಸಿದ್ದೇವೆ. ಆದಷ್ಟು ಜಾಗ್ರತೆ ಮಾಡುತ್ತೇವೆ. ಮಂಗಳೂರನ್ನು All weather port ಆಗಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಕೇಂದ್ರ ಸರ್ಕಾರದವರ ಮತ್ತು ಪ್ಲಾನಿಂಗ್ ಕಮೀಷನ್ ಅವರ ಸಹಾಯ ಮಾತ್ರ ಕೊಡಬೇಕಾಗಿದೆಯೆಂದು ಹೇಳುತ್ತೇನೆ.

ಇಷ್ಟು ವಿಷಯಗಳನ್ನು ಹೇಳಿ ಬಹುಶಃ ಮಾನ್ಯ ಸದಸ್ಯರು ಎತ್ತಿದ ಅಂಶಗಳಿಗೆಲ್ಲಾ ಸಮಾಧಾನಕರವಾದ ರೀತಿಯಲ್ಲಿ ಉತ್ತರ ಕೊಟ್ಟಿದ್ದೇವೆಂದು ತಿಳಿದು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ.—ರೈತರಿಗೆ ರಾತ್ರಿ ಕಾಲದಲ್ಲಿ ಮಾತ್ರ ಕರೆಂಟನ್ನು ಉಪಯೋಗಿಸಬೇಕೆಂದೇಕೆ ಹೇಳಿದ್ದೀರಿ ?

ಶ್ರೀ ಟಿ. ಮರಿಯಪ್ಪ.—ಕರೆಂಟಿನ ಪರಿಸ್ಥಿತಿ ಕಷ್ಟವಾಗಿದ್ದುದರಿಂದ ರೈತರುಗಳೇ ಒಪ್ಪಿಕೊಂಡು ರಾತ್ರಿ

ಹೊತ್ತಿನಲ್ಲಿ ಕರೆಂಟ್ ಕೊಡಿ ಎಂದು ಕೇಳಿರುವುದರಿಂದ ರಾತ್ರಿ ಹೊತ್ತಿನಲ್ಲಿ load ಕಡಮೆ ಇರುತ್ತದೆ, ಕರೆಂಟ್ ಕೊಡಬಹುದೆಂದು ಹೇಳಿಕೊಟ್ಟಿದ್ದೇವೆ. ಒಂದುವೇಳೆ ಅವರು 'ರಾತ್ರಿಯು' ಹೊತ್ತು ಬೇಡವೆಂದರೆ ಕೊಡುವುದೇ ಇಲ್ಲ.

4 P.M.

*ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಔದ್ಯೋಗಿಕ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕೈಗಾರಿಕೆಯ ಇಲಾಖೆಗೆ ಸಂಬಂಧಪಟ್ಟ ಕೆಲವು ಮುಖ್ಯವಾದ ಅಂಶಗಳನ್ನು ಕುರಿತು ಸಭೆ ಚರ್ಚೆ ಮಾಡಿದೆ. ಸದಸ್ಯರು ಈ ಚರ್ಚೆಯಲ್ಲಿ ಭಾಗ ವಹಿಸುತ್ತಾ ಕೆಲವೊಂದು ವಿಷಯಗಳನ್ನು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತಂದರು. ಕಾಲಾವಕಾಶ ಸ್ವಲ್ಪ ಇರುವುದರಿಂದ ನಾನು ಸೂಕ್ಷ್ಮದಲ್ಲಿ ಹೇಳುವುದಾದರೆ ಮುಖ್ಯವಾದ ಅಂಶ ಒಂದು ಸರ್ಕಾರದ ಉದ್ಯಮಗಳಲ್ಲಿ ನಷ್ಟ ಸಂಭವಿಸುತ್ತಾ ಇದೆ, ಸಾಕಷ್ಟು ರೀತಿಯಲ್ಲಿ ಲಾಭಗಳಿಸುತ್ತಾ ಇಲ್ಲ ಎನ್ನುವಂತಹದು. ಎರಡನೆಯದು, ಹೊಸ ಕೈಗಾರಿಕೆಗಳನ್ನು ಅಥವಾ ಉದ್ಯಮಗಳನ್ನು ಸರ್ಕಾರ ಇತ್ತೀಚೆಗೆ ಪ್ರಾರಂಭ ಮಾಡಿಲ್ಲ, ಇದ್ದದ್ದನ್ನೇ ನಡೆಸುತ್ತಾ ಹೋಗುವಂಥಾದ್ದು ಕಂಡುಬರುತ್ತಿದೆ ಎನ್ನುವುದು. ಮೂರನೆಯದು, ಅಭಿವೃದ್ಧಿ ಯೋಜನೆಗಳು ಸಾಕಷ್ಟು ಕಂಡುಬರುತ್ತಾ ಇಲ್ಲ ಎನ್ನುವುದು, ನಾಲ್ಕನೆಯದು ಹಣದ ದುರುಪಯೋಗ ನಾನಾವಿಧದಲ್ಲಿ ಈ ಕೈಗಾರಿಕಾ ಸಂಸ್ಥೆಗಳ ಆಡಳಿತ ವ್ಯವಹಾರದಲ್ಲಿ ಕಂಡುಬರುತ್ತಿದೆ ಎಂದು ಹೇಳುವಂಥಾದ್ದು. ಬೊಂಬಾಯಿ ಕರ್ನಾಟಕ ಪ್ರದೇಶಕ್ಕೆ ಲಕ್ಷ್ಯ ಸಾಕಷ್ಟು ಕೊಟ್ಟಹಾಗೆ ಕಾಣುವುದಿಲ್ಲ; ಅದನ್ನು ಕೊಡಬೇಕೆಂದು ಹೇಳುವ ವಿಷಯ ಮತ್ತು ಇನ್ನು ಕೆಲವು ಸಾಧಾರಣ ವಿಷಯಗಳನ್ನು ಕೂಡ ಹೇಳಲಾಗಿದೆ. ಇದಕ್ಕೆ ವಿವರವನ್ನು ಕೊಡುತ್ತಾ ನಾನು ಪ್ರಥಮವಾಗಿ ನಮ್ಮ ಸರ್ಕಾರದ ಅಧೀನದಲ್ಲಿರುವಂಥ ಕೆಲವೊಂದು ಉದ್ಯಮಗಳು ಹೇಗೆ ಕೆಲಸ ಮಾಡುತ್ತಾ ಇವೆ ಎಂಬುದರ ಮಟ್ಟಿಗೆ ಸೂಕ್ಷ್ಮ ವಿವರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಸರ್ಕಾರದ ಉದ್ಯಮಗಳಿಗಾಗಿ ನಾವು ಈ ಡಿಮ್ಯಾಂಡಿನಲ್ಲಿ ಏನು ಹಾಕಿದ್ದೇವೆ, ಅವಕ್ಕೆ ಬೇಕಾದಂಥ ಹಣದ ಆವಶ್ಯಕತೆ ಮತ್ತು ಅವುಗಳಿಂದ ನಿರೀಕ್ಷಿಸಿದಂಥ ಬಂದು ಆದಾಯ, ಕೇವಲ ಈ ವರ್ಷದ ಡಿಮಾಂಡನ್ನು ಲೆಕ್ಕ ಹಾಕಿ, ಲಾಭ ನಷ್ಟ ಹೇಳುವಂಥಾದ್ದನ್ನು ನನಗೆ ಒಪ್ಪಿಸಿದರೂ ಕೂಡ ಅದು ಸಾಧ್ಯವಿಲ್ಲ. ಆದ್ದರಿಂದ ಅದನ್ನು ಒಂದು ಆಧಾರವಾಗಿಟ್ಟುಕೊಂಡು ಸದಸ್ಯರು ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದರೆ ಅದು ಅಷ್ಟೊಂದು ಸರಿಹೋಗಲಿಕ್ಕಿಲ್ಲ. ಹೇಗೆಂದರೆ ಒಂದು ವರ್ಷದ ಕಾಲಾವಧಿಯಲ್ಲಾದ ಕಾರ್ಯಾಚರಣೆಯಿಂದ ಆದಾಯ ಮತ್ತು ನಷ್ಟ, ಖರ್ಚು ಮತ್ತು ಆದಾಯ ಇವುಗಳನ್ನು ಅಕೌಂಟೆಂಟ್ ಜನರಲ್‌ರವರು ಪರಿಶೀಲಿಸುತ್ತಾರೆ, ಅಕೌಂಟ್ ಆಗುತ್ತದೆ. ಆಡಿಟ್ ಅಂಡ್ ಅಪ್ರೋಪ್ರಿಯೇಷನ್ ರಿಪೋರ್ಟ್‌ನಲ್ಲಿ ವರ್ಷೇವರ್ಷೇ ಇವುಗಳ ಕಾರ್ಯಕಲಾಪಗಳ ಪರಿಪೂರ್ಣ ವಿವರ ಸಿಕ್ಕುತ್ತದೆ. ಅದರ ಆಧಾರದ ಮೇಲೆ ಮಾತನಾಡಿದರೆ ಈ ಸಂಸ್ಥೆಗಳು ಕೆಲಸ ಸರಿಯಾಗಿ ಮಾಡಿವೆಯೋ ಇಲ್ಲವೋ ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಕೇವಲ ಈ ಬಜೆಟ್ ಡಿಮ್ಯಾಂಡ್ ಮೇಲೆ ಹೇಳಿದರೆ ಅಷ್ಟು ಸೂಕ್ತವಾಗಲಿಕ್ಕಿಲ್ಲ. ಬಹುಶಃ ಅನೇಕ ಸದಸ್ಯರು ಈ ಆಧಾರದ ಮೇಲೆ ವಾದವನ್ನು ಹೂಡಿರುವುದರಿಂದ ಅದು ಅಷ್ಟೊಂದು ಸಮಂಜಸವಾದ ಕ್ರಮ ಆಗಲಿಕ್ಕಿಲ್ಲ ಎಂಬುದನ್ನು ಸಭೆಗೆ ತೋರಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಬಜೆಟ್‌ನಲ್ಲಿರುವುದರ ಮೇಲೆ ಮಾತನಾಡುವುದಕ್ಕಾಗುವುದಿಲ್ಲ. ಬೇರೆ ಅಂಕಿ ಅಂಶಗಳನ್ನು ನೋಡಿ ಹೇಳಬೇಕೆಂದು ಹೇಳಿದರು. ಹಾಗಾದರೆ ಬಜೆಟ್ ಫಿಗರ್ಸ್ ಏಕೆ ಕೊಟ್ಟಿದ್ದೀರಿ?

ಶ್ರೀ ಸಿ. ಎಂ. ಪೂಣಚ್ಚ.—ಲಾಭದಲ್ಲಿ ಕೆಲಸ ಮಾಡಿತೇ, ನಷ್ಟದಲ್ಲಿ ಕೆಲಸ ಮಾಡಿತೇ ಎನ್ನುವಂತಹ ಒಂದು ಕೊನೆಯ ಅಭಿಪ್ರಾಯಕ್ಕೆ ಬರಬೇಕಾದರೆ ಆಡಿಟೆಡ್ ಅಕೌಂಟ್ಸ್‌ನ ಒಂದು ಆಧಾರದ ಮೇಲೆ ಹೇಳಬೇಕೇ ವಿನಾ ಬಜೆಟ್‌ನ ಆಧಾರದ ಮೇಲೆ ಅಭಿಪ್ರಾಯ ಕೊಡುವಂಥಾದ್ದು ಅಷ್ಟೊಂದು ಸರಿಯಾಗಲಿಕ್ಕಿಲ್ಲ ಎಂದು ಹೇಳುತ್ತ ಇದ್ದೆ. ಬಜೆಟ್ ಫಿಗರ್ಸ್ ಏಕೆ ಕೊಟ್ಟಿರಿ ಎಂಬ ಪ್ರಶ್ನೆ ಬರುವುದಿಲ್ಲ. ಲಾಭ ಮತ್ತು ನಷ್ಟ ಎನ್ನುವುದು ಪ್ರತಿಯೊಂದು ಸಂಸ್ಥೆಯ ವಿಷಯದಲ್ಲೂ ಕೂಡ ಪರಿಶೀಲನೆಗೆ ಒಳಪಟ್ಟು ಪ್ರತಿಯೊಂದು ವಿಭಾಗದಲ್ಲೂ ನಡೆದ ಆಡಿಟ್ ಅಕೌಂಟನ್ನು ತಿಳಿಸುವ ಆಡಿಟ್ ರಿಪೋರ್ಟ್‌ನ್ನು ಅಕೌಂಟೆಂಟ್ ಜನರಲ್ ಅವರು ಕೊಡುತ್ತಾರೆ. ಅದರಲ್ಲಿ ಲಾಭ, ನಷ್ಟ ವ್ಯವಹಾರ ನೀತಿಯ ಕಾರ್ಯಕ್ರಮವನ್ನು ವಿವರವಾಗಿ ಕೊಟ್ಟಿರುವ ದಾಖಲೆ ಇರುತ್ತದೆ. ಆ ಪ್ರಕಾರ ಕೊಟ್ಟ ದಾಖಲೆಯಲ್ಲಿ ನಷ್ಟ ಕಂಡುಬಂದಿದ್ದರೆ ಈ ಸಭೆ ಅವನ್ನು ಗ್ರಹಿಸಿ, ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂಥಾದ್ದು ಸರಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆಡಿಟ್ ರಿಪೋರ್ಟ್‌ನಲ್ಲೂ ಕೂಡ ಡಿಪ್ರಿಸಿಯೇಷನ್ ಮತ್ತು ಸ್ಟಾಕ್ ವಿಷಯದಲ್ಲಿ remarks pass ಮಾಡಿರುವುದು ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸಭೆಯ ಗಮನಕ್ಕೆ ಬಂದಿದೆ, ಮಾನ್ಯ ಸದಸ್ಯರ ಗಮನಕ್ಕೂ ಬಂದಿದೆ ಮತ್ತು ಮಂತ್ರಿಗಳ ಗಮನಕ್ಕೂ ಬಂದಿದೆ.

ಶ್ರೀ ಯು. ಎಂ. ಮಾದಪ್ಪ.—1956ರ ಆಡಿಟ್ ರಿಪೋರ್ಟ್ ಇದೆ. ಎಷ್ಟು ಇಂಡಸ್ಟ್ರೀಸ್ ನಷ್ಟದಲ್ಲಿ ಕೆಲಸ ಮಾಡುತ್ತಿವೆ?

ಶ್ರೀ ಸಿ. ಎಂ. ಪೂಣಚ್ಚ.—ಆ ಆಧಾರವನ್ನೇ ಇಟ್ಟುಕೊಂಡು ಮಾನ್ಯ ಸದಸ್ಯರು ಎತ್ತಿದಂಥ ಕೆಲವು ವಾದಾಂಶಗಳ ವಿಷಯದಲ್ಲಿ ಉತ್ತರ ಕೊಡಲಿಕ್ಕೆ ನಾನು ಅಭಿಪ್ರಾಯಪಟ್ಟಿದ್ದೇನೆ. ಅಕೌಂಟೆಂಟ್ ಜನರಲ್ ಅವರಿಂದ ಬಂದಂಥ ಇಲ್ಲಿ 1954-55, 1955-56. ಮತ್ತು 1956-57ರ ಪ್ರೊವಿಜನಲ್ ಫಿಗರ್ಸ್ ಪ್ರಕಾರ ಹೇಳುವುದಾದರೆ, ನಮ್ಮ ಸರ್ಕಾರದ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ:—

1954-55 ರಲ್ಲಿ	3,24,316	ರೂಪಾಯಿ	ಲಾಭ
1955-56 ರಲ್ಲಿ	2,95,000	,,	,,
1956-57 ರಲ್ಲಿ	4,40,000	,,	,,

(ಪ್ರೊವಿಜನಲ್ ಫಿಗರ್ಸ್)

ಶ್ರೀ ಬಿ. ಕೆ. ಪುಟ್ಟರಾಮಯ್ಯ.—Actual stock ಅದರಲ್ಲಿ ಸೇರಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ನಷ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುವಂತಹ ವಿಷಯಕ್ಕೆ ಉತ್ತರ ಕೊಡುತ್ತಾ ಇದ್ದೇನೆ. ಮಾನ್ಯ ಸದಸ್ಯರು ಸ್ವಲ್ಪ ಸಾವಕಾಶವಾಗಿ ಕೇಳುವುದಾದರೆ ಅಕೌಂಟೆಂಟ್ ಜನರಲ್ ಅವರು ಅಪ್ರೋಪ್ರಿಯೇಷನ್ ಮತ್ತು ಆಡಿಟ್ ಅಕೌಂಟ್ಸ್ ಪಬ್ಲಿಷ್ ಮಾಡುವಂಥ ಸರ್ಕಾರಿ ದಾಖಲೆ

(ಶ್ರೀ ಸಿ. ಎಂ. ಪೂಣಚ್ಚ)

ಯಿಂದ ಅಂಕಿ ಅಂಶಗಳನ್ನು ಕೊಡುತ್ತಾ ಇದ್ದೇನೆ. ಸರ್ಕಾರದ ಪೋರ್ಸಿಲೇನ್ ಫ್ಯಾಕ್ಟರಿಯಲ್ಲಿ—

1954-55ರಲ್ಲಿ	77,400	ರೂಪಾಯಿ	ಲಾಭ
1955-56ರಲ್ಲಿ	43,720	,,	,,
1956-57ರಲ್ಲಿ	5,75,000	,,	,,

(ಪ್ರೊವಿಜನಲ್ ಫಿಗರ್ಸ್)

ಸೋಪ್ ಫ್ಯಾಕ್ಟರಿಯಲ್ಲಿ—

1954-55ರಲ್ಲಿ	7,89,008	ರೂಪಾಯಿ	ಲಾಭ
1955-56ರಲ್ಲಿ	9,99,000	,,	,,
1956-57ರಲ್ಲಿ	11,00,900	,,	,,

(ಪ್ರೊವಿಜನಲ್ ಫಿಗರ್ಸ್)

ಇಂಡಸ್ಟ್ರಿಯಲ್ ವರ್ಕ್ ಷಾಪ್‌ನಲ್ಲಿ—

1954-55ರಲ್ಲಿ	27,244	ರೂಪಾಯಿ	ಲಾಭ
1955-56ರಲ್ಲಿ	72,686	,,	,,
1956-57ರಲ್ಲಿ	83,000	,,	,,

(ಪ್ರೊವಿಜನಲ್ ಫಿಗರ್ಸ್)

ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ—

1954-55ರಲ್ಲಿ	37,299	ರೂಪಾಯಿ	ಲಾಭ
1955-56ರಲ್ಲಿ	50,892	,,	,,
1956-57ರಲ್ಲಿ	62,491	,,	,,

(ಪ್ರೊವಿಜನಲ್ ಫಿಗರ್ಸ್)

ಸಿಲ್ಕ್ ವೀವಿಂಗ್ ಫ್ಯಾಕ್ಟರಿಯಲ್ಲಿ—

1954-55ರಲ್ಲಿ	1,19,890	ರೂಪಾಯಿ	ಲಾಭ
1955-56ರಲ್ಲಿ	70,353	,,	,,
1956-57ರಲ್ಲಿ	59,690	,,	,,

(ಪ್ರೊವಿಜನಲ್ ಫಿಗರ್ಸ್)

ಗವರ್ನ್‌ಮೆಂಟ್ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿಯಲ್ಲಿ--

1954-55ರಲ್ಲಿ	5,01,520	ರೂಪಾಯಿ	ಲಾಭ
1955-56ರಲ್ಲಿ	6,55,573	,,	,,
1956-57ರಲ್ಲಿ	6,00,000	,,	,,

(ಪ್ರೊವಿಜನಲ್ ಫಿಗರ್ಸ್)

ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿ—

1954-55ರಲ್ಲಿ	52.68ಲಕ್ಷ	ರೂಪಾಯಿ	ಲಾಭ
1955-56ರಲ್ಲಿ	71.88	,,	,,
1956-57ರಲ್ಲಿ	63.63	,,	,,

(ಪ್ರೊವಿಜನಲ್ ಫಿಗರ್ಸ್)

ಗವರ್ನ್ಮೆಂಟ್ ಸಿಲ್ಕ್ ಫಿಲೇಚರ್ಸ್‌ನಲ್ಲಿ—

(ಈಚೆಗೆ ತೆಗೆದುಕೊಂಡಿದ್ದಾರೆ)

1955-1956ರಲ್ಲಿ	1.42ಲಕ್ಷ	ರೂಪಾಯಿ	ನಷ್ಟ
1956-57ರಲ್ಲಿ	1.08	,,	,,

(ಪ್ರೊವಿಜನಲ್ ಫಿಗರ್ಸ್)

ಇದು ನಮ್ಮ ಸರ್ಕಾರದ ಅಧೀನದಲ್ಲಿರುವಂಥ ಕಾರ್ಖಾನೆಗಳಿಂದಾದ ಲಾಭ-ನಷ್ಟಗಳ ಮೂರು ವರ್ಷಗಳ ವಿವರವಾದ ಪಟ್ಟಿ.

ಈ ದೃಷ್ಟಿಯಿಂದ ನೋಡುವುದಾದರೆ, ಈ ಕಾರ್ಖಾನೆಗಳು ಸಾಕಷ್ಟು ಯಶಸ್ವಿಯಾಗಿ ಕೆಲಸ ಮಾಡುತ್ತಿವೆ ಎಂದು ಹೇಳುವಂಥಾದ್ದಾಗಿದೆ. ನಾನು ಪ್ರತ್ಯೇಕವಾಗಿ ಎಲ್ಲವನ್ನೂ ತಿಳಿಸಬೇಕಾಗಿಲ್ಲ. ಮಧ್ಯೇ ಈ ಸಮಯದಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂಥ ಕೂಲಿಕಾರರಿಗೆ, ಕೆಲಸಗಾರರಿಗೆ ಎಷ್ಟೋ ರೀತಿ ಸಂಬಳದ ಬಡಾವಣೆಗಳನ್ನು ಮಾಡಲಾಯಿತು. ಅಲ್ಲದೆ ಇತರ ಎಷ್ಟೋ ಅನುಕೂಲಗಳನ್ನು ಕಲ್ಪಿಸುವಂಥ ಕೆಲಸಕಾರ್ಯಗಳನ್ನೂಕೂಡ ಮಾಡಿದ್ದಾಯಿತು. ಆದುದರಿಂದ ಖರ್ಚು ಮತ್ತೆ ಸ್ವಲ್ಪಮಟ್ಟಿಗೆ ಹೆಚ್ಚಿದೆ; ಮತ್ತು ಎರಡನೆಯದಾಗಿ, ಮಾನ್ಯ ಸದಸ್ಯರಾದ ಶ್ರೀ ರಾಜಯ್ಯ ಶೆಟ್ಟರು ಹೇಳಿದರು; ಹಿಂದೆ ನಮ್ಮಲ್ಲಿ ಉಕ್ಕಿನ ಬೆಲೆ 120 ರೂಪಾಯಿ ಇದ್ದದ್ದು ಇವೊತ್ತು 700–800 ರೂಪಾಯಿ ಮಾಡಿದ್ದೀರಿ, ಈ ಪ್ರಕಾರ ಯುದ್ಧದ ದೆಸೆಯಿಂದಲೋ ಅಥವಾ ಹಣದ ಉಬ್ಬರದ ದೆಸೆಯಿಂದಲೋ ಬೆಲೆ ಏರಿದ್ದರಿಂದ ಈ ಉದ್ಯಮದಲ್ಲಿ ಲಾಭ ಬರುತ್ತಿದೆ. ಇಲ್ಲದೆ ಇದ್ದರೆ ಹೀಗಿರುತ್ತಿರಲಿಲ್ಲವೆಂದು. ಆದರೆ ಅದು ಸಮಂಜಸವಾದ ವಾದವಲ್ಲ. ಏಕೆಂದರೆ ಉಕ್ಕಿನ ಬೆಲೆ ಮತ್ತು ಇತರ ಕೆಲವು ಸಾಮಾನುಗಳನ್ನು ಮತ್ತು ಮುಖ್ಯವಸ್ತುಗಳ ಬೆಲೆಗಳನ್ನು ಟ್ಯಾರಿಫ್ ಕಮಿಷನ್ನಿನವರು ತಮ್ಮ ಪರಿಶೀಲನೆಗೆ ಆಗಿಂದಾಗ್ಗೆ ಒಳಪಡಿಸಿಕೊಂಡು ಯಾವೊಂದು ನಿರ್ದಿಷ್ಟವಾದ ಬೆಲೆಗೆ ಮಾರಬೇಕೆಂದು ಹೇಳುವಂಥಾದ್ದನ್ನು ಪರಿಶೀಲನೆಮಾಡಿ, ಇಂಡಿಯಾ ಸರ್ಕಾರದವರು ಅದನ್ನು ಅನುಸರಣೆ ಮಾಡುತ್ತಾರೆ. Steel Purchase, ಅದು ಇಂಡಿಯಾ ಸರ್ಕಾರದಿಂದ ನಿಯಮಿತವಾದ ಬೆಲೆ. ಆದುದರಿಂದ, ಹಣದ ಉಬ್ಬರದಿಂದ ನಾವೇ ಮ್ಯಾನೇಜ್‌ಮೆಂಟಿನವರು, ನಮಗೆ ಬೇಕಾದ ಹಾಗೆ ಮಾರುವ ವಿಷಯವಲ್ಲವೆನ್ನುವುದನ್ನು ನಾನು ಈ ಸಭೆಗೆ ತಿಳಿಸುತ್ತಿದ್ದೇನೆ.

Sri C. K. RAJAIAH SETTY.—Is it a fact that our steel rate is fixed at Rs. 50 more than other Companies' steel rates ?

Sri C. M. POONACHA.—That should have been the point which the Hon'ble Member should have asked. On the contrary he caught a wrong premise to argue. The point is that the Bhadravati Iron Works being one of the smallest Iron and Steel Works is really a high cost unit in India. There is no doubt about that. This is an accepted fact. It is not merely to earn profit that Rs. 50 is added to the cost, that is done because it is really a high cost unit as its production is very very low as compared to the production at the Tata Iron and Steel Works or the Indian Iron Works. Naturally, an extra to meet the high cost is added to the price as determined by the Government of India from time to time.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರಾಯಲ್ಟಿ ಕೊಡುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಕಾನೂನು ಪ್ರಕಾರ ಕೊಡುವಷ್ಟು ಕೊಡುತ್ತೇವೆ. ಸರ್ಕಾರಕ್ಕಾಗಿ ರಿಸರ್ವ್ ಆದ ಪ್ರದೇಶವಲ್ಲ.

ಎರಡನೆಯದು ನಮ್ಮ ಮಾನ್ಯ ಮಿತ್ರರಾದ ಶ್ರೀ ರೇವಣ್ಣಸಿದ್ದಪ್ಪನವರು, "ಹಿಂದಿನ ಕಾಲದಲ್ಲಿ

ನಮ್ಮ ಹಿರಿಯ ಆಡಳಿತಗಾರರೂ ಮತ್ತು ನಮ್ಮ ವಯೋವೃದ್ಧರೂ ಆದ ಕೀರ್ತಿ ಪಡೆದಂಥ ಸರ್ ಎಂ. ವಿಶ್ವೇಶ್ವರಯ್ಯನವರೂ ಇಂಥವರು ಬಹಳ ಪರಿಶ್ರಮದಿಂದ ಬೆಳೆಸಿದಂಥ ಕಾರ್ಖಾನೆಗಳು ಇವು'' ಎಂದು ಹೇಳಿದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವೊತ್ತು, ಮೈಸೂರಿನಲ್ಲಿ ಕಬ್ಬಿಣದ ಕಾರ್ಖಾನೆಯಿದ್ದರೂ, ಗುಳ, ಗುದ್ದಲಿ ಮೊದಲಾದುವು ಜನರಿಗೆ ಸಿಕ್ಕದಂಥ ಪರಿಸ್ಥಿತಿ ಬಂದೊದಗಿತಲ್ಲ ಎಂದೂ ಹೇಳಿದರು. ಅದೂ ಕೂಡ ಅಷ್ಟೊಂದು ಸಮಂಜಸವಾದ ವಾದವಲ್ಲ. ಏಕೆಂದರೆ Iron and Steel ಎಲ್ಲಿ ಇವೊತ್ತು ಉತ್ಪನ್ನವಾದರೂ ಕೂಡ ಅದು ಇಂಡಿಯಾ ಸರ್ಕಾರದ ಹತೋಟಿಗೊಳಪಟ್ಟಿದ್ದು. ನಾವು ಇವೊತ್ತು ಎಷ್ಟು ಉತ್ಪಾದನೆ ಮಾಡಿದರೂ ಕೂಡ ಅಲ್ಲಿಂದ ಒಂದು ಹಂಡ್ರೆಡ್‌ವೇಟ್ ಸಹ ತೆಗೆದುಕೊಳ್ಳುವುದಕ್ಕೆ ಮತ್ತು ಅದನ್ನು allocate ಮಾಡುವುದಕ್ಕೆ ಹಕ್ಕಿಲ್ಲ. Agricultural purposes, industrial purposes, small scale industries ಎಂದು ಅವರು allocate ಮಾಡಿದ ಮೇಲೆ ಅದರ ಪ್ರಕಾರ ನಾವು ಭದ್ರಾವತಿಯಿಂದ ಉಕ್ಕು ಮತ್ತು ಕಬ್ಬಿಣವನ್ನು ತೆಗೆದುಕೊಳ್ಳಬಹುದೇ ವಿನಾ ನಾವೇ ತೆಗೆದುಕೊಂಡು ಗುಳ, ಗುದ್ದಲಿ ಮಾಡೋಣವೆಂದು ಹೇಳುವ ಹಾಗಿಲ್ಲ. ಆದುದರಿಂದ ಇಂಡಿಯಾ ಸರಕಾರದವರು quota allocate ಮಾಡಿದರೆ ಆಗುತ್ತದೆಯೇ ವಿನಾ ನಮ್ಮಿಷ್ಟಕ್ಕೆ ನಾವೇ ತೆಗೆದುಕೊಳ್ಳುವ ಹಾಗಿಲ್ಲವೆಂದು ಈ ಸಭೆಯಲ್ಲಿ ತಿಳಿಸುತ್ತಿದ್ದೇನೆ.

ಈ ಕಾರ್ಖಾನೆಗಳನ್ನು ನಾವು ಎಷ್ಟು ಅಭಿವೃದ್ಧಿ ಮಾಡಿದೆವು, ಯಾವ ರೀತಿಯಲ್ಲಿ ಅವುಗಳ ಬೆಳವಣಿಗೆಯಾಯಿತು ಎಂದು ಸೂಕ್ಷ್ಮದಲ್ಲಿ ಹೇಳುವಂಥಾದ್ದಿದೆ. ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಇರುವಂಥ ಕಾರ್ಖಾನೆಗಳನ್ನೆಲ್ಲ ಬಹುಮಟ್ಟಿಗೆ ನಾವು ಅಭಿವೃದ್ಧಿ ಮಾರ್ಗದಲ್ಲಿ ಮುಂದೆ ಒಯ್ಯಬೇಕಾಗಿದೆ. ಅದರ ಪ್ರಕಾರ ಕ್ರಮ ಜರುಗಿಸುತ್ತಿದ್ದೇವೆ. ನಮ್ಮ ಸಿಮೆಂಟ್ ಫ್ಯಾಕ್ಟರಿ ಇದೆ. ಅದರಲ್ಲಿ 60ಟನ್ ಸಿಮೆಂಟ್ ಉತ್ಪನ್ನವಾಗುತ್ತಿತ್ತು. ಅದರಲ್ಲಿ 260ಟನ್ ಸಿಮೆಂಟ್ ಉತ್ಪನ್ನವಾಗುವಷ್ಟು ಮಟ್ಟಿಗೆ exapansion programme ಕೈಗೊಂಡು, ಅದನ್ನು ಪೂರ್ತಿಮಾಡಿ, ಆ ಮೊತ್ತದಲ್ಲಿ ಆ ಕಾರ್ಖಾನೆಯ ಉತ್ಪನ್ನವನ್ನೂ ಮಾಡುತ್ತಿದ್ದೇವೆ. ಅದೇ ಪ್ರಕಾರ ಎರಡು electric big iron furnaces ಕೂಡ ನಮ್ಮ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಹಾಕಿ 25 ಸಾವಿರ ಟನ್ ಉತ್ಪನ್ನವಾಗುತ್ತಿದ್ದುದು ಈಗ ಹೆಚ್ಚು ಕಡಮೆ ಒಂದು ಲಕ್ಷ ಟನ್ ಮೇಲೆ ಉತ್ಪನ್ನವಾಗುತ್ತಿದೆ.

Sri C. K. RAJAIAH SETTY.—Is it a fact that one of the two electric fitted furnaces was lying idle for two years for want of raw materials ?

Sri C. M. POONACHA.—I require notice regarding this particular query. If the Hon'ble Member wants some information, I am prepared to furnish it, but I may tell him that we have stepped up our production from 25,000 tons to 1 lakh tons.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ Acetic Acid plant ಹೊಂದಿಸಿ Acetic Acid ತಯಾರುಮಾಡುತ್ತಿದ್ದೇವೆ. Ferro-silicon 1,500 ಟನ್ ಉತ್ಪನ್ನವಾಗುತ್ತಿದ್ದುದು ಇವೊತ್ತು ಮೂರರಷ್ಟು ಹೆಚ್ಚಿ 4,500 ಟನ್ ಫೆರೊ ಸಿಲಿಕಾನ್ ಉತ್ಪನ್ನ ಮಾಡುತ್ತಿದ್ದೇವೆ. ಮತ್ತೆ ಫೆರೊ ಮ್ಯಾಂಗನೀಸ್ ಸಹ ಉತ್ಪನ್ನ ಮಾಡುತ್ತಿದ್ದೇವೆ. ಹೈಟೆನ್‌ಷನ್ ಇನ್‌ಸುಲೇಟರ್ ವಿಷಯದಲ್ಲಿ ಮಾನ್ಯ ಸದಸ್ಯರೊಬ್ಬರು ಹೇಳಿದರು. ಬಿಳಿ ಜೇಡಿಮಣ್ಣು, chinaclay ನಮ್ಮಲ್ಲೇ ಸಿಕ್ಕುವಾಗ ball clay ಏತಕ್ಕೆ ಜರ್ಮನಿನಿಂದ ತಂದು ಕೆಲಸ ಮಾಡುತ್ತಿದ್ದೀರಿ ಎಂದು ನ್ಯಾಯವಾಗಿ ಹೈಟೆನ್‌ಷನ್ ಇನ್‌ಸುಲೇಟರ್ ತಯಾರುಮಾಡುವಂಥ ಕಾಲಕ್ಕೆ ಸ್ವಲ್ಪ ಅಂಶ ಅದರಲ್ಲಿ ಉತ್ತಮವಾದ ball clay ಸೇರಿಸದೆ ಹೋದರೆ, ನ್ಯಾಯವಾದ technical precision ಬರುವುದಿಲ್ಲವೆಂದು ಇರುವುದರಿಂದ ತತ್ಕಾಲಕ್ಕೆ ಈ ball clay ಎನ್ನುವುದನ್ನು ಅನಿವಾರ್ಯವಾಗಿ ಸ್ವಲ್ಪ ಅಂಶವನ್ನು ಆಮದುಮಾಡಲೇ ಬೇಕಾಗುತ್ತದೆ. ಈ ball clay ಆಮದುಮಾಡಿದ್ದೂ ಆಗಿ ಹೈಟೆನ್‌ಷನ್ ಇನ್‌ಸುಲೇಟರುಗಳ ಪ್ರೊಡಕ್ಷನ್ ಅನ್ನುವಂಥಾದ್ದನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಬೇಕಾದಷ್ಟು ಆರ್ಡರುಗಳು ಬಂದಿವೆ. ಈಗಾಗಲೇ ದೊಡ್ಡ ದೊಡ್ಡ ಆರ್ಡರುಗಳನ್ನು ಸ್ವೀಕಾರಮಾಡಿ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಕಾರ್ಖಾನೆಯ ಕೆಲಸವನ್ನು ಪ್ರಾರಂಭಮಾಡಿದೆ. ಆ ಪ್ರಕಾರ ಬರುವಾಗ ಸೋಪ್ ಫ್ಯಾಕ್ಟರಿಯಲ್ಲಿ ಈವರೆಗೂ ವರ್ಷಕ್ಕೆ 600 ಟನ್ ವರೆಗೆ ಉತ್ಪನ್ನವಾಗುತ್ತಿತ್ತು. ಅದನ್ನೂ ಹೆಚ್ಚಿಸಿ 1,500 ಟನ್ ಉತ್ಪನ್ನಮಾಡಬೇಕೆಂಬ ಉದ್ದೇಶದಿಂದ ಫ್ಯಾಕ್ಟರಿಯನ್ನು ಬಡಾವಣೆಮಾಡಿ, ಹೊಸ ಕಟ್ಟಡದಲ್ಲಿ ಕಾರ್ಖಾನೆ ಈಗಾಗಲೇ ಸ್ಥಾಪಿತವಾಗಿ ಅಲ್ಲಿ ಕೆಲಸ ಪ್ರಾರಂಭವಾಗಿ ತಿಂಗಳೊಂದಕ್ಕೆ 100 ಟನ್ ಉತ್ಪನ್ನವಾಗುವಂತೆ ಈಗಾಗಲೇ ಮಾಡಿದ್ದಾರೆ. ಅದೇ ಪ್ರಕಾರವಾಗಿ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಮಾಡುತ್ತಿದ್ದುದು 30 ಸಾವಿರ K.V.A. ವರೆಗೆ ಮಾತ್ರ. ಇವೊತ್ತು ಒಂದು ಲಕ್ಷದ ಸಮೀಪಕ್ಕೆ ಮುಟ್ಟಿದ್ದೇವೆ. We have reached that target. ಇನ್ನುಮುಂದೆ ಅದಕ್ಕೆ A.E.G. ಕಂಪೆನಿಯೊಡನೆ ಸಹಕರಿಸಿ ಅವರ ಉತ್ತಮವಾದ ಮತ್ತು ಮಾಪರ್ಾಟಿನ ನಮೂನೆ ಟ್ರಾನ್ಸ್‌ಫಾರ್ಮರ್‌ಗಳನ್ನು ಮಾಡುವುದಕ್ಕೆ ನಮಗೂ ಅವರಿಗೂ ಮಾತುಕತೆಗಳು ನಡೆಯುತ್ತಿವೆ. ಬಹು ಶೀಘ್ರದಲ್ಲಿಯೇ ಅದೂಕೂಡ ಕಾರ್ಯಗತವಾಗಬಹುದು ಎಂದು ನಾನು ನಂಬಿದ್ದೇನೆ. ಅದೂ ಅಲ್ಲದೆ ಪ್ಲಾಸ್ಟಿಕ್ ಇನ್‌ಸುಲೇಟೆಡ್ ವೈರ್ ಮಾಡುವಂಥಾದ್ದರಲ್ಲಿ ಕೂಡ ಎರಡು ಲಕ್ಷಗಜ ತಯಾರು ಆಗುತ್ತಿದ್ದುದು ಈಗ 16 ಲಕ್ಷ ಗಜ Plastic wiring ನಮ್ಮ REMCOನಲ್ಲಿ ಆಗುತ್ತಿದೆ. ಇವುಗಳೆಲ್ಲವೂ ಕೂಡ ನಮ್ಮ ಸರ್ಕಾರದ ಆಶ್ರಯದಲ್ಲಿ, ಸರ್ಕಾರದ ಹೆಚ್ಚಿನ ಜವಾಬ್ದಾರಿಯಿಂದ ಕೂಡಿರುವಂಥ ಈ ಕಾರ್ಖಾನೆಗಳಲ್ಲಿ ಮಾಡಿರುವಂಥ ಕೆಲವೊಂದು ಅಭಿವೃದ್ಧಿ ವಿಷಯಗಳು. ಅದೂ ಅಲ್ಲದೆ ಉಕ್ಕಿನ ಕಾರ್ಖಾನೆಯನ್ನು ಇನ್ನೂ ಕೂಡ ಬಡಾವಣೆ ಮಾಡಿ ಫೆರೊ ಸಿಲಿಕಾನ್ ಹೆಚ್ಚಿಸಲಿಕ್ಕೆ ಸ್ಪನ್ ಪೈಪ್ ಪ್ಲಾಂಟ್ ಹೆಚ್ಚಿಸಲಿಕ್ಕೆ ಮತ್ತು ಸಿಂಟ್ರಿಕ್ ಪ್ಲಾಂಟ್ ಹಾಕುವುದಕ್ಕೆ, ಇವೆಲ್ಲಕ್ಕೂ ಕೂಡ ಕಾರ್ಯಕ್ರಮ ಕೈಗೊಂಡು ಶೀಘ್ರದಲ್ಲಿಯೇ ನೆರವೇರುವಂಥ ಕೆಲಸಗಳನ್ನು ಸರ್ಕಾರ ಮಾಡುವುದಾಗಿದೆ. ಇವು ಈಗ ಉದ್ದೇಶಿಸಿರುವ ಕೆಲವೊಂದು ವಿವರಗಳ ಪಟ್ಟಿ. ಈ ರೀತಿಯಾಗಿ ಅಭಿವೃದ್ಧಿ ಕೆಲಸವು ಸಾಕಷ್ಟು ನಡೆಯುತ್ತಾ ಇದೆ. ಇಲ್ಲಿಯವರೆಗೆ ಹೆಚ್ಚು ಉತ್ಪತ್ತಿಯಾಗತಕ್ಕ ಕೆಲಸ ನಡೆಯದೆ ಕಾರ್ಖಾನೆಯ ಅಭಿವೃದ್ಧಿ

(SRI C. M. POONACHA)

ಕೆಲಸ ಮಾಡಲಾಗಿದೆ. ಪೋರ್ಸ್‌ಲೈನ್ ಫ್ಯಾಕ್ಟರಿಯು ನ್ಯಾಯವಾಗಿ ಉತ್ಪನ್ನ ಹೆಚ್ಚುವ ಸ್ಥಿತಿಗೆ ಇನ್ನೂ ಬಂದು ತಲುಪಿಲ್ಲ. ಇಲ್ಲಿಯವರೆಗೆ ಕಾರ್ಖಾನೆಗೆ ಖರ್ಚು ಮಾಡಲಾಗಿದೆ. ಉತ್ಪತ್ತಿಯಾಗುವ ಹಾಗೆ ಅಷ್ಟು ಕೆಲಸ ನಡೆದಿಲ್ಲ.

Sri M. C. NARASIMHAN.—Was not the Porcelain Factory scheduled to produce about 2,500 high tension cables even this year, Sir?

Sri C. M. POONACHA.—That is a fact.

Sri M. C. NARASIMHAN.—So far as bakelite is concerned, is it not a fact that it was hoped that clay from Bihar and from certain parts of South India could be utilised? Was this tested, Sir?

Sri C. M. POONACHA.—It is true, Sir, that it was programmed that the Porcelain Factory should go into full production by the end of 1956. ಆದರೆ ಕೆಲವೊಂದು ತೊಂದರೆಗಳ ಮೂಲಕ ಕೆಲಸವಾಗಲಿಲ್ಲ. ಮೊದಲನೆಯ ತೊಂದರೆ ಅಂದರೆ ಕಟ್ಟಡ. ಕಟ್ಟಡವನ್ನು ಪೂರ್ತಿಯಾಗಿ ಮಾಡುವುದಕ್ಕೆ ಸಾವಕಾಶವಾಯಿತು. ಉಕ್ಕಿನ ಸಾಮಾನುಗಳು, ಕಟ್ಟಡಕ್ಕೆ ಬೇಕಾಗುವ ಸಾಮಗ್ರಿಗಳು ದೊರೆತು ಕಟ್ಟಡದ ಕೆಲಸ ಪೂರ್ತಿ ಯಾಗುವುದಕ್ಕೆ ಕಾಲವಿಳಂಬವಾಯಿತು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಮುಖ್ಯವಾಗಿ ಕಾರ್ಖಾನೆಗೆ ಬೇಕಾ ಗಿರತಕ್ಕಂಥ ಕೆಲವೊಂದು ಸಾಮಾನುಗಳನ್ನು ವಿದೇಶ ದಿಂದ ತರಿಸುವುದಕ್ಕೆ import licence ದೊರಕಿಸಲು ಕಷ್ಟವಾಯಿತು.

Sri M. RAJASEKHARA MURTHY.—As regards the Porcelain Factory, I find that it had made profits except for the years 1947-48 and 1948-49. It has not worked at a loss as mentioned by the Minister. In 1950-51 it made a profit of 9·2 per cent, in 1951-52, 10·5 per cent, in 1952-53, 2·5 per cent, in 1953-54, 7·5 per cent. But in the year 1948-49 it worked at a loss, *i.e.*, 5·8 per cent and in 1947-48 the loss was ·004 per cent. Again in the year 1946-47 it made a profit of 7·1 per cent.

Sri C. M. POONACHA.—My Hon'ble friend is perfectly right. When I read out the statement, I indicated that it had made some profits during the previous years but during 1956-57 we incurred a loss because of the expansion programmes which resulted in production more or less remaining at a standstill. Import licence ದೊರೆತು ಕೆಲವೊಂದು ಯಂತ್ರಸಾಮಗ್ರಿಗಳನ್ನು ತರಿಸಿಕೊಳ್ಳು ವುದಕ್ಕೆ ಸಾವಕಾಶವಾಯಿತು. ಇತ್ತೀಚೆಗೆ ಎಲ್ಲ ಸಾಮಗ್ರಿಗಳು ಸಾಕಷ್ಟು ಇರುವುದರಿಂದ ಇನ್ನು ಮುಂದೆ ನಾವು ನಿರೀಕ್ಷಿಸಿದ ಕಾರ್ಯಕ್ರಮದಂತೆ ಮುಂದುವರಿದು ಉತ್ಪನ್ನ ಖಂಡಿತವಾಗಿ ಬರುತ್ತದೆ ಎಂಬುದರಲ್ಲಿ ಪರಿಪೂರ್ಣ ಭರವಸೆ ನಮಗೆ ಇದೆ.

ಇನ್ನು ಸೆರಿಕಲ್ಚರ್ ವಿಷಯವಾಗಿ ಎರಡು ಮಾತು ಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಯು ಬಹಳ ಮುಖ್ಯವಾದ ಕೈಗಾರಿಕೆ ಯಾಗಿದೆ. ಮಾನ್ಯ ಮಿತ್ರರಾದ ಶ್ರೀ ರಾಜಶೇಖರ ಮೂರ್ತಿಯವರು ಹೇಳಿದ ಹಾಗೆ ಇಡಿಯ ಹಿಂದೂ ಸ್ಥಾನದಲ್ಲಿ ಶೇಕಡ 85ರಷ್ಟು ಕಚ್ಚಾ ರೇಷ್ಮೆಯು ನಮ್ಮ ಮೈಸೂರು ಸಂಸ್ಥಾನದಲ್ಲಿ ಉತ್ಪಾದನೆಯಾಗು ತ್ತದೆ. ಹೆಚ್ಚು ಕಡಮೆ ಮೂರು ಲಕ್ಷ ಜನರು ಈ ರೇಷ್ಮೆ ಕೈಗಾರಿಕೆಯ ಮೇಲೆ ತಮ್ಮ ಜೀವನವನ್ನು ನಡೆಸುವವರಾಗಿದ್ದಾರೆ. ರೇಷ್ಮೆ ಕೈಗಾರಿಕೆಯು ಗೃಹ ಕೈಗಾರಿಕೆಗೆ ಸಂಬಂಧಪಟ್ಟದ್ದು ಆಗಿದೆ. ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಸರ ಕಾರವು ಬಹಳ ಮುತುವರ್ಜಿಯಿಂದ ಕೆಲಸಮಾಡು ತ್ತಿದೆ. ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಸಾಕಷ್ಟು ಹಣ ಸಹಾಯವನ್ನು ಪಡೆದು ಸೌಲಭ್ಯಗಳನ್ನು ಪರಿ ಪೂರ್ಣವಾಗಿ ಒದಗಿಸುವುದಕ್ಕೆ ಸಾವಕಾಶವಾಯಿತು ಎಂಬುದನ್ನು ಒಪ್ಪುತ್ತೇನೆ. ಕಟ್ಟಡವನ್ನು ಪೂರೈಸು ವುದಕ್ಕೂ ಸಾವಕಾಶವಾಯಿತು. ಚೆನ್ನಪಟ್ಟಣದ ರಿಸರ್ಚ್ ಸೆಂಟರ್ ಕಟ್ಟಡವನ್ನು ಕಾರ್ಯಕ್ರಮ ಇಟ್ಟುಕೊಂಡಂತೆ ನಿರ್ವಹಿಸಲು ಆಗದೇ ಇದ್ದ ಮೂಲಕ ಸಾಕಷ್ಟು ಸಾವಕಾಶವಾಯಿತು. ಈ ಸೆರಿಕಲ್ಚರಲ್ ವಿಷಯದಲ್ಲಿ P.W.D. ಡಿವಿಜನ್‌ನಿಂದ ತೆಗೆದು ಒಬ್ಬ ಪ್ರತ್ಯೇಕ ಅಧಿಕಾರಿಯ ವಶದಲ್ಲಿ ಇಟ್ಟಿರುವುದರಿಂದ ಇಂಡಸ್ಟ್ರಿಯಲ್ ಡಿವಿಜನ್ನಿನ ಕೆಲಸ, ವರ್ಕ್ಸ್ ಡಿವಿಜನ್ನಿನ ಕೆಲಸ ಇನ್ನು ತೀವ್ರವಾಗಿ ನಡೆಯುತ್ತದೆ ಎಂದು ನನಗೆ ಭರವಸೆ ಇದೆ. ಈಗ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಬಾವಿಗಳನ್ನು ತೋಡಿಸುವುದಕ್ಕೆ ಹೊಸ ಬೇಸಿನ್ ಮಾಡು ವುದಕ್ಕೆ, ಡೊಮೆಸ್ಟಿಕ್ ಬೇಸಿನ್ ವಿಷಯದಲ್ಲೂ ಕೂಡ ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಪಡೆಯತಕ್ಕಂಥ ಹಣವನ್ನು ಯೋಗ್ಯ ರೀತಿಯಿಂದ ಖರ್ಚು ಮಾಡತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ರೇಷ್ಮೆ ಮಾರಾಟದ ವಿಷಯದಲ್ಲಿ ಕಚ್ಚಾ ರೇಷ್ಮೆಯ ಮಾರಾಟದ ವಿಷಯದಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೆ ೦ಡಿದ್ದೇವೆ. ಮಾನ್ಯ ಮಿತ್ರರು ಹೇಳಿದ ಹಾಗೆ ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಹಣದ ಸಹಾಯವನ್ನು ಪಡೆದುಕೊಂಡು ಒಂದು ಪ್ರತ್ಯೇಕ ಕೋ-ಆಪರೇಟಿವ್ ಸೊಸೈಟಿ ಕೂಡ ಸ್ಥಾಪನೆ ಮಾಡಿ ಅವರಿಗೆ ಹತ್ತು ಲಕ್ಷ ರೂಪಾಯಿಗಳನ್ನು working capital ಆಗಿ ಕೊಡುವ ಏರ್ಪಾಡು ಮಾಡುತ್ತಿದ್ದೇವೆ.

Sri U. M. MADAPPA.—Is it not a fact that a loan of 10 lakhs of rupees has already been given to the Society? In that case why not Government take 50 per cent of the shares and thus acquire a voice in the management and also have a legal hold over the society?

Sri C. M. POONACHA.—That could be considered. At present the board is fully constituted as a co-operative board under the Co-operative Societies Act and we have put in our nominated Chairman. The present Secretary to the Central Silk Board is the nominated Chairman and we have a board of directors nominated by the Government

at the moment. We are making a good start and it is expected that the society will function effectively and successfully and after judging the progress achieved by the society, such necessary action as indicated by the Hon'ble Member will be considered.

ಶ್ರೀ ಜಿ. ವೆಂಕಟೇಗೌಡ.—ಈ ಸೊಸೈಟಿಯ ಷೇರುಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯಾಪಾರಸ್ಥರಿಗೆ ಅವಕಾಶ ಇದೆ ಏನು ?

ಶ್ರೀ ಸಿ. ಎಂ. ಪೂಣಚ್ಚ.—ಇದ್ದೇ ಇದೆ. ರೈತರಿಗೂ ಸಹ ಸಾಕಷ್ಟು ಅವಕಾಶ ಇದೆ. ಷೇರ್ ಬಂಡವಾಳ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri U. M. MADAPPA.—Not to the sericulturists but to the rearers and to the traders. But the opportunity is denied to the sericulturists.

Sri C. M. POONACHA.—I will have that examined.

Sri M. RAJASEKHARA MURTHI.—Since the Silk Board is granted money on the surety of the State Government, the State Government should have a voice to nominate their own Members on the Board.

Sri U. M. MADAPPA.—Government have no hold to take part in the management and to ensure that the members behave properly.

Sri C. M. POONACHA.—I did not like to say before the House that we want to exercise greater control over this. Actually, we will get the required control over the functioning of the society and in view of the fact that 10 lakhs of rupees have been advanced on the guarantee of this Government—as loan, of course—Government has the authority to exercise such minimum control as is necessary. This is a matter of detail, but let us get into the root of it. The crux of the matter is that the raw silk trade will hereafter be undertaken by this Society and then there will be a sort of assurance and a guarantee to the silk rearer. We are going to offer a regulated market, a fair price and see that the rearer's interest is safeguarded at the market level, *i.e.*, at the selling level. ಮೈಸೂರು ದೇಶದಲ್ಲಿ ಕಾಯರ್ ಇಂಡಸ್ಟ್ರೀಸನ್ನು ರೂರಲ್ ಇಂಡಸ್ಟ್ರೀಸ್‌ಗಳಲ್ಲಿ ಸೇರಿಸಿ ಡೆವಲಪ್ ಮಾಡಬೇಕೆಂಬುದಾಗಿ ಕೆಲವರ ಅಭಿಪ್ರಾಯವಾಗಿದೆ. ಹಾಗೆಯೇ ಇನ್ನೂ ಅನೇಕ ಇಂಡಸ್ಟ್ರೀಸ್ ಇವೆ. ಸಿಲ್ಕ್ ವಿಷಯದಲ್ಲಿ ಏನು ಹೇಳುತ್ತೇವೆಂದರೆ, ಅದನ್ನು ನ್ಯಾಯವಾದಂಥ ಅಭಿಪ್ರಾಯದ ಮೇಲೆ ಮುಂದುವರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಆ ವಿಷಯದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಬರುವ ಸರ್ವ ಹಣವನ್ನೂ ಈ ಕೈಗಾರಿಕೆಯ ಅಭಿವೃದ್ಧಿಗೆ ಬೇಕಾಗುವ ಎಲ್ಲ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಹೇಳುತ್ತಿದ್ದೇನೆ. ಇನ್ನೂ ಕೆಲವು ವಿಷಯಗಳನ್ನು ಮಾನ್ಯ ಮಿತ್ರರನೇಕರು ಸೂಚಿಸಿದ್ದಾರೆ. ಶ್ರೀ ಮುಕ್ಕಣ್ಣಪ್ಪನವರು ನಾವು ಸ್ಕ್ರ್ಯಾಪ್ ಐರನ್ ತೆಗೆದುಕೊಳ್ಳುವ ಕಾಲದಲ್ಲಿ ಶೇಕಡ ಎಂಟರಷ್ಟು ನಷ್ಟವಾಗುತ್ತಿದೆ, ಷಾರ್ಟೇಜ್ ಆಗುತ್ತಿದೆ ಎಂದು ಹೇಳಿದರು. ಅವರು ಎಲ್ಲಿಂದ ಆ ಮಾಹಿತಿಯನ್ನು ಸಂಗ್ರಹಿಸಿದರೋ ನನಗೆ ತಿಳಿಯುವುದಿಲ್ಲ. ಏಕೆಂದರೆ ಈಗ ಅವರು ಹೇಳಿದ ಅನಂತರ ಕೆಲವು ರಿಪೋರ್ಟ್‌ಗಳನ್ನು ನಾನು ಪರಿಶೀಲನೆ ಮಾಡಿದೆ. ಈಗ 1954-55ನೆಯ ಇಸವಿಗೆ ಸಂಬಂಧಪಟ್ಟ ರಿಪೋರ್ಟ್ ಪರಿಪೂರ್ಣವಾಗಿ ಆಡಿಟರ್ ಜನರಲ್‌ರವರಿಂದ ಪರಿಶೀಲಿಸಿ ಬಂದಂಥ ಸ್ಟೇಟ್‌ಮೆಂಟ್ ಆಗಿದೆ. ಅದರ ಪ್ರಕಾರ ಈ ವರ್ಷ ನಮ್ಮ ಭದ್ರಾವತಿ ಉಕ್ಕಿನ ಕಾರ್ಖಾನೆಗೆ 20,800 ಟನ್ನುಗಳಷ್ಟು ಸ್ಕ್ರ್ಯಾಪ್ ಐರನ್ನನ್ನು ನಾವು ತೆಗೆದುಕೊಂಡಿದ್ದೇವೆ. ಅದರಲ್ಲಿ 159 ಟನ್ 8 ಹಂ. ಅಂದರೆ ಸುಮಾರು 160 ಟನ್ನುಗಳಷ್ಟು ಷಾರ್ಟೇಜು ಬಂತು. ಆ ಷಾರ್ಟೇಜನ್ನು ಲೆಕ್ಕ ಹಾಕಿದರೆ ಶೇಕಡ ಒಂದು ಭಾಗ ಆಗುತ್ತದೆ. ಸರ್ವ ಪ್ರಜೆಗಳು ಮಾನ್ಯ ಸದಸ್ಯರ ಹೇಳಿಕೆಯಲ್ಲಿ ಏನೋ ಸತ್ಯಾಂಶವಿರುತ್ತದೆಂದು ನಂಬುವಾಗ, ಅವರು ಈ ರೀತಿ ಹೇಳಿಕೆ ಕೊಡುವುದರಿಂದ ನಮ್ಮ ಸರ್ಕಾರಕ್ಕೇ ಅಲ್ಲ, ಆ ಸಂಸ್ಥೆಗೆ ಮತ್ತು ಸಂಬಂಧಪಟ್ಟ ಕಮಿಟಿಯವರಿಗೆ ಮತ್ತು ನಮ್ಮೆಲ್ಲರಿಗೂ ಅಷ್ಟೊಂದು ಶೋಭಾಯಮಾನವಾದಂಥ ಪ್ರತಿಕ್ರಿಯೆಯೇನೂ ಆಗುವುದಿಲ್ಲ. ಸ್ಕ್ರ್ಯಾಪ್ ಐರನ್ನನ್ನು ಕೊಂಡುಕೊಂಡಿದ್ದರಲ್ಲಿ ಶೇಕಡ ಎಂಟರಷ್ಟು ಷಾರ್ಟೇಜ್ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿಕೆಯನ್ನು ಯಾವ ಆಧಾರದ ಮೇಲೆ ಕೊಟ್ಟರು ? ಅವರು ಆ ಮಾಹಿತಿಯನ್ನು ಎಲ್ಲಿಂದ ಸಂಗ್ರಹಿಸಿದ್ದಾರೋ ನನಗಂತೂ ಗೊತ್ತಾಗಲಿಲ್ಲ. ನನ್ನ ಹತ್ತಿರ 1954ನೆಯ ಇಸವಿಯ ಲೆಕ್ಕವೂ ಇದೆ. ಅದನ್ನು ನೋಡಿದರೆ ಶೇಕಡ ಒಂದು ಭಾಗಕ್ಕಿಂತಲೂ ಕಡಮೆ ಷಾರ್ಟೇಜ್ ಬಂದಿದೆ. ಈ ವರ್ಷದ ಷಾರ್ಟೇಜಿಗೆ ಸಂಬಂಧಿಸಿದ ಯಾವುದಾದರೂ ನ್ಯಾಯವಾದ ಅಂಕಿಅಂಶಗಳು ಮಾನ್ಯ ಸದಸ್ಯರ ಹತ್ತಿರ ಇದ್ದರೆ ನಾನು ಅದನ್ನು ಪರಿಶೀಲಿಸುವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶೇಕಡ ಒಂದು ಭಾಗದಷ್ಟಾದರೂ ಷಾರ್ಟೇಜ್ ಇದೆ ಎಂಬುದನ್ನು ಒಪ್ಪುತ್ತೀರೋ?

ಶ್ರೀ ಸಿ. ಎಂ. ಪೂಣಚ್ಚ.—ಒಪ್ಪುತ್ತೇವೆ. ಅದು ದಾಖಲೆಯಲ್ಲಿದೆ. ಅದನ್ನು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಅಕೌಂಟ್ಸ್‌ನಲ್ಲಿ ಏಕೆ ಷಾರ್ಟೇಜ್ ಬಂದಿದೆ ಎಂದು ಎನ್‌ಕ್ವೈರಿ ನಡೆಯುತ್ತಿದೆ.

Sri C. K. RAJAIAH SETTY.—That is only one year's report that the Hon'ble Minister has.

Sri C. M. POONACHA.—He said that it was eight per cent shortage; that is not based on facts.

ಇನ್ನು ಸೋಪ್ ವಿಷಯದಲ್ಲಿ ಕೆಲವು ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಹೇಳಿದರು. ಸೋಪಿನ ಸರಬರಾಯಿಯ ಕೆಲಸವನ್ನು ಇನ್ನು ಮುಂದೆ ಸೊಸೈಟಿಗಳಿಗೆ ಕೊಡಿ ಎಂದು ಮೊದಲಿನಿಂದಲೂ ಯಾರಾದರೂ ಸದಸ್ಯರು ಸೂಚಿಸಬಹದು ಎಂದು ನಾನು ಮನಸ್ಸಿನಲ್ಲಿ ಅಂದುಕೊಂಡಿದ್ದೆ. ಮಾನ್ಯ ಸದಸ್ಯರೆಲ್ಲರೂ

(SRI C. M. POONACHA)

ಕೊಟ್ಟ ಹೇಳಿಕೆಗಳನ್ನೆಲ್ಲಾ ನಾನು ಒಂದೊಂದಾಗಿ ಬರೆದುಕೊಂಡಿದ್ದೇನೆ. ಇಲ್ಲಿ ಯಾರೂ ಆ ವಿಷಯವನ್ನು ಹೇಳಲಿಲ್ಲ. ಆದರೆ ಸೊಸೈಟಿಗೆ ಈ ಕೆಲಸವನ್ನು ವಹಿಸಬೇಕು ಎಂದು ಆಗಿಂದಾಗ್ಗೆ ಮನವಿಗಳೇನೋ ಸರ್ಕಾರದ ಅವಗಾಹನೆಗೆ ಬರುತ್ತಿವೆ. ಮೈಸೂರು ಸಂಸ್ಥಾನದೊಳಗೆ ಸೋಪನ್ನು ಮಾರಾಟ ಮಾಡುವ ಸೊಸೈಟಿಗಳಿಗೆ ಸಪ್ಲೈ ಮಾಡಲು ಕೊಡಬಹುದು. ಸಂಸ್ಥಾನದ ಹೊರಗಡೆ ಎಂದರೆ ಪಂಜಾಬ್, ಮಂಗಳೂರು, ಮದರಾಸ್ ಮುಂತಾದ ಪ್ರದೇಶಗಳಲ್ಲಿ ಸೋಪಿಗೆ ಹೆಚ್ಚಿನ ಪ್ರಮಾಣದಲ್ಲಿ ಗಿರಾಕಿ ಇದೆ. ಅಲ್ಲಿ ಏಜೆನ್ಸಿ ಮೂಲಕವೇ ಇದನ್ನು ಮಾರಾಟ ಮಾಡುವ ಆವಶ್ಯಕತೆ ಇದೆ. ಆದರೆ ಸಂಸ್ಥಾನದಲ್ಲಿ ಸೊಸೈಟಿಗಳ ಮೂಲಕ ಸೋಪನ್ನು ಮಾರಾಟ ಮಾಡುವುದಕ್ಕೆ ನನ್ನ ಪೂರ್ಣ ಸಹಾನುಭೂತಿ ಇದೆ. ಮೊದಲು 600 ಟನ್‌ಗಳಿದ್ದುದು ಈಗ 1,500 ಟನ್‌ಗಳಷ್ಟು ಆಗಿದೆ. ಇದನ್ನು ಮಾರಾಟ ಮಾಡುವ ಹಾಗೆ ಸೇಲ್ಸ್ ಪ್ರೋಗ್ರಾಂಗಳನ್ನು ಪರ್ಫೆಕ್ಟಾಗಿ ಮಾಡಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಏಜೆನ್ಸಿಗಳ ಮೂಲಕ ಸೋಪನ್ನು ಮಾರಾಟ ಮಾಡುವುದಕ್ಕೆ ಬದಲಾಗಿ ಷೋ ರೂಮ್‌ಗಳನ್ನು ತೆರೆದು ಮಾರಾಟ ಮಾಡುವುದು ಒಳ್ಳೆಯದು ಎಂದು ನನಗೆ ತೋರುತ್ತದೆ. ಏಜೆನ್ಸಿಗಳನ್ನು ವಜಾ ಮಾಡಿ ಷೋ ರೂಮ್‌ಗಳನ್ನು ಇಡಿ. ಏಕೆಂದರೆ ನಾನು ನೋಡಿದ ಹಾಗೆ ಬೊಂಬಾಯಿ, ಹೈದರಾಬಾದಿನಲ್ಲಿ ಷೋ ರೂಮ್‌ಗಳನ್ನಿಟ್ಟಿರುವುದರಿಂದಲೇ ಸೋಪಿನ ಮಾರಾಟ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಸಿ. ಎಂ. ಪೂಣಚ್ಚ.—ಆ ಆಲೋಚನೆಯನ್ನು ನಾವೂ ಸಹ ಮಾಡಬಹುದು.

ಕೆಲವರು ಬಡ್ಜೆಟ್ಟಿನಲ್ಲಿ ಇಂಡಸ್ಟ್ರಿಯಲ್ ರಿಸರ್ಚಿಗೆ ಹಣವನ್ನೇನೂ ಒದಗಿಸಿಲ್ಲವೆಂದು ಹೇಳಿದರು. ಅದು ಬಹಳ ಮುಖ್ಯವಾದ ಅಂಶವೆಂದು ಪ್ರತಿಪಾದಿಸಿದರು. ಇಂಡಿಯ ಸರ್ಕಾರದ ನೇತೃತ್ವದಲ್ಲಿ There is a chain of laboratories established all over India relating to every possible industry, ಆದ್ದರಿಂದ ಬೇಸಿಕ್ ರಿಸರ್ಚ್ ಮಾಡುವ ಇನ್ಸ್ಟಿಟ್ಯೂಷನ್ ಅನಾವಶ್ಯಕ. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಬೇಕಾದಂಥ ರಿಸರ್ಚ್ ರಿಜಲ್ಟ್ಸನ್ನು ಇಡಿಯ ಮೈಸೂರು ಸಂಸ್ಥಾನಕ್ಕೆ ಒದಗಿಸುತ್ತಾರೆ.

ಶ್ರೀ ಎಂ. ಸಿ. ನರಸಿಂಹನ್.—ಸ್ಯಾಂಡಲ್ ಆಯಿಲ್ ರಿಸರ್ಚ್ ವಿಷಯದಲ್ಲಿ ಏನಾದರೂ ಏರ್ಪಾಡು ಮಾಡಿದ್ದೀರಾ?

SRI C. M. POONACHA.—Research could be conducted as to the utility of it—how sandal oil could be used for different things, not for the production of sandal oil. It is only extraction and distillation. I do not think any research is needed there.

SRI C. K. RAJAIAH SETTY.—To extract the oil fully, some research is needed.

SRI C. M. POONACHA.—There is no fundamental problem as such in sandal oil distillation. I think my friend will agree to that.

ಇನ್ನು ಮಾನ್ಯ ಶ್ರೀ ಕೆಂಚಪ್ಪನವರು ಅನೇಕ ವಿಷಯಗಳನ್ನು ಪ್ರತಿಪಾದಿಸಿದರು. ನಾನು ಅವರು ಹೇಳಿದ ವಿಷಯಗಳನ್ನು ಬಹಳ ಎಚ್ಚರದಿಂದ ತಿಳಿದುಕೊಳ್ಳಬೇಕೆಂದು ಪ್ರಯತ್ನಪಟ್ಟೆ. ಒಟ್ಟಿನಲ್ಲಿ ಅವರು ಹೇಳಿದ ಅಂಶಗಳನ್ನು ಗ್ರಹಿಸಿ ದಾಖಲೆ ಮಾಡಿಕೊಳ್ಳುವುದಕ್ಕೆ ನನಗೆ ಅಸಾಧ್ಯವಾಯಿತು. ನಾನು ಎಷ್ಟೋ ಪ್ರಯತ್ನಪಟ್ಟರೂ ಕೂಡ ಅವರು ಹೇಳಿದ ಯಾವ ಅಂಶದ ಮೇಲೆ ಉತ್ತರ ಕೊಡಬೇಕೆಂದು ಒಂದು ಪಾಯಿಂಟನ್ನೂ ದಾಖಲೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತಾವು ಇಲ್ಲಿಯೇ ಕುಳಿತಿದ್ದರೂ ಕೂಡ ನಮ್ಮ ಲೀಡರ್ ಹೇಳಿದ ಅಂಶಗಳಲ್ಲಿ ಏನೂ ಗೊತ್ತಾಗಲಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಸಿ. ಎಂ. ಪೂಣಚ್ಚ.—ನನ್ನ ಹೇಳಿಕೆಯನ್ನು ಸ್ವಲ್ಪ ನಿಧಾನವಾಗಿ ಕೇಳಬೇಕು. ಅವರು ಹೇಳಿದ್ದು ನನಗೆ ಗೊತ್ತಾಗಲಿಲ್ಲವೆಂದು ನಾನು ಹೇಳಲಿಲ್ಲ. ನಾನು ಹೇಳಿದ್ದು ಅವರು ಹೇಳಿದ ಯಾವ ಅಂಶಗಳ ಮೇಲೆ ಉತ್ತರ ಕೊಡಬೇಕು ಎಂಬುದು ಗೊತ್ತಾಗಲಿಲ್ಲ ಎಂದು. ಮಾನ್ಯ ಸದಸ್ಯರು ಆತುರಪಡದೆ ನಿಧಾನವಾಗಿ ನನ್ನ ಹೇಳಿಕೆಯನ್ನು ಲಾಲಿಸಬೇಕು. ಮಾನ್ಯ ಸದಸ್ಯರಿಗೆ ಇನ್ನೂ ಚೆನ್ನಾಗಿ ತಿಳಿಯಬೇಕಾದರೆ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಒಂದು ಪದ್ಮಪತ್ರದ ಮೇಲೆ ನೀರನ್ನು ಹಾಕಿದರೆ ಯಾವ ರೀತಿ ನೀರಿಗೂ ಪದ್ಮಪತ್ರಕ್ಕೂ ಸಂಬಂಧವಿಲ್ಲವೋ ಆ ರೀತಿ ಅವರು ಹೇಳಿದ ಅಂಶಗಳು ನಿರ್ಲಿಪ್ತತೆಯಿಂದ ಕೂಡಿದ್ದವು ಎಂದು ಇಲ್ಲಿ ತಿಳಿಸಬೇಕಾಗಿದೆ. ಆದರೆ ಈಬಗ್ಗೆ ಹೆಚ್ಚಿನ ವೇಳೆ ತೆಗೆದುಕೊಳ್ಳಬೇಕೆಂಬ ಅಪೇಕ್ಷೆ ನನಗಿಲ್ಲ. ಅಂತೂ ಮಾನ್ಯ ಸದಸ್ಯರು ಹೇಳಿರುವ ಅಂಶಗಳಿಗೆ ಸರ್ಕಾರದವರು ತಕ್ಕ ಗಮನ ಕೊಡುತ್ತಾರೆಂಬ ಭರವಸೆಯನ್ನು ಕೊಡುತ್ತೇನೆ. ಇನ್ನು ಮಂಡ್ಯ ಸಕ್ಕರೆ ಕಾರ್ಖಾನೆಯ ವಿಷಯ—ಅಲ್ಲಿ ಕ್ರಷಿಂಗ್ ಕೆಪಾಸಿಟಿಯನ್ನು ಹೆಚ್ಚು ಮಾಡಬೇಕೆಂಬ ವಿಷಯದಲ್ಲಿ ಸರ್ಕಾರದವರು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನವರಿಂದ ವರದಿಯನ್ನು ನಿರೀಕ್ಷಣೆ ಮಾಡುತ್ತಿದ್ದಾರೆ. ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನವರಿಂದ ವರದಿ ಬಂದ ಕೂಡಲೆ ಕ್ರಷಿಂಗ್ ಕೆಪಾಸಿಟಿಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆಂದು ಭರವಸೆಯನ್ನು ಕೊಡಬಲ್ಲೆ.

ಡಾ|| ಟಿ. ಪಾರ್ಥಸಾರಥಿ (ಮಲ್ಲೇಶ್ವರಂ).—ಸರ್ಕಾರದ ಮಂಡ್ಯ ಸಕ್ಕರೆಯ ಕಾರ್ಖಾನೆಯಆಡಳಿತದಲ್ಲಿ ಬಹಳ ವ್ಯತ್ಯಾಸ ಬಂದಿದೆ. ಆದ್ದರಿಂದ ಈ ಕಾರ್ಖಾನೆಯ ಆಡಳಿತದ ವಿಷಯದಲ್ಲಿ ಅಪ್ಪಾಜಿಗೌಡರ ವರದಿಯ ಮೇಲೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಾ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯವನ್ನು ಸರ್ಕಾರದವರು ಪರಿಪೂರ್ಣವಾಗಿ ಪರಿಶೀಲನೆ ಮಾಡಿದ ಮೇಲೆ ಅವರ ವರದಿಯಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಅವಶ್ಯಕತೆ ಕಂಡುಬರಲಿಲ್ಲ.ಆದ್ದರಿಂದ ಅದನ್ನು ಅಲ್ಲಿಗೆ ಕೈಬಿಡಲಾಗಿದೆ ಎಂದು ಹೇಳುತ್ತೇನೆ.

ಶ್ರೀ ಜಿ. ವೆಂಕಟೇಗೌಡ.—ಕೋಲಾರ ಗೋಲ್ಡ್ ಫೀಲ್ಡಿಗೆ ಅಟಾನಮಸ್ ಕಾರ್ಪೋರೇಷನ್ ಸ್ಥಾಪನೆ ಮಾಡುವ ವಿಚಾರವನ್ನು ಸರ್ಕಾರದವರು ಯೋಚನೆ ಮಾಡುತ್ತಾರೆಯೇ?

ಶ್ರೀ ಸಿ. ಎಂ. ಪೂಣಚ್ಚ.—ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ ಅದು ಬಹಳ ಗಹನ ವಿಚಾರ. ಅದರ ವಿಚಾರವಾಗಿ ಇನ್ನೂ ನಾವು ತೀರ್ಮಾನಕ್ಕೆ ಬರಲು ಸಾಧ್ಯ ಆಗಿಲ್ಲ. ಅದನ್ನು ಇತ್ತೀಚೆಗೆ ಸರ್ಕಾರದವರು ತೆಗೆದುಕೊಂಡಿದ್ದಾರೆ. ಕೆಲವೊಂದು ಕಾರ್ಯಾಚರಣೆ ಮಾಡುತ್ತಿದ್ದೇವೆ. ಸಾಕಷ್ಟು ಡೆವಲಪ್

ಮಾಡಲು ಸದ್ಯದಲ್ಲಿ ಸಾಕಷ್ಟು ಹಣ ಒದಗಿಸಿ, ಅನಂತರ ಕಾರ್ಪೊರೇಷನ್ ಮಾಡೋಣ ಎಂದಿದೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಉತ್ತರ ಕರ್ಣಾಟಕದ ವಿಚಾರಕ್ಕೆ ಅಷ್ಟು ಲಕ್ಷ್ಯ ಕೊಟ್ಟಿಲ್ಲ ಎಂದು ಟೀಕೆ ಮಾಡಿದ್ದಾರೆ. ಅದಕ್ಕೆ ಉತ್ತರ ಹೇಳ ಲಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ಹೇಳಬೇಕೆಂದಿದ್ದೆ. ಮೈಸೂರು ಪ್ರಾಂತ್ಯಕ್ಕೆ ಬಂದಿರುವ ಧಾರವಾಡ, ಬಿಜಾಪುರ, ಕಾರ್ವಾರ ಜಿಲ್ಲೆಗಳಲ್ಲಿ ಹೆಚ್ಚಿನ ಉದ್ಯಮ ಗಳನ್ನು ಪ್ರಾರಂಭಮಾಡಬೇಕೆಂಬ ವಿಚಾರವನ್ನು ಸರ್ಕಾರದವರು ಬಹಳ ಮುತವರ್ಜಿಯಿಂದ ಆಲೋಚನೆ ಮಾಡುತ್ತಿದ್ದಾರೆ. ಎರಡು ಸ್ಪಿನ್ನಿಂಗ್ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಕೊಟ್ಟು 10 ಸಾವಿರ ರೂಪಾಯಿ ಹಣ ಒದಗಿ ಸಿರುವುದಲ್ಲದೆ ಇಂಡಿಯಾ ಸರ್ಕಾರದ ಕಾರ್ಪೊರೇ ಷನ್‌ನವರಿಂದ ಹಣ ಕೊಡುವುದಕ್ಕೆ ನಾವು ಜವಾಬ್ದಾರಿ ವಹಿಸಿದ್ದೇವೆ. ಈಗ ಭದ್ರಾವತಿ ಕಬ್ಬಿಣದ ಕಾರ್ಖಾನೆ ಕೇಂದ್ರ ಸರ್ಕಾರದಿಂದ ಬೆಳೆಯುತ್ತಿದೆ, ಹಾಗೆಯೇ ಉತ್ತರ ಕರ್ಣಾಟಕದ ಗೋಕಾಕಿನಲ್ಲಿ ಒಂದು ಸಿಮೆಂಟ್ ಕಾರ್ಖಾನೆ ಹಾಕಬೇಕೆಂದು ಪರಿಶೀಲನೆ ನಡೆ ಯುತ್ತಿದೆ. ಸಂಕೇಶ್ವರದ ಸಕ್ಕರೆಯ ಕಾರ್ಖಾನೆಗೆ 12 ಲಕ್ಷ ಬಂಡವಾಳ ಕೊಟ್ಟು ಅದನ್ನು ಅಭಿವೃದ್ಧಿಗೆ ತರುವ ಏರ್ಪಾಟು ಮಾಡುತ್ತಿದ್ದೇವೆ, ಅದೂ ಅಲ್ಲದೆ ಅಲ್ಯೂಮಿನಿಯಂ ಕಾರ್ಖಾನೆ ಸ್ಥಾಪನೆ ಮಾಡಬೇಕು ಎನ್ನುವ ವಿಷಯದಲ್ಲಿ ಸಾಕಷ್ಟು ಇಂಡಿಯಾ ಸರ್ಕಾರಕ್ಕೆ ಪರಿಶೀಲನೆ ಒಪ್ಪಿಸಿ ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಬರಬೇಕಾದಂಥ ಅಲ್ಯೂಮಿ ನಿಯಂ ಕಾರ್ಖಾನೆಯನ್ನು ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಾದರೂ ಬರಲು ನಮಗೆ ಭರ ವಸೆಯನ್ನು ಕೊಡುವುದಕ್ಕೆ ಒತ್ತಾಯ ನಡೆಸುತ್ತಿದ್ದೇವೆ. ಈ ಪ್ರಕಾರವಾಗಿ ಆ ಭಾಗದಲ್ಲಿ ಮತ್ತು ಮಿಕ್ಕ ಎಲ್ಲಾ ಯಾವ ಭಾಗಗಳಲ್ಲಿಯೂ ಕೂಡ ಉದ್ಯಮಗಳನ್ನು, ಕಾರ್ಖಾನೆಗಳನ್ನು ಬೆಳೆಸುವಂತಹ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ನಾವು ಖಂಡಿತ ಸಿದ್ಧರಿದ್ದೇವೆ. ಅದರಂತೆ ನಡೆಸುವುದಕ್ಕೆ ಸಾಕಷ್ಟು ಉತ್ಸಾಹವನ್ನು, ಪರಿಶ್ರಮ ವನ್ನು, ಪರಿಣತೆಯನ್ನು ಸಂಪಾದಿಸಿದಂಥ ಖಾಸಗಿ ಸಂಸ್ಥೆ ಮತ್ತು ಖಾಸಗಿ ಜನ ಮುಂದೆ ಬಂದರೆ ಅಂಥ ಕಾರ್ಯ ಮಾಡಬಹುದು. ಸರ್ಕಾರದ ಮುಖಾಂತರ ನೇರವಾಗಿ ಪಡೆಯುವ ಕಾರ್ಯ ಈಗ ಸದ್ಯಕ್ಕೆ ಇಲ್ಲ. Either they will be aided institutions or assisted institutions. ಈ ಪ್ರಕಾರವಾಗಿ Private sector ನಿಂದ ಯಾವುದೇ ತರಹ ಸಲಹೆ ಬಂದರೆ ಅದಕ್ಕೆ ಬೆಂಬಲಕೊಟ್ಟು ಮುಂದುವರಿಸುವುದಕ್ಕೆ ಏರ್ಪಾಟು ಇಟ್ಟುಕೊಂಡು ಈಗಾಗಲೇ ಎಷ್ಟೋ ವಿಷಯಗಳಲ್ಲಿ ನಾವು ಸಹಾಯವನ್ನು ಕೊಟ್ಟಿ ದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಮಂತ್ರಿ ಗಳು ಪೂಜ್ಯ ಪಿತಾಮಹರಾದ ಸರ್. ಎಂ. ವಿಶ್ವೇಶ್ವ ರಯ್ಯನವರ ಸಲಹೆಯನ್ನು ಸಾಧಾರಣವಾಗಿ ನಡೆಸಿ ಕೊಂಡು ಹೋಗಬೇಕು ಎಂದು ಹೇಳಿದರು. ಹೇಳು ವಾಗ ಸರ್. ಎಂ. ವಿಶ್ವೇಶ್ವರಯ್ಯನವರು ಚನ್ನಪಟ್ಟಣ ದಲ್ಲಿ ಒಂದು ಬಿಗ್ ಇಂಡಸ್ಟ್ರಿ ಸ್ಟಾರ್ಟ್ ಮಾಡಬೇಕು. ಅದಕ್ಕಾಗಿ ಅಲ್ಲಿಗೆ ಎಕ್ಸ್‌ಪರ್ಟ್ ಕಳುಹಿಸಿ; ಏನು ಸರಿ ಹೋಗುತ್ತದೆ ಯಾವ ತರಹ ಇಂಡಸ್ಟ್ರಿ ಸ್ಟಾರ್ಟ್ ಮಾಡ ಬಹುದು ಎಂದು ಎಗ್ಸಾಮಿನ್ ಮಾಡಿ ಎಂದು ಹೇಳಿದ್ದ ರಲ್ಲಾ, ಆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ವಿಷಯದಲ್ಲಿ ಏನು ಪ್ರಯತ್ನವನ್ನು ಕೈಗೊಂಡಿದ್ದೀರಿ? ಇನ್ನೊಂದು ವಿಚಾರದಲ್ಲಿ ನನಗೆ ಕ್ಲಾರಿಫಿಕೇಷನ್ ಬೇಕು. ಅದು ಪ್ರಿವಿಪರ್ಸ್ ಮತ್ತು ಎಲ್‌ಐಎನ್‌ಸಸ್ ವಿಚಾರ.

Sri T. MARIAPPA.—We refuse to answer such questions. The debate is over and now he raises a new point.

Mr. SPEAKER.—No new point can be raised, only points relating to Industries may be replied.

ಶ್ರೀ ಸಿ. ಎಂ. ಪೂಣಚ್ಚ.—ಚನ್ನಪಟ್ಟಣದಲ್ಲಿ ಯಾವು ದಾದರೊಂದು ದೊಡ್ಡ ಉದ್ಯಮವನ್ನು ಪ್ರಾರಂಭ ಮಾಡಬೇಕು ಎಂದು ಸೂಚನೆ ಇದೆ. ಆದರೆ ಯಾವ ಉದ್ಯಮವನ್ನು ಸ್ಥಾಪನೆಮಾಡಬೇಕೆಂಬ ವಿಚಾರವಾಗಿ ನಿರ್ದಿಷ್ಟವಾದ ಸಲಹೆ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಕಚ್ಚಾಮಾಲುಗಳು ಯಾವುದು ಸಿಕ್ಕುತ್ತವೆ ಮುಂತಾದ ಮಾಹಿತಿ ಸಂಗ್ರಹ ಮಾಡದೆ ಯಾವುದಾದರೂ ಒಂದು ಕೈಗಾರಿಕೆ ಸ್ಥಾಪನೆ ಮಾಡಿ ಎಂದರೆ ಆ ರೀತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಯಾವುದಾದರೂ ಕೈಗಾರಿಕೆ ಸ್ಥಾಪನೆ ಮಾಡುವ ಸಂಭವ ಇದೆಯೇ ಎಂಬುದನ್ನು ನಾವು ಆಲೋಚನ ಮಾಡುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಬಳ್ಳಾರಿಯಲ್ಲಿ ಟೆಕ್ಸ್ ಟೈಲ್ ಮಿಲ್ ಸ್ಥಾಪನೆ ಮಾಡುವುದಕ್ಕೆ ಲೈಸನ್ಸ್ ಕೊಡುವ ವಿಷಯದಲ್ಲಿ ಏನು ಆಲೋಚನೆ ಮಾಡಿ ದ್ದೀರಿ?

Sri C. M. POONACHA.—This seems to be a new point. If private parties come forward, we are certainly prepared to assist them.

ಶ್ರೀ ಕೆ. ಪಿ. ಗದಗ್.—ಸಂಸ್ಥಾನಾದ್ಯಂತ ಯೂನಿ ಫಾರಂ ಎಲೆಕ್ಟ್ರಿಕ್ ರೇಟ್ ಇದುವರೆಗೂ ಏಕೆ ಜಾರಿಗೆ ಬಂದಿಲ್ಲ?

Mr. SPEAKER.—That is a new point. It may be discussed in the Chambers.

Sri V. P. DEENADAYALU NAIDU.—I only put two questions for the Minister to answer. One is about the financial assistance to educated unemployed persons to start industries of their own. Loans were granted to 115 applicants. . . . .

Mr. SPEAKER.—Is the Hon'ble Member reading a report? Any clarification that has to be sought should be in one word. If the Hon'ble Member goes on putting in so many words, I cannot allow that.

Sri V. P. DEENADAYALU NAIDU.—The total number of applications received under the scheme is 400

(SRI V. P. DEENADAYALU NAIDU)

and the amount allotted, *i.e.*, Rs. 50,000 for educated unemployed, only Rs. 4,500 was utilised, by four applicants. What is the difficulty that is experienced by the Government I would like to be enlightened ?

Sri C. M. POONACHA.—It is entirely a new point that has been raised. I will have to examine it.

Sri V. P. DEENADAYALU NAIDU.—The annual income from industries per head in U. K. is Rs. 107 and Rs. 110 in America. Let me know what it is in Mysore because Mysore is an industrialised State. Mysore, as it were, is a nation within a nation.

Mr. SPEAKER.—It does not apply to the new State. It is not a nation within a nation. It is a State within a nation. With regard to industrial potential, whatever industry is started here is part and parcel of the country.

ಶ್ರೀ ಸಿ. ಎಂ. ಪೂಣಚ್ಚ.—ನಮ್ಮ ಸಂಸ್ಥಾನದಲ್ಲಿ ಕೆಲವೊಂದು ಸಮಸ್ಯೆಗಳಿವೆ. ಅವನ್ನು ಸೂಕ್ಷ್ಮವಾಗಿ ಹೇಳುವುದಾದರೆ ನಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟ ಕೆಲವು ಗೃಹ ಕೈಗಾರಿಕೆಗಳು, ಏನಿವೆಯೋ ಅವುಗಳ ವಿಚಾರದಲ್ಲಿ ಕೆಲವು ಎಡರು ತೊಡರುಗಳಿವೆ. ಮುಖ್ಯವಾಗಿ ರೇಷ್ಮೆ ಕೈಗಾರಿಕೆಯಲ್ಲಿ ಬಹಳ ಎಡರು ತೊಡರುಗಳಿವೆ. ಅವನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಸ್ಥಾಪನೆಯಾದ ಕೆಲವು ಉದ್ಯಮಗಳಲ್ಲಿ ಸರಿಯಾದ ರೀತಿಯಲ್ಲಿ ಪ್ರಗತಿ ಸಾಧಿಸಲು ಅವಕಾಶವಿದ್ದರೂ ಕೂಡ ಬೆಂಕಿಕಡ್ಡಿ ಕೈಗಾರಿಕೆ, ಆಯಿಲ್ ಇಂಡಸ್ಟ್ರೀಸ್, ಟ್ಯಾನರೀಸ್ ಮತ್ತು ಕೈಮಗ್ಗಗಳು. ಇವುಗಳ ವಿಚಾರ ದಲ್ಲಿ ಇವೊತ್ತೂ ಕೂಡ ನಾನಾ ರೀತಿಯಲ್ಲಿ ಒಂದೊಂದು ವಿಧಾನದ ಕಷ್ಟವನ್ನನುಭವಿಸುತ್ತಿದ್ದೇವೆ. ಇಂಥ ಉದ್ಯಮಗಳಲ್ಲಿರುವ ಕಷ್ಟವನ್ನು ನಿವಾರಣೆ ಮಾಡಿ ಸಾಕಷ್ಟು ಸಹಾಯ ಕೊಟ್ಟು ಬೆಳೆಸಬೇಕೆಂಬ ದೃಷ್ಟಿಯಿಂದ ಸರ್ಕಾರ ಕೆಲವೊಂದು ಕಾರ್ಯಕ್ರಮ ಹಾಕಿಕೊಂಡಿದೆ. ಅವುಗಳನ್ನು ಈ ವರ್ಷದ ಅವಧಿಯಲ್ಲಿ ಪೂರೈಸಬೇಕೆಂಬುದೇ ನಮ್ಮ ಉದ್ದೇಶ. ಅದನ್ನು ಪೂರೈಸಿ ಒಂದು ರೀತಿಯಲ್ಲಿ ಚಿಕ್ಕಪುಟ್ಟ ಕೈಗಾರಿಕೆಗಳೂ ಮತ್ತು ಈಗ ಸ್ಥಾಪನೆಯಾಗಿರುವ ಕೈಗಾರಿಕೆಗಳೂ ಚೆನ್ನಾಗಿ ಯಶಸ್ವಿಯಾಗಿ ನಡೆಯಲು ಒಂದು ಅನುಕೂಲ ದೊರೆತೀತು ಎಂದು ಸರ್ಕಾರದ ನಿರೀಕ್ಷೆಯಿದೆ. ಈ ಕೆಲವು ಮಾತುಗಳನ್ನು ನಾನು ಹೇಳಿ ಇವೊತ್ತು ಸಭೆಯ ಮುಂದೆ ಮಂಡಿಸಿರುವಂಥ ಬೇಡಿಕೆಯನ್ನು ಸಭೆ ಒಪ್ಪಿ ಮಂಜೂರು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

Demand No. 27—Industries and Supplies.

43. *Industries and Supplies.*

Mr. SPEAKER.—The question is:

"That a sum not exceeding Rs. 16,06,76,500 be granted to the Government to defray the charges which will come in course of payment during the year ending 31st day of March 1958, in respect of 'Industries and Supplies."

The motion was adopted.

Demand No. 49—Industrial Development.

72. *Capital Outlay on Industrial Development.*

Mr. SPEAKER.—The question is:

"That a sum not exceeding Rs. 4,92,40,500 be granted to the Government to defray the charges which will come in course of payment during the year ending 31st day of March 1958, in respect of 'Capital Outlay on Industrial Development'."

The motion was adopted.

Demand No. 52—Electricity Schemes.

81-*A*—*Capital Outlay on Electricity Schemes.*

Mr. SPEAKER.—The question is;

"That a sum not exceeding Rs. 14,35,35,000 be granted to the Government to defray the charges which will come in course of payment during the year ending 31st day of March 1958, in respect of 'Capital Outlay on Electricity Schemes'."

The motion was adopted.

Demand No. 43—Working Expenses (Electricity Schemes).

XLI—Receipts from Electricity Schemes.

Mr. SPEAKER.—The question is:

"That a sum not exceeding Rs. 2,72,99,700 be granted to the Government to defray the charges which will come in course of payment during the year ending 31st day of March 1958, in respects of 'Receipts from Electricity Schemes—Working Expenses'."

The motion was adopted.

Demand No. 3—Forest.

20—*Forest.*

Mr. SPEAKER.—The question is:

"That a sum not exceeding Rs. 1,49,74,000 be granted to the Government to defray the charges which will come in course of payment during the year ending 31st day of March 1958, in respect of 'Forest'."

The motion was adopted.

Demand No. 6—Registration.

11—*Registration.*

Mr. SPEAKER.—The question is:

"That a sum not exceeding Rs. 13,57,000 be granted to the Government to defray the charges which will come in course of payment during the year ending 31st day of March 1958, in respect of 'Registration'."

The motion was adopted.

Demand No. 16—Ports and Pilotage.

30—*Ports and Pilotage.*

Mr. SPEAKER.—The question is:

"That a sum not exceeding Rs. 2,03,000 be granted to the Government to defray the charges which will come in course of payment during the year ending 31st day of March 1958, in respect of 'Ports and Pilotage'."

The motion was adopted.

Demand No. 33—Political Pensions.

54—*A Territorial and Politica Pensions.*

Mr. SPEAKER.—The question is:

"That a sum not exceeding Rs. 2,70,000 be granted to the Government to defray the charges which will come in course of payment during the year ending 31st day of March 1958, in respect of 'Territorial and Political Pensions'."

The motion was adopted.

Demand No. 34—Privy Purses and Allowance of Indian Rulers.

54—B. *Privy Purses and Allowances of Indian Rulers.*

Mr. SPEAKER.—The question is:

"That a sum not exceeding Rs. 39,000 be granted to the Government to defray the charges which will come in course of payment during the yearr ending 31st day of March 1958, in respect of 'Privy Purses and Allowances of Indian Rulers'."

The motion was adopted.

Demand No. 35 Superannuation Allowances and Pensions.

55—*Superannuation Allowances and Pensions.*

Mr. SPEAKER.—The question is:

"That a sum not exceeding Rs. 1,57,70,000 be granted to the Government to defray the charges which will come in course of payment during the year ending 31st day of March 1958, in respect of 'Superannuation Allowances and Pensions'."

The motion was adopted.

Demand No. 36—Commutation of Pensions.

55—A. *Commutation of Pension Financed from Ordinary Revenues.*

Mr. SPEAKER.—The question is:

"That a sum not exceeding Rs. 4,70,000 be granted to the Government to defray the charges which will come in course of payment during the year ending 31st day of March 1958 in respect of 'Commutation of Pensions'."

The motion was adopted.

Demand No. 37—Stationery and Printing.

56—*Stationery and Printing.*

Mr. SPEAKER.—The question is:

"That a sum not exceeding Rs. 52,06,000 be granted to the Government to defray the charges which will come in course of payment during the year ending 31st day of March 1958, in respect of "Stationery and Printing'."

The motion was adopted.

Demand No. 38—Miscellaneous.

57—*Miscellaneous.*

Mr. SPEAKER.—The question is:

"That a sum not exceeding Rs. 1,93,00,100 be granted to the Government to defray the charges which will come in course of payment during the year ending 31st day of March 1958, in respect of 'Miscellaneous'."

The motion was adopted.

Demand No. 39—Extraordinary Charges.

63—*Extraordinary Charges.*

Mr. SPEAKER.—The question is:

"That a sum not exceeding Rs. 10,000 be granted to the Government to defray the charges which will come in course of payment during the year ending 31st day of March 1958, in respect of 'Extraordinary Charges'."

The motion was adopted.

Demand No. 41—Working Expenses (Forest).

X—Forest—D—(1) Wood Preservation Plant—Working Expenses and Seigniorage.

Mr. SPEAKER.—The question is:

"That a sum not exceeding Rs. 5,02,000 be granted to the Government to defray the charges which will come in course of payment during the year ending 31st day of March 1958, in respect 'X. Forest—d. (1) Wood Preservation Plant—Working Expenses and Seigniorage'."

The motion was adopted.

Demand No. 44—Road and Water Transport Schemes.

XLVI-A Receipts from Road and Water Transport Schemes—Working Expenses.

Mr. SPEAKER.—The question is:

"That a sum not exceeding Rs. 3,63, 38,000 be granted to the Government to defray the charges which will come in course of payment during the year ending 31st day of March 1958, in respect of 'Receipts from Road Transport Schemes—Working Expenses'."

The motion was adopted.

Demand No. 45—Compensation to Land-holders, on the Abolition of Zamindari System.

65.—*Payment of Compensation to Land-holders, Etc., on the Abolition of Zamindari System.*

Mr. SPEAKER.—The question is:

"That a sum not exceeding Rs. 20,00,000 be granted to the Government to defray the charges

which will come in course of payment during the year ending 31st day of March 1958, in respect of 'Payment of Compensation to land-holders, etc., on the abolition of Zamindari System'."

The motion was adopted.

Demand No. 55—Commutation Value of Pensions.

83.—*Payments of Commuted Value of Pensions.*

Mr. SPEAKER.—The question is:

"That a sum not exceeding Rs. 5,15,000 be granted to the Government to defray the charges which will come in course of payment during the year ending 31st day of March 1958, in respect of 'Commutation of Pensions'."

The motion was adopted.

Demand No. 56—Payment to Retrenched Personnel.

85.—*Payments to Retrenched Personnel.*

Mr. SPEAKER.—The question is:

"That a sum not exceeding Rs. 20,000 be granted to the Government to defray the charges which will come in course of payment during the year ending 31st day of March 1958, in respect of 'Payments to Retrenched Personnel'."

The motion was adopted.

Demand No. 57—Schemes Connected with State Schemes of Government Trading.

85-A.—*Capital Outlay on State Schemes of Government Trading.*

Mr. SPEAKER.—The question is:

"That a sum not exceeding Rs. 54,59,300 be granted to the Government to defray the charges which will come in course of payment during the year ending 31st day of March 1958, in respect of 'Capital Outlay on Schemes of State Trading'."

The motion was adopted.

Demand No. 57-A—Appropriation to the Contingency Fund.

85-B.—*Appropriation to the Contingency Fund.*

Mr. SPEAKER.—The question is:

"That a sum not exceeding Rs. 1,00,00,000 be granted to the Government to defray the charges which will come in course of payment during the year ending 31st day of March 1958, in respect of 'Appropriation to the Contingency Fund'."

The motion was adopted.

Demand No. 58—Loans and Advances.

P.—*Loans and Advances by the State Government.*

Mr. SPEAKER.—The question is:

"That a sum not exceeding Rs. 5,07,00,000 be granted to the Government to defray the charges which will come in course of payment during the year ending 31st day of March 1958, in respect of 'Loans and Advances by the State Government'."

The motion was adpoted.

Mr. SPEAKER.—Now we shall take up Bills.

MYSORE REVENUE APPELLATE TRIBUNAL BILL, 1957.

Motion to consider.

*Sri M. P. PATIL (Minister for Revenue).—Sir, I move:

"That the Mysore Revenue Appellate Tribunal Bill, 1957 be taken into consideration."

The object of moving this Bill has been given in the Statement of Objects and Reasons. When the new Mysore